ಸಂಪುಟ: 06 ಸಂಚಿಕೆ: 31 ಪುಟಗಳು: 08 ಬುಧವಾರ 15 ಏಪ್ರಿಲ್ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ನಿಮ್ಮನ್ನು ದೈಹಿಕವಾಗಿ, ಮಾನಸಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಕುಂಠಿತಗೊಳಿಸುವ ಯಾವುದೇ ಸಾಧನವನ್ನು ವಿಷವೆಂದು ದೂರವಿಡಿ.

# ಹುಲ್ಲುಕಡ್ಡಿಗೂ ಮಹತ್ವವಿದೆ! ಇಲ್ಲಿ ಯಾರೂ ಮೇಲಲ್ಲ, ಕೀಳಲ್ಲ

## ● ಕಾಂಗ್ರೆಸ್ ಕಾರ್ಯಕರ್ತರಿಗೆ ಮಹತ್ವದ ಸಂದೇಶ ಕೊಟ್ಟ ಡಿಕೆಶಿ

• ಉದಯವಾಹಿನಿ, ಬೆಂಗಳೂರು

ಹುಲ್ಲುಕಡ್ಡಿಗೂ ಮಹತ್ವವಿದೆ, ಇಲ್ಲಿ ಯಾರೂ ಮೇಲಲ್ಲ, ಕೀಳಲ್ಲ ಎಂದು ಕಾಂಗ್ರೆಸ್ ಕಾರ್ಯಕರ್ತರಿಗೆ ಡಿಸಿಎಂ ಡಿಕೆ ಶಿವಕುಮಾರ್ ಮಹತ್ವದ ಸಂದೇಶ ಕೊಟ್ಟಿದ್ದಾರೆ. ಕೆಪಿಸಿಸಿ ಕಚೇರಿಯ ಭಾರತ್ ಜೋಡೋ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೆಳಗೆ ಕುಳಿತಿರುವವನಿಗೆ, ಹೊರಗೆ, ಒಳಗೆ ಇರುವವನಿಗೂ ಒಂದಲ್ಲ ಒಂದು ದಿನ ಅವಕಾಶವಿದೆ ಎಂದು ಮಾರ್ಮಿಕವಾಗಿ ಹೇಳಿದರು.

''ವೇದಿಕೆಯಲ್ಲಿ ಕುಳಿತುಕೊಂಡವರೆಲ್ಲಾ ನಾಯಕರು ಎಂದು ಭಾವಿಸಬೇಡಿ. ವೇದಿಕೆ ಕೆಳಗೆ ಇರುವವರು ಇದ್ದರೆ ಮಾತ್ರ ವೇದಿಕೆ ಮೇಲಿರುವವರು ನಾಯಕರಾಗಲು ಸಾಧ್ಯ. ಜೊತೆಗೆ ನಾನು ನಾಯಕರು, ಕಾರ್ಯಕರ್ತರು ಎಂದು ವಿಭಾಗಿಸಿ ಯಾರನ್ನೂ ನೋಡುವುದಿಲ್ಲ'' ಎಂದರು.




**ಬಿಜೆಪಿ ಸರ್ಕಾರವೂ ಮಾಡದ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡಿದೆ**

**ಡಿಸಿಎಂ ಡಿಕೆಶಿ ಅಭಯ**

ನೀವು ಕಡಿಮೆ ಎಂದು ಯಾರೂ ಭಾವಿಸಬೇಡಿ. ಏನಾನುಮಂ ಮಾಡು ಕೈಗೆ ದೊರೆತುಜ್ಜುಗವ, ನಾನೇನು ಹುಲುಕಡ್ಡಿಯೆಂಬ ನುಡಿ ಬೇಡ. ಹೀನಮಾವುದುಮಿಲ್ಲ ಜಗದ ಗುಡಿಯೊಳಗದಿ ತಾಣ ನಿನಗಿಹುದಿಲ್ಲಿ ಮಂಕುತಿಮ್ಮ ಎಂದು ಡಿವಿಜಿ ಹೇಳಿದ್ದಾರೆ ಎಂದು ಉಲ್ಲೇಖಿಸಿದರು. ಹುಲ್ಲುಕಡ್ಡಿಗೂ ಮಹತ್ವವಿದೆ. ಇಲ್ಲಿ ಯಾರೂ ಮೇಲಲ್ಲ, ಕೀಳಲ್ಲ. ಕೆಳಗೆ ಕುಳಿತಿರುವವನಿಗೆ, ಹೊರಗೆ ಕಾಯುತ್ತಾ ಇರುವವನಿಗೂ, ಒಳಗೆ ಇರುವವನಿಗೂ ಒಂದಲ್ಲ ಒಂದು ದಿನ ಅವಕಾಶವಿದೆ. ಯಾವ ಕಾರ್ಯಕರ್ತರನ್ನೂ ಕೀಳಾಗಿ ಕಾಣುವುದಕ್ಕೆ ಆಸ್ಪದವಿಲ್ಲ. ಅದಕ್ಕೆ ಎಲ್ಲಾ ವರ್ಗದವರಿಗೂ ಮಾತನಾಡಲು ಅವಕಾಶ ನೀಡಲಾಯಿತು ಎಂದು ವಿವರಿಸಿದರು.

ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಮುಂದಾಳತ್ವದಲ್ಲಿ ರಚನೆಯಾದ ಸಂವಿಧಾನವೇ ನಮ್ಮ ದೇಶದ ಭಗವದ್ಗೀತೆ, ಕುರಾನ್, ಬೈಬಲ್ ಎಂದು ನಾವು ಪೂಜಿಸಿ ಬದುಕುತ್ತಿದ್ದೇವೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಕೊಟ್ಟಿರುವ ಸಂವಿಧಾನವೇ ನಮ್ಮ ಈ ಪ್ರಜಾಪ್ರಭುತ್ವ ದೇಶಕ್ಕೆ ನೀಡಿರುವ ಬೆಳಕು. ಅಂಬೇಡ್ಕರ್ ಅವರು ಅಸಮಾನತೆ ನಿವಾರಣೆಗೆ, ಭೇದ ಭಾವ ಹೋಗಲಾಡಿಸಲು ಶ್ರಮಪಟ್ಟವರು ಎಂದು ಬಣ್ಣಿಸಿದರು. ''ಅಂಬೇಡ್ಕರ್ ಅವರು ತಮ್ಮದೇ ಪಕ್ಷವನ್ನು ಸ್ಥಾಪಿಸಿದರು. ಕಾಂಗ್ರೆಸ್ ಪಕ್ಷ ಭಿನ್ನ ರಾಜಕೀಯ ನಿಲುವುಗಳನ್ನು ಹೊಂದಿದ್ದರೂ ಅಂಬೇಡ್ಕರ್ ಅವರಿಗೆ ಮಹೋನ್ನತ ಜವಾಬ್ದಾರಿಗಳನ್ನು ನೀಡಿತ್ತು. ಈ ದೇಶವನ್ನು ಮುನ್ನಡೆಸಲು ವಿದ್ಯಾವಂತರು, ಬುದ್ಧಿವಂತರು ಇರಬೇಕು ಎಂದು ಜವಾಹರ್ ಲಾಲ್ ನೆಹರು ಅವರು ತಮ್ಮ ಸಂಪುಟದಲ್ಲಿ ಅಂಬೇಡ್ಕರ್ ಅವರಿಗೆ ಸ್ಥಾನ ನೀಡಿದರು'' ಎಂದು ಹೇಳಿದರು.

''ಸಂಘಟಿತರಾಗಿ, ವಿದ್ಯಾವಂತರಾಗಿ, ಹೋರಾಟ ಮಾಡಿ ಎಂದು ಮಾತ್ರ ಅಂಬೇಡ್ಕರ್ ಅವರು ಹೇಳಲಿಲ್ಲ. ಪ್ರಜಾಪ್ರಭುತ್ವ ಎಂದರೆ ಸರ್ವ ಜನಾಂಗಗಳು ಒಗ್ಗೂಡಿ ಮುನ್ನಡೆಸುವ ಸಾಧನ ಎಂದಿದ್ದರು. ಎಲ್ಲಾ ಧರ್ಮ ಜಾತಿಗಳು ಸಂವಿಧಾನದ ಅಡಿಯಲ್ಲಿ ಬಂದು ಇಡೀ ದೇಶವೇ ಇದನ್ನು ಒಪ್ಪುವಂತೆ ಮಾಡಿದವರು'' ಎಂದರು.

## ಮಂಡ್ಯಕ್ಕೆ ಎಆರ್‌ಎಐ ಕೇಂದ್ರ, ಕೈಗಾರಿಕಾ ಹಬ್: ಸಚಿವ

• ಉದಯವಾಹಿನಿ, ಬೆಂಗಳೂರು

ಕೇಂದ್ರ ಸರ್ಕಾರದ ಬೃಹತ್ ಕೈಗಾರಿಕೆ ಇಲಾಖೆಯ ಅಧೀನದಲ್ಲಿ ಬರುವ 'ಆಟೊಮೋಟೋವ್ ರೀಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾ' ಕೇಂದ್ರವನ್ನು ಮಂಡ್ಯ ಜಿಲ್ಲೆಯಲ್ಲಿ ಸ್ಥಾಪಿಸುವ ಕುರಿತಂತೆ ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಎಚ್.ಡಿ. ಕುಮಾರಸ್ವಾಮಿ ಮತ್ತು ರಾಜ್ಯ ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಸಮಾಲೋಚನೆ ನಡೆಸಿದರು. ಕೇಂದ್ರದಲ್ಲಿ ಸಚಿವರಾಗಿ ಅಧಿಕಾರ ವಹಿಸಿಕೊಂಡ ಎರಡು ವರ್ಷಗಳ ನಂತರ ಇದೇ ಮೊದಲ ಬಾರಿಗೆ ಕುಮಾರಸ್ವಾಮಿ, ಸಭೆಯಲ್ಲಿ ಭಾಗಿಯಾಗಿ ರಾಜ್ಯದಲ್ಲಿ ಕೈಗಾರಿಕೆ ಅಭಿವೃದ್ಧಿ ಕುರಿತು ಮಹತ್ವದ ಚರ್ಚೆ ನಡೆಸಿದರು. 'ಇಂತಹ ಪರೀಕ್ಷಾ ಕೇಂದ್ರ ಇಡೀ ರಾಷ್ಟ್ರದಲ್ಲಿ ನಾಲ್ಕು ಕಡೆ ಮಾತ್ರ ಇದೆ. ಐದನೇ ಕೇಂದ್ರವನ್ನು ಕರ್ನಾಟಕಕ್ಕೆ ತರಬೇಕು ಎನ್ನುವುದು ನನ್ನ ಉದ್ದೇಶ. ಆಟೋಮೊಬೈಲ್ ಕ್ಷೇತ್ರಕ್ಕೆ ಅದರಲ್ಲೂ ಮುಖ್ಯವಾಗಿ ಎಲೆಕ್ಟ್ರಿಕ್ ವಾಹನ ಉದ್ಯಮಕ್ಕೆ ಈ ಪರೀಕ್ಷಾ ಕೇಂದ್ರದಿಂದ ಹೆಚ್ಚಿನ ಉತ್ತೇಜನ ಸಿಗಲಿದೆ. ಈ ಬಗ್ಗೆ ಸಚಿವರ ಜೊತೆ ವಿಸ್ತ್ರತವಾಗಿ ಸಮಾಲೋಚನೆ ನಡೆಸಿದ್ದೇನೆ. ಅವರು ಸಕಾರಾತ್ಮಕವಾಗಿ ಸ್ಪಂದಿಸಿದರು' ಎಂದರು. ''ಎಆರ್‌ಎಐ ಕೇಂದ್ರ ಸ್ಥಾಪನೆಯೂ ಸೇರಿದಂತೆ ಪೂರಕ ವ್ಯವಸ್ಥೆಗಳಿಗೆ ಸುಮಾರು 500 ರಿಂದ 600 ಎಕರೆ ಭೂಮಿ ಅಗತ್ಯವಿದೆ. ನನ್ನ ಲೋಕಸಭಾ ಕ್ಷೇತ್ರ ಮಂಡ್ಯದಲ್ಲೇ ಈ ಕೇಂದ್ರ ಆಗಬೇಕೆಂದು ನಿರ್ಧರಿಸಿದ್ದೇನೆ. ಯಾರ್ಯಾರ ಹೃದಯದಲ್ಲಿ ಏನೇನಿದೆಯೊ. ನಾನು ಮಂಡ್ಯದ ಜನತೆಯ ಋಣ ತೀರಿಸಬೇಕಿದೆ. ರಾಜ್ಯಕ್ಕೆ ಇನ್ನಷ್ಟು ಕೈಗಾರಿಕೆಗಳನ್ನು ತರಬಹುದು' ಎಂದರು.

## ಶಾಸಕರಿಂದ 'ದೆಹಲಿ ಚಲೊ': ಸಚಿವ ಸ್ಥಾನ ಗಿಟ್ಟಿಸಲು ಕಸರತ್ತು

• ಉದಯವಾಹಿನಿ, ಹಾವೇರಿ

ರಾಜ್ಯ ಸರ್ಕಾರದ ಸಚಿವ ಸಂಪುಟ ವಿಸ್ತರಣೆಗಾಗಿ ತೆರೆಮರೆಯಲ್ಲಿ ತಯಾರಿ ಶುರುವಾಗಿದೆ. ಜಿಲ್ಲೆಯ ಶಾಸಕರು ಸಹ ಸಚಿವ ಸ್ಥಾನ ಗಿಟ್ಟಿಸಿಕೊಳ್ಳಲು ರಾಜ್ಯದ ರಾಜಧಾನಿ ಬೆಂಗಳೂರು ಹಾಗೂ ದೇಶದ ರಾಜಧಾನಿ ದೆಹಲಿ ಚಲೊ ಆರಂಭಿಸಿದ್ದಾರೆ. ಘಟಾನುಘಟಿ ನಾಯಕರ ಮೂಲಕ ಹೈಕಮಾಂಡ್ ಮೇಲೆ ಒತ್ತಡ ಹಾಕಿಸಿ, ಸಚಿವ ಸ್ಥಾನದ ಗದ್ದುಗೆ ಏರಲು ಕಸರತ್ತು ನಡೆಸುತ್ತಿದ್ದಾರೆ. ಉತ್ತರ ಕರ್ನಾಟಕದ ಹೆಬ್ಬಾಗಿಲು ಎನಿಸಿಕೊಂಡಿರುವ ಹಾವೇರಿ ಜಿಲ್ಲೆ, ಶಿಗ್ಗಾವಿ ಉಪ ಚುನಾವಣೆಯ ನಂತರ 'ಬಿಜೆಪಿ ಶಾಸಕ ಮುಕ್ತ ಜಿಲ್ಲೆ'ಯಾಗಿ ಮಾರ್ಪಟ್ಟಿದೆ. ಜಿಲ್ಲೆಯ ಆರು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರಿದ್ದಾರೆ. ಆದರೆ, ಯಾರೊಬ್ಬರಿಗೂ ಇದುವರೆಗೂ ಸಚಿವ ಸ್ಥಾನ ನೀಡಿಲ್ಲ. ಈ ಬಾರಿ ಸಚಿವ ಸ್ಥಾನ ನೀಡಲೇ ಬೇಕೆಂದು ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಪಟ್ಟು ಹಿಡಿದಿದ್ದಾರೆ.

'ಬಸವನಬಾಗೇವಾಡಿ ಕ್ಷೇತ್ರದ ಶಾಸಕ ಶಿವಾನಂದ ಪಾಟೀಲ ಅವರು ಸದ್ಯ ಹಾವೇರಿ ಉಸ್ತುವಾರಿ ಸಚಿವರಾಗಿದ್ದಾರೆ. ಆದರೆ, ಸ್ಥಳೀಯ ಶಾಸಕರು ಯಾರು ಸಚಿವರಾಗಿಲ್ಲ. ಇದರಿಂದ ಜಿಲ್ಲೆಯ ಅಭಿವೃದ್ಧಿಗೂ ಹಿನ್ನಡೆಯಾಗುತ್ತಿದೆ' ಎಂಬ ಆರೋಪ ಪಕ್ಷದಲ್ಲಿದೆ. ಅದೇ ಕಾರಣಕ್ಕೆ, ಈ ಬಾರಿ ಸಚಿವ ಸ್ಥಾನ ಪಡೆಯಲು ಸಿದ್ಧತೆ ಜೋರಾಗಿದೆ.

## ಅಂತರರಾಷ್ಟ್ರೀಯ ಮಟ್ಟದ ಟೌನ್‌ಶಿಪ್ ನಿರ್ಮಾಣ: ಭೂ ಸ್ವಾಧೀನಕ್ಕೆ ಚಾಲನೆ

• ಉದಯವಾಹಿನಿ, ಬೆಂಗಳೂರು


ಕೆಂಗೇರಿ ಹೋಬಳಿಯ ಬಿ.ಎಂ. ಕಾವಲ್ ಸಮೀಪದ 500 ಎಕರೆ ಪ್ರದೇಶದಲ್ಲಿ ಅಂತರರಾಷ್ಟ್ರೀಯ ಮಟ್ಟದ ಟೌನ್‌ಶಿಪ್ ನಿರ್ಮಾಣ ಮಾಡಲು ಮುಂದಾಗಿರುವ ಕರ್ನಾಟಕ ಗೃಹ ಮಂಡಳಿ, ಭೂ ಸ್ವಾಧೀನ ಪ್ರಕ್ರಿಯೆಗೆ ಚಾಲನೆ ನೀಡಿದೆ. ವಾಣಿಜ್ಯ ಕೇಂದ್ರ, ಅತಿ ಎತ್ತರದ ವಸತಿ ಸಮುಚ್ಚಯ, ಐ.ಟಿ ಕೇಂದ್ರ, ಮನೋರಂಜನಾ ವಲಯ, ಕ್ಲಬ್‌ಹೌಸ್, ಈಜುಕೊಳ ಹಾಗೂ ಹೊಸ ಆವಿಷ್ಕಾರಗಳನ್ನು ಒಳಗೊಂಡ ಟೌನ್‌ಶಿಪ್ ಹಾಗೂ ವಸತಿ ಯೋಜನೆ ಇದಾಗಿದೆ. ಈಗಾಗಲೇ ರಾಜ್ಯ ಸರ್ಕಾರದ ಕಡೆಯಿಂದ ಅನುಮೋದನೆ ದೊರೆತಿದೆ ಎಂದು ಗೃಹಮಂಡಳಿಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು. ಈ ಯೋಜನೆಗೆ ವಿಸ್ತ್ರತ ಯೋಜನಾ ವರದಿ ತಯಾರಿಸಲು ವಾಸ್ತುಶಿಲ್ಪಿಗಳನ್ನು ನೇಮಕ ಮಾಡಿದ್ದು, ನಕ್ಷೆ ಹಾಗೂ ಡಿಪಿಆರ್ ತಯಾರಿಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. ಎರಡು ತಿಂಗಳಲ್ಲಿ ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳುವ ಸಾಧ್ಯತೆ ಇದೆ ಎಂದು ಅವರು ವಿವರಿಸಿದರು.

**ಅಲ್ಪಸಂಖ್ಯಾತರ ಅಸಮಾಧಾನ**

ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಶ್ಯಾಮನೂರು ಶಿವಶಂಕರಪ್ಪ ಅವರ ಮೊಮಗ ಸಮರ್ಥ ಮಲ್ಲಿಕಾರ್ಜುನ್ ಅವರಿಗೆ ಟಿಕೆಟ್ ನೀಡಿದ್ದರಿಂದ ಅಸಮಾಧಾನಗೊಂಡಿದ್ದ ಅಬ್ದುಲ್ ಜಬ್ಬಾರ್, ನಜೀರ್ ಅಹಮದ್, ಸಚಿವ ಜಮೀರ್ ಅಹಮದ್ ಖಾನ್ ನಕಾರಾತ್ಮಕ ಸಂದೇಶ ಬಿಂಬಿತವಾಗುವಂತೆ ಮಾಡಿದ್ದರು ಎಂಬ ಆರೋಪಗಳಿವೆ. ಟಿಕೆಟ್ ಹಂಚಿಕೆಯ ಸಂದರ್ಭದಲ್ಲಿ ಅಲ್ಪಸಂಖ್ಯಾತರಿಗೆ ಅವಕಾಶ ನೀಡಬೇಕೆಂದು ಸಚಿವ ಜಮೀರ್ ಪಟ್ಟು ಹಿಡಿದಿದ್ದರೆ, ಅಬ್ದುಲ್ ಜಬ್ಬಾರ್ ಅವರಿಗೆ ಟಿಕೆಟ್ ನೀಡಬೇಕೆಂದು ನಜೀರ್ ಅಹಮದ್ ಒತ್ತಾಯಿಸಿದ್ದರು.

**ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯ ಪರಿಣಾಮ ಪ್ರಮುಖ ಹುದ್ದೆಯಲ್ಲಿರುವವರ ತಲೆದಂಡಗಳು ಆರಂಭವಾಗಿದ್ದು, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಸ್ಥಾನದಿಂದ ನಜೀರ್ ಅಹಮದ್ ಅವರನ್ನು ವಜಾಗೊಳಿಸಲಾಗಿದೆ. ಅಲ್ಪಸಂಖ್ಯಾತರ ಅಭಿವೃದ್ಧಿ ಸಚಿವ ಜಮೀರ್ ಅಹಮದ್ ಖಾನ್ ಅವರಿಗೂ ರಾಜೀನಾಮೆ ನೀಡುವಂತೆ ಸೂಚನೆ ನೀಡಲಾಗಿದ್ದು, ತಮ ಕುರ್ಚಿ ಉಳಿಸಿಕೊಳ್ಳಲು ಜಮೀರ್ ಕೊನೆಯ ಕ್ಷಣದ ಕಸರತ್ತು ಆರಂಭಿಸಿದ್ದಾರೆ. ಕಾಂಗ್ರೆಸ್‌ನಲ್ಲಿ ಶಿಸ್ತಿಗೆ ಪ್ರಥಮ ಆದ್ಯತೆ ಎಂಬ ಸಂದೇಶ ರವಾನಿಸಲು ನಜೀರ್ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗಿದೆ.**

# ಸಿಎಂ ಕಾರ್ಯದರ್ಶಿ ನಜೀರ್ ವಜಾ
# ಜಮೀರ್‌ಗೂ ಕಂಟಕ?



• ಉದಯವಾಹಿನಿ, ಬೆಂಗಳೂರು

ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯ ಪರಿಣಾಮ ಪ್ರಮುಖ ಹುದ್ದೆಯಲ್ಲಿರುವವರ ತಲೆದಂಡಗಳು ಆರಂಭವಾಗಿದ್ದು, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಸ್ಥಾನದಿಂದ ನಜೀರ್ ಅಹಮದ್ ಅವರನ್ನು ವಜಾಗೊಳಿಸಲಾಗಿದೆ. ಅಲ್ಪಸಂಖ್ಯಾತರ ಅಭಿವೃದ್ಧಿ ಸಚಿವ ಜಮೀರ್ ಅಹಮದ್ ಖಾನ್ ಅವರಿಗೂ ರಾಜೀನಾಮೆ ನೀಡುವಂತೆ ಸೂಚನೆ ನೀಡಲಾಗಿದ್ದು, ತಮ ಕುರ್ಚಿ ಉಳಿಸಿಕೊಳ್ಳಲು ಜಮೀರ್ ಕೊನೆಯ ಕ್ಷಣದ ಕಸರತ್ತು ಆರಂಭಿಸಿದ್ದಾರೆ. ಕಾಂಗ್ರೆಸ್‌ನಲ್ಲಿ ಶಿಸ್ತಿಗೆ ಪ್ರಥಮ ಆದ್ಯತೆ ಎಂಬ ಸಂದೇಶ ರವಾನಿಸಲು ನಜೀರ್ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗಿದೆ.

**ರಾಜಕೀಯದಲ್ಲಿ ಷಡ್ಯಂತ್ರ ಸಹಜ**

**ನಾನು ಮುಸ್ಲಿಂ ಸಮುದಾಯದ ಸುಪ್ರೀಂ ಲೀಡರ್ ಅಲ್ಲ**

**ಅಲ್ಲಿ ಮುಸಲ್ಮಾನರ ಅಸಮಾಧಾನ ಇದ್ದಿದ್ದು ನಿಜ. ಮುಸ್ಲಿಮರಿಗೆ ಟಿಕೆಟ್ ಕೇಳಿದ್ರು, ಟಿಕೆಟ್ ಕೊಟ್ಟಿಲ್ಲ ಅನ್ನೋ ಅಸಮಾಧಾನ ಇತ್ತು. ಅದು ಸರಿ ಹೋಗಿ ಪಕ್ಷದ ಅಭ್ಯರ್ಥಿಯಾಗಿ ಸಮರ್ಥ್ ಅವರಿಗೆ ಅವಕಾಶ ಕೊಟ್ಟರು. ನಾನೊಬ್ಬ ಸಾಮಾನ್ಯ ಕಾರ್ಯಕರ್ತ. ನಾನು ಮುಸ್ಲಿಂ ಸಮುದಾಯದ ಸುಪ್ರೀಂ ಲೀಡರ್ ಅಲ್ಲ. ನಾನು ಲೀಡರ್ ಆಗಲು ಹೊರಟಿಲ್ಲ. ಮುಂದೇನು ಲೀಡರ್ ಆಗೋಕೆ ಹೋಗಲ್ಲ. ನಾನೊಬ್ಬ ಸೇವಕ, ಸೇವೆ ಮಾಡುತ್ತಿದ್ದೇನೆ ಅಷ್ಟೇ.**

2023ರ ಮೇ 20ರಂದು ಸಿದ್ದರಾಮಯ್ಯ 2ನೇ ಬಾರಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದರು. ಜೂನ್ 1ರಂದು ನಜೀರ್ ಅವರನ್ನು ರಾಜಕೀಯ ಕಾರ್ಯದರ್ಶಿ ಸ್ಥಾನಕ್ಕೆ ನೇಮಕ ಮಾಡಿದ್ದರು. ಇವರ ಜೊತೆಗೆ ಕೆ.ಗೋವಿಂದರಾಜ್ ಅವರನ್ನು ಕೂಡ ರಾಜಕೀಯ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿತ್ತು.

ಇಬ್ಬರೂ ಮುಖ್ಯಮಂತ್ರಿಯವರಿಗೆ ಎಡ-ಬಲ ಎಂಬಂತೆ ಕಾಣಿಸಿಕೊಳ್ಳುತ್ತಿದ್ದರು. ಯಾವುದೇ ಅಧಿಕೃತ ಸಭೆ ಸಮಾರಂಭಗಳಿರಲಿ, ಖಾಸಗಿ ಕಾರ್ಯಕ್ರಮಗಳಿರಲಿ ಈ ಇಬ್ಬರ ಹಾಜರಾತಿ ಶತಸ್ಸಿದ್ಧ ಎಂಬಂತಿತ್ತು. ಬಜೆಟ್ ತಯಾರಿಕೆಯಂತಹ ಮಹತ್ವದ ಹಾಗೂ ರಹಸ್ಯ ಸಭೆಗಳಲ್ಲೂ ಇಬ್ಬರೂ ಕಾಣಿಸಿಕೊಳ್ಳುತ್ತಿದ್ದರು, ಕೆಲವು ವೇಳೆ ಇದು ಅತಿರೇಕ ಎನ್ನಿಸಿ ಸಚಿವರು, ಶಾಸಕರು, ಪ್ರಮುಖ ನಾಯಕರು ಅಸಮಾಧಾನ ತೋಡಿಕೊಂಡಿದ್ದ ಉದಾಹರಣೆಗಳೂ ಇವೆ. ಕಳೆದ ಬಾರಿ ಐಪಿಎಲ್‌ನಲ್ಲಿ ಆರ್‌ಸಿಬಿ ಜಯಗಳಿಸಿದ ವೇಳೆ ವಿಜಯೋತ್ಸವ ಆಚರಣೆಯಾಗಿತ್ತು. ನೂಕು ನುಗ್ಗಲು, ಕಾಲ್ತುಳಿತದಿಂದಾಗಿ 11 ಮಂದಿ ಜೀವ ಕಳೆದುಕೊಂಡಿದ್ದರು. ಆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕೆ.ಗೋವಿಂದರಾಜ್ ಅವರು ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಕಳೆದ ಒಂದು ವರ್ಷದಿಂದಲೂ ನಜೀರ್ ಅಹಮದ್ ರಾಜಕೀಯ ಕಾರ್ಯದರ್ಶಿ ಸ್ಥಾನದಲ್ಲಿ ಮುಂದುವರೆದಿದ್ದರು.

ಇತ್ತೀಚೆಗೆ ದಾವಣಗೆರೆ ದಕ್ಷಿಣ ಕ್ಷೇತ್ರ, ಉಪಚುನಾವಣೆಯ ವೇಳೆ ಟಿಕೆಟ್ ಹಂಚಿಕೆ ವಿಚಾರವಾಗಿ ಅಲ್ಪಸಂಖ್ಯಾತ ಮುಖಂಡರು ಕಾಂಗ್ರೆಸ್ ವಿರುದ್ಧ ಮುನಿಸಿಕೊಂಡಿದ್ದರು. ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್, ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅದನ್ನು ಅಂಗೀಕರಿಸಿದ್ದರು. ಸಾಲದೆಂಬಂತೆ ಅಲ್ಪಸಂಖ್ಯಾತರ ಘಟಕದ ಪದಾಧಿಕಾರಿಗಳನ್ನು ವಿಸರ್ಜನೆ ಮಾಡಿ, ಹೊಸ ತಂಡವನ್ನು ಕಟ್ಟಲು ಚಾಲನೆ ನೀಡಿದ್ದಾರೆ.

**ಜಮೀರ್‌ಗೂ ಕಂಟಕ**

**ನನ್ನ ಜವಾಬ್ದಾರಿಯನ್ನು ನಿಭಾಯಿಸಿದ್ದೇನೆ**

**ಸಚಿವರು, ಶಾಸಕರು, ಪ್ರಮುಖ ನಾಯಕರು ಅಸಮಾಧಾನ**

**ಕುರ್ಚಿ ಉಳಿಸಿಕೊಳ್ಳುವ ಕೊನೆಯ ಪ್ರಯತ್ನವಾಗಿ ಜಮೀರ್ ಅಹಮದ್ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗೃಹ ಕಚೇರಿ ಕಾವೇರಿಯಲ್ಲಿ ಭೇಟಿ ಮಾಡಿ ವಿವರಣೆ ನೀಡಿದ್ದಾರೆ. ಪಕ್ಷ ನಿಷ್ಠೆಯಿಂದ ಕೆಲಸ ಮಾಡಿದ್ದೇನೆ ಎಂದು ವಿವರಣೆ ನೀಡಿದ್ದಾರೆ ಎನ್ನಲಾಗಿದೆ. ಆದರೆ ಇದಕ್ಕೆ ಒಪ್ಪದ ಕಾಂಗ್ರೆಸ್ ಹೈಕಮಾಂಡ್ ಸಚಿವರ ತಲೆದಂಡಕ್ಕೆ ನಿರ್ದೇಶನ ನೀಡಿದೆ ಎನ್ನಲಾಗುತ್ತಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಮೀರ್ ಅಹಮದ್ ಖಾನ್ ಅವರಿಗೆ ರಾಜೀನಾಮೆ ನೀಡುವಂತೆ ಸಲಹೆ ನೀಡಿದ್ದಾರೆ ಎನ್ನಲಾಗಿದೆ. ಕಾಂಗ್ರೆಸ್‌ನಲ್ಲಿ ಅಲ್ಲೋಲ ಕಲ್ಲೋಲ ವಾತಾವರಣ ಸೃಷ್ಟಿಸಿದೆ.**

**ಕಾಂಗ್ರೆಸ್‌ನಲ್ಲಿ ಅಲ್ಲೋಲ ಕಲ್ಲೋಲ ವಾತಾವರಣ**

**"ಎಲ್ಲರಿಗೂ ಮಂತ್ರಿಯಾಗುವ ಆಸೆ ಸಹಜ. ಅದಕ್ಕಾಗಿ ಎಲ್ಲರೂ ಪ್ರಯತ್ನ ಮಾಡುತ್ತಾರೆ. ನಾನು ಮಂತ್ರಿ ಆಗಬೇಕು ಅಂತ ಆಸೆ ಇತ್ತು. ನಾನು ಮಂತ್ರಿ ಆಗಿದ್ದೇನೆ . ಅವರು ಯಾರಿಗೆ ಹೇಳಿದ್ದಾರೆ ಅಂತ ಗೊತ್ತಿಲ್ಲ. ಸ್ಥಳೀಯ ನಾಯಕರಿಗೆ ಹೇಳಿದ್ದಾರಾ ಯಾರಿಗೆ ಹೇಳಿದ್ದಾರೆ ಗೊತ್ತಿಲ್ಲ. ಯಾರು ಷಡ್ಯಂತ್ರ ಮಾಡಿದ್ದಾರೆ ಎಂದು ಹೆಸರು ಹೇಳಬೇಕಲ್ಲವೇ?**

**-ಜಮೀರ್ ಅಹಮದ್, ಸಚಿವ**

**ದಾವಣಗೆರೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧವಾಗಿ ಎಸ್‌ಡಿಪಿಐ ಅಭ್ಯರ್ಥಿಗೆ ಆರ್ಥಿಕ ನೆರವು ನೀಡಿದ ಆರೋಪ ಸಚಿವ ಜಮೀರ್ ಅಹಮದ್ ಖಾನ್ ಅವರ ಮೇಲಿದೆ. ಈ ಕಾರಣಕ್ಕೆ ಜಮೀರ್ ಅವರನ್ನು ಸಂಪುಟದಿಂದ ವಜಾಗೊಳಿಸಬೇಕೆಂಬ ಒತ್ತಡಗಳು ಹೆಚ್ಚುತ್ತಿವೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್‌ಸಿಂಗ್ ಸುರ್ಜೇವಾಲ ಅವರು ಉಪಚುನಾವಣೆಗಳ ಪರಿಸ್ಥಿತಿಗಳನ್ನು ಖುದ್ದಾಗಿ ಅವಲೋಕಿಸುವುದರಿಂದಾಗಿ ಮುಲಾಜಿಲ್ಲದೆ ಕ್ರಮಗಳಾಗುತ್ತಿವೆ. ಜಮೀರ್ ಅಹಮದ್ ತಲೆದಂಡದಿಂದ ತಪ್ಪಿಸಿಕೊಳ್ಳಲು ಕೆ.ಸಿ.ವೇಣುಗೋಪಾಲ್ ಅವರ ತವರು ರಾಜ್ಯ ಕೇರಳದ ವಿಧಾನಸಭಾ ಚುನಾವಣಾ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದರು. ಆದರೆ ಅದನ್ನು ಒಪ್ಪದೇ, ಉಪಚುನಾವಣಾ ಕಣದಿಂದ ದೂರ ಉಳಿದಿದ್ದನ್ನೇ ಪ್ರಮುಖವಾಗಿ ಪರಿಗಣಿಸಿ ಜಮೀರ್ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು ಅಥವಾ ರಾಜೀನಾಮೆ ಪಡೆಯಬೇಕೆಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪಟ್ಟು ಹಿಡಿದಿದ್ದಾರೆ.**

# ಕುಮಾರಣ್ಣ ಮುಂದಿನ ಸಿಎಂ ಎಂದವರಿಗೆ ನಯವಾಗಿ ಬುದ್ಧಿಮಾತು ಹೇಳಿದ ಎಚ್‌ಡಿಕೆ

## ■ ಇದು ಅಂಬೇಡ್ಕರ್ ಜಯಂತಿ ಕಾರ್ಯಕ್ರಮ, ಇಲ್ಲಿ ನನ್ನ ವೈಭವಿಕರಣ ಬೇಡ ಎಂದ ಕೇಂದ್ರ ಸಚಿವರು

• ಉದಯವಾಹಿನಿ, ಬೆಂಗಳೂರು

ಕುಮಾರಣ್ಣ ಮುಂದಿನ ಸಿಎಂ ಎಂದ ಮುಖಂಡರಿಗೆ ಸ್ವತಃ ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ನಯವಾಗಿ ಬುದ್ಧಿಮಾತು ಹೇಳಿದ್ದಾರೆ. ಇದರ ಜತೆಗೆ ಕರ್ನಾಟಕದಲ್ಲಿ ವಾರಕ್ಕೆ ಎರಡು ದಿನ ಇರುತ್ತೇನೆ, ಜನರ ಪರ ಹೋರಾಟ ಮಾಡುತ್ತೇನೆ. ಈ ಕೆಟ್ಟ ಸರ್ಕಾರದ ವಿರುದ್ಧ ದನಿ ಎತ್ತುತ್ತೇನೆ ಎಂದು ರಾಜ್ಯ ಸರ್ಕಾರಕ್ಕೂ ಪರೋಕ್ಷ ಎಚ್ಚರಿಕೆ ಸಂದೇಶ ನೀಡಿದ್ದಾರೆ.

ಬುಧವಾರ ಬೆಂಗಳೂರಿನ ಜೆಡಿಎಸ್ ಪಕ್ಷದ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಸಂವಿಧಾನ ಶಿಲ್ಪಿಗೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು. ಕಾರ್ಯಕ್ರಮದಲ್ಲಿ ತಮಗೆ ಜೈಕಾರ ಹಾಕಿದ ಕಾರ್ಯಕರ್ತರಿಗೆ ನಯವಾಗಿ ತರಾಟೆಗೆ ತೆಗೆದುಕೊಂಡ ಸಚಿವರು, ಮುಂದಿನ ಮುಖ್ಯಮಂತ್ರಿ ಕುಮಾರಸ್ವಾಮಿ ಎಂದು ಅಥವಾ ಕುಮಾರಣ್ಣ ಮುಖ್ಯಮಂತ್ರಿಯಾಗಲಿ ಎಂದು ನೀವು ಕೂಗುವ ಸಮಯ ಇದಲ್ಲ. ಅಂಬೇಡ್ಕರ್ ಅವರ ಜಯಂತಿ ದಿನ ನನ್ನ ಬಗ್ಗೆ ಘೋಷಣೆಗಳನ್ನು ಕೂಗುವುದು ಬೇಡ. ಹಾಗೆ ಮಾಡುವುದು ಅಂಬೇಡ್ಕರ್ ಅವರಿಗೆ ಅಗೌರವ ಸೂಚಿಸಿದಂತೆ ಆಗುತ್ತದೆ. ನನ್ನ ವೈಭವಿಕರಣ ಬೇಡ ಎಂದು ಬುದ್ಧಿಮಾತು ಹೇಳಿದರು.

**ಬಾಬಾ ಸಾಹೇಬರ ತತ್ವದ ಅಡಿಯಲ್ಲಿ ಪಕ್ಷದ ಬಲವರ್ಧನೆ**

**ಅಂಬೇಡ್ಕರ್ ವೇದಿಕೆಯಲ್ಲಿ ನನ್ನ ಬಗ್ಗೆ ಚರ್ಚೆ ಬೇಡ:** ಈಗಷ್ಟೇ ಕೋರ್ ಕಮಿಟಿ ಅಧ್ಯಕ್ಷರಾದ ಎಂ. ಕೃಷ್ಣಾರೆಡ್ಡಿ ಮತ್ತು ಮಾಜಿ ಮಂತ್ರಿಗಳಾದ ವೆಂಕಟರಾವ್ ನಾಡಗೌಡರು ಹಾಗೂ ಮಾಜಿ ಶಾಸಕ ಅನ್ನದಾನಿ ಅವರೆಲ್ಲರೂ ಕುಮಾರಣ್ಣನೇ ಮುಖ್ಯಮಂತ್ರಿ ಆಗಬೇಕು ಎಂದು ಹೇಳಿದ್ದಾರೆ. ಎಲ್ಲರ ಭಾಷಣವನ್ನು ನಾನು ಆಲಿಸಿದೆ. ಅಂಬೇಡ್ಕರ್ ಅವರಿಗೆ ನಮನ ಸಲ್ಲಿಸುವ ಈ ವೇದಿಕೆಯಲ್ಲಿ ಮುಖ್ಯಮಂತ್ರಿ ವಿಷಯದ ಬಗ್ಗೆ ಚರ್ಚಿಸುವುದು ಸರಿಯಲ್ಲ. ನಾವು ಬಾಬಾ ಸಾಹೇಬರ ಆದರ್ಶ ಮತ್ತು ತತ್ವಗಳನ್ನು ಅಳವಡಿಸಿಕೊಂಡು ಪಕ್ಷವನ್ನು ಬಲಿಷ್ಠವಾಗಿ ಕಟ್ಟಬೇಕು ಎಂದು ಕೆಲಸ ಸಚಿವರು ಕರೆ ನೀಡಿದರು. ದೇವರ ದಯೆಯಿಂದ ನಾನು ಎರಡು ಬಾರಿ ಈ ರಾಜ್ಯಕ್ಕೆ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಪೂರ್ಣಪ್ರಮಾಣದ ಬಹುಮತ ಇಲ್ಲದೆ ಸಾಧ್ಯವಾದಷ್ಟು ಒಳ್ಳೆಯ ಕೆಲಸಗಳನ್ನು ಮಾಡಿದ್ದೇನೆ. ಸಮಾಜದ ಎಲ್ಲಾ ವರ್ಗದ ಜನರನ್ನು ಸಮಾನ ದೃಷ್ಟಿಯಲ್ಲಿ ನೋಡಿದ್ದೇನೆ. ಹೀಗಾಗಿ ನನ್ನ ಮೇಲೆ ಎಲ್ಲರಿಗೂ ಪ್ರೀತಿ ವಿಶ್ವಾಸ ಇದೆ. ನೆನ್ನೆಯ ದಿನ ನಾನು ವಿಧಾನಸೌಧಕ್ಕೂ ಭೇಟಿ ಕೊಟ್ಟಿದ್ದೆ. ಆ ಸಂದರ್ಭದಲ್ಲಿಯೂ ಕೆಲ ಮಾಧ್ಯಮ ಸ್ನೇಹಿತರು ನೀವು ಮುಂದಿನ ಮುಖ್ಯಮಂತ್ರಿ ಆಗಬೇಕು ಎಂದು ಶುಭ ಹಾರೈಸಿದರು. ಇದೆಲ್ಲವೂ ಅವರು ನನ್ನ ಮೇಲೆ ಇಟ್ಟಿರುವ ಪ್ರೀತಿ ಮತ್ತು ನಂಬಿಕೆಯನ್ನು ಸೂಚಿಸುತ್ತದೆ. ಇಂತಹ ವೇದಿಕೆಯಲ್ಲಿ ರಾಜಕೀಯ ಮಾತನಾಡುವುದು ಬೇಡ ಎಂದು ಅವರು ಮುಖಂಡರು ಮತ್ತು ಕಾರ್ಯಕರ್ತರಿಗೆ ಸೂಚಿಸಿದರು.



**ಧನಿ ಇಲ್ಲದವರ ದನಿಯಾಗಿ ನಾವು ಕೆಲಸ ಮಾಡಬೇಕು**

**ನಾವು ಎಲ್ಲಾ ಸಮುದಾಯಗಳನ್ನು ಒಳಗೊಂಡಂತೆ ಪಕ್ಷವನ್ನು ಕಟ್ಟಬೇಕು. ಗ್ರಾಮ ಹೋಬಳಿ ಮತ್ತು ಮತಗಟ್ಟೆಗಳ ಮಟ್ಟದಲ್ಲಿಯೂ ಬಲಿಷ್ಠವಾಗಿ ಕಾರ್ಯಕರ್ತರ ಪಡೆಯಲು ಸೃಷ್ಟಿ ಮಾಡಬೇಕು. ಶೋಷಿತರ ಮತ್ತು ಧನಿ ಇಲ್ಲದವರ ದನಿಯಾಗಿ ನಾವು ಕೆಲಸ ಮಾಡಬೇಕು. ಇದುವೇ ಬಾಬಾ ಸಾಹೇಬ್ ಅವರು ಹೇಳಿದ ಸಂದೇಶ. ಆದರೆ ಕೆಲವರು ಅವರು ಬರೆದ ಸಂವಿಧಾನದ ಪೀಠಿಕೆಯನ್ನು ಪ್ರಚಾರಕಷ್ಟೇ ಓದುತ್ತಾರೆ. ಅವರು ತಪಸ್ಸಿನಂತೆ ರಚಿಸಿದ ಸಂವಿಧಾನವನ್ನು ಕೇವಲ ಪ್ರಚಾರಕ್ಕಾಗಿ ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಕುಮಾರಸ್ವಾಮಿ ಅವರು ಕಟುವಾಗಿ ಟೀಕಿಸಿದರು.**

**ಈ ದಿನದ ದರ** ಪೆಟ್ರೋಲ್: 102.96 ₹/L ಡೀಸೆಲ್ : 91.06 ₹/L ಬಂಗಾರ: ₹15,393/Gram24ct ₹14,110/Gram22ct ಬೆಳ್ಳಿ: ₹255.00/Gram

## ಅಂಬೇಡ್ಕರ್ ಅವರ ಚಿಂತನೆಗಳು ನಮ್ಮ ಸಮಾಜದ ದಿಕ್ಕು ತೋರಿಸುವ ದೀಪಸ್ತಂಭ




• ಉದಯವಾಹಿನಿ, ಕೆ.ಆರ್.ಪುರ

ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಚಿಂತನೆಗಳು ನಮ್ಮ ಸಮಾಜದ ದಿಕ್ಕು ತೋರಿಸುವ ದೀಪಸ್ತಂಭವಾಗಿವೆ ಎಂದು ಕರ್ನಾಟಕ ದಲಿತ ಹಿಂದುಳಿದ ಅಲ್ಪಸಂಖ್ಯಾತರ ಸಮಿತಿಯ ಮುಖಂಡರಾದ ಎಚ್. ಎನ್ ನಾರಾಯಣಸ್ವಾಮಿ ತಿಳಿಸಿದರು. ಮಹದೇವಪುರ ಕ್ಷೇತ್ರದ ಬಿದರಹಳ್ಳಿ ಪಂಚಾಯತಿಯ ಹಿರಂಡಹಳ್ಳಿ ಗ್ರಾಮಸ್ಥರು ಆಯೋಜಿಸಿದ ಅಂಬೇಡ್ಕರ್ ಜಯಂತಿಯಲ್ಲಿ ಕೇಕ್ ಕತ್ತರಿಸಿ, ಸಿಹಿ ವಿತರಣೆ ಮಾಡಿ ಮಾತನಾಡಿದರು. ಮಾಜಿ ಗ್ರಾ.ಪ ಸದಸ್ಯರಾದ ಎಚ್ ಜಿ ರಾಮಮೂರ್ತಿ ಮತನಾಡಿ, ಸಮಾನತೆ, ನ್ಯಾಯ ಮತ್ತು ಶಿಕ್ಷಣದ ಮಹತ್ವವನ್ನು ಅಂಬೇಡ್ಕರ್ ಅವರು ನಮಗೆ ಬೋಧಿಸಿದ ದಾರಿ ಇಂದಿಗೂ ಪ್ರಸ್ತುತವಾಗಿದೆ. ಅವರ ಜೀವನವೇ ನಮ್ಮಗೆ ಪ್ರೇರಣೆ ಎಂದರು. ಮಾಜಿ ಗ್ರಾ.ಪ ಸದಸ್ಯ ಶ್ರೀನಾಥ್ ಮತನಾಡಿ, ಶಿಕ್ಷಣವೇ ಮುಕ್ತಿಯ ದಾರಿ ಎಂದು ಅಂಬೇಡ್ಕರ್ ಅವರು ಹೇಳಿದ ಮಾತುಗಳು ಇಂದು ನಮ್ಮ ಯುವಕರಿಗೆ ಬೆಳಕು ನೀಡುತ್ತಿವೆ ಎಂದು ನುಡಿದರು. ಗ್ರಾಮಸ್ಥರಾದ ವೆಂಕಟಸ್ವಾಮಪ್ಪ, ಡಿ ಕೃಷ್ಣಪ್ಪ, ಕಾಳಪ್ಪ, ಎಚ್.ಆರ್.ಮುನಿರಾಜು, ಸುರೇಶ್, ಚಂದ್ರಶೇಖರ್, ಗೀತಾಮ್ಮ, ಶಿವಪ್ಪ, ಕೃಷ್ಣಮೂರ್ತಿ, ಶ್ರೀನಿವಾಸ್, ಗಣೇಶ್, ಮುನಿರಾಜ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ದಾಸರ ಪದಗಳ ಗಾಯನ

• ಉದಯವಾಹಿನಿ, ಬೆಂಗಳೂರು



ಪವಮಾನಪುರದ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶದಂತೆ ಶ್ರೀಮಠದ ವಿಚಾರಣಾಕರ್ತರಾದ ಶ್ರೀ ಗಿರಿರಾಜಾಚಾರ್ ಅವರ ನೇತೃತ್ವದಲ್ಲಿ ಏಪ್ರಿಲ್ 16, ಗುರುವಾರ ಸಂಜೆ 7-00ಕ್ಕೆ ಶ್ರೀಮತಿ ಸರಸ್ವತಿ, ಶ್ರೀಮತಿ ಶೃತಿ ಮತ್ತು ಸಂಗಡಿಗರಿಂದ ದಾಸರ ಪದಗಳ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಶ್ರೀ ನಂದಕಿಶೋರ್ ಆಚಾರ್ ತಿಳಿಸಿದ್ದಾರೆ. **ಸ್ಥಳ:** ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ, ಬನಶಂಕರಿ 6ನೇ ಹಂತ, ಬೆಂಗಳೂರು.

## ಪಕ್ಷದಲ್ಲಿ ಜವಾಬ್ದಾರಿ ನಿಭಾಯಿಸದೇ ನಿರ್ಲಕ್ಷ್ಯ ವಹಿಸಿದವರ ವಿರುದ್ಧ ಕ್ರಮ ಅನಿವಾರ್ಯ

• ಉದಯವಾಹಿನಿ, ಬೆಂಗಳೂರು

ಪಕ್ಷದಲ್ಲಿ ಶಿಸ್ತು ಬಹಳ ಮುಖ್ಯ. ಕೊಟ್ಟಿರುವ ಜವಾಬ್ದಾರಿ ನಿಭಾಯಿಸದೇ ಇದ್ದಾಗ ಕ್ರಮ ಅನಿವಾರ್ಯ ವಾಗಿರುತ್ತದೆ ಎಂದು ಕೆಪಿಸಿಸಿ ಅಧ್ಯಕ್ಷರಾದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ತಮ ನಿವಾಸದ ಬಳಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಜೀರ್ ಅಹಮದ್ ಅವರಿಗೆ ದಾವಣಗೆರೆ, ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ತೊಡಗಿಸಿಕೊಳ್ಳುವಂತೆ ಮುಖ್ಯಮಂತ್ರಿಯವರು ಸೂಚನೆ ನೀಡಿದ್ದರೂ, ಅವರು ಅದನ್ನು ಪಾಲನೆ ಮಾಡದೇ ಇದ್ದುದ್ದರಿಂದ ಕ್ರಮ ಕೈಗೊಂಡಿರಬಹುದು ಎಂದರು. ತಾವು ಊರಿನಲ್ಲಿ ಇರಲಿಲ್ಲ. ಹಾಗಾಗಿ ಹೆಚ್ಚಿನ ಮಾಹಿತಿ ಇಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸಚಿವ ಜಮೀರ್ ಅಹಮದ್ ಖಾನ್ ಅವರ ವಿರುದ್ಧವೂ ಕ್ರಮ ಕೈಗೊಳ್ಳುವ ಬಗ್ಗೆ ತಮಗೆ ಯಾವುದೇ ಮಾಹಿತಿ ಇಲ್ಲ ಎಂದು ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ದಾವಣಗೆರೆ ಕ್ಷೇತ್ರದ ಉಪಚುನಾವಣೆ ಬಗ್ಗೆ ಇನ್ನೂ ಒಂದು ವರದಿ ಬರಬೇಕು. ಅದರ ನಂತರ ಪ್ರಶ್ನೆಗಳಿಗೆ ಉತ್ತರ ನೀಡುವುದಾಗಿ ಅವರು ತಿಳಿಸಿದರು. ಕೆಪಿಸಿಸಿ ಅಧ್ಯಕ್ಷನಾಗಿ ತಮಗೆ ಜವಾಬ್ದಾರಿ ಇದೆ. ಹೀಗಾಗಿ ಶಾಸಕರನ್ನು ಕರೆದು ಚರ್ಚೆ ಮಾಡುತ್ತೇನೆ. ಇದರಲ್ಲಿ ವಿಶೇಷತೆ ಏನೂ ಇಲ್ಲ ಎಂದು ಸ್ಪಷ್ಟಪಡಿಸಿದರು. ಶಾಸಕರುಗಳಿಗೆ ಅವರ ಭವಿಷ್ಯದ ಬಗ್ಗೆ ಮಾರ್ಗದರ್ಶನ ಮಾಡಬೇಕಾಗಿದೆ. ಹೀಗಾಗಿ ಒಬ್ಬೊಬ್ಬರನ್ನು ಕರೆದು ಚರ್ಚೆ ಮಾಡುತ್ತಿದ್ದೇನೆ ಎಂದು ತಿಳಿಸಿದರು.

## ಮುಷ್ಕರ: ಭೂ ಮಾಪನ ಕಾರ್ಯ ಸ್ಥಗಿತ

• ಉದಯವಾಹಿನಿ, ದೊಡ್ಡಬಳ್ಳಾಪುರ

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಸರ್ಕಾರದ ಪರವಾನಗಿ ಭೂ ಮಾಪಕರು ಎರಡು ತಿಂಗಳಿಂದ ಮುಷ್ಕರ ನಡೆಸುತ್ತಿರುವರಿಂದರಿಂದ ಭೂ ಮಾಪನ ಇಲಾಖೆಯ ಎಲ್ಲಾ ಕೆಲಸಗಳು ಸ್ಥಗಿತಗೊಂಡಿವೆ. ಇದರಿಂದ ಭೂ ಮಾಪನ ಕಚೇರಿ ಸ್ತಬ್ಧವಾಗಿದೆ. ಭೂ ಸರ್ವೆ, ಹದ್ದುಬಸ್ತ್, ಪೋಡಿ ಸೇರಿದಂತೆ ಇತರೆ ಕೆಲಸಗಳಿಗೆ ಸಲ್ಲಿಕೆಯಾಗಿರುವ ಎರಡು ಸಾವಿರಕ್ಕೂ ಹೆಚ್ಚು ಅರ್ಜಿಗಳು ವಿಲೇವಾರಿಯಾಗದೆ ಉಳಿದಿವೆ. ನಗರದ ತಾಲ್ಲೂಕು ಕಚೇರಿ ಆವರಣದಲ್ಲಿರುವ ಭೂ ಮಾಪನ ಇಲಾಖೆ ಕಚೇರಿ ಮುಂದೆ ರೈತರು ಸೋಮವಾರ ಪ್ರತಿಭಟನೆ ನಡೆಸಿದರು. ರೈತರ ಜಮೀನು ಮಾರಾಟ, ಹಕ್ಕು ಬದಲಾವಣೆ ಎಲ್ಲಾ ಕೆಲಸಗಳಿಗೂ ತೊಡಕು ಉಂಟಾಗಿದೆ. ಸರ್ಕಾರ ಕೂಡಲೇ ಭೂ ಮಾಪಕರ ಬೇಡಿಕೆ ಈಡೇರಿಸಿ ಅವರನ್ನು ಕೆಲಸಕ್ಕೆ ಹಾಜರಾಗುವಂತೆ ಮಾಡಬೇಕು. ಇಲ್ಲವೇ ಪರ್ಯಾಯ ವ್ಯವಸ್ಥೆ ಮಾಡಬೇಕು ಎಂದು ಕೆಸ್ತೂರು ಗ್ರಾಮ ರೈತ ರಮೇಶ್‌ಗೌಡ ಆಗ್ರಹಿಸಿದರು.

ಎರಡು ತಿಂಗಳಿಂದ ಭೂ ಮಾಪನ ಇಲಾಖೆಯಲ್ಲಿ ಜಮೀನು ಸರ್ವೆ, ಹದ್ದುಬಸ್ತ್, 11ಇ, ಪೋಡಿ, ದಾರಿ ನಕ್ಷೆಯ ಅರ್ಜಿಗಳು ವಿಲೇವಾರಿಯಾಗುತ್ತಿಲ್ಲ. ರೈತರ ಪಾಲಿಗೆ ಈ ಇಲಾಖೆ ಸತ್ತು ಹೋಗಿದೆ. ರೈತರ ಸಮಸ್ಯೆ ಯಾರೂ ಆಲಿಸುತ್ತಿಲ್ಲ. ಸರ್ವೆ ಇಲಾಖೆ ಈ ಸಮಸ್ಯೆಯಿಂದ ಜಮೀನುಗಳ ಮಾರಾಟ ಪ್ರಕ್ರಿಯೆ ನಡೆಯುತ್ತಿಲ್ಲ. ನಮ್ಮ ತಾಲ್ಲೂಕಿನಲ್ಲಿ 2,000 ಅಧಿಕ ಅರ್ಜಿಗಳ ವಿಲೇವಾರಿಯಾಗಬೇಕಿದೆ. ರೈತರು ತಮ್ಮ ಮಕ್ಕಳ ವಿದ್ಯಾಭ್ಯಾಸ, ಆಸ್ಪತ್ರೆ ವೆಚ್ಚ, ಮದುವೆ ಕಾರ್ಯಗಳಿಗೆ ಹಣ ಹೊಂದಿಸುವುದು ಕಷ್ಟವಾಗಿದೆ ಎಂದರು.

## ಶಿಕ್ಷಕರ ಸಂಘ ಚುನಾವಣೆ: 24 ನಾಮಪತ್ರ

• ಉದಯವಾಹಿನಿ, ದೊಡ್ಡಬಳ್ಳಾಪುರ

ರಾಜ್ಯ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ತಾಲ್ಲೂಕು ಘಟಕದ 16 ನಿರ್ದೇಶಕರ ಆಯ್ಕೆಗೆ ನಡೆಯಲಿರುವ ಚುನಾವಣೆಗೆ ನಾಮಪತ್ರ ಸಲ್ಲಿಸುವ ಕೊನೆಯ ದಿನ 24 ಮಂದಿ ನಾಮಪತ್ರ ಸಲ್ಲಿಸಿದ್ದಾರೆ ಎಂದು ಚುನಾವಣಾ ಅಧಿಕಾರಿ ಮಧು ತಿಳಿಸಿದ್ದಾರೆ. 16 ಸ್ಥಾನ ಪೈಕಿ 11 ಸಾಮಾನ್ಯ ಸ್ಥಾನಕ್ಕೆ 18, ಐದು ಮಹಿಳಾ ಮೀಸಲು ಸ್ಥಾನಕ್ಕೆ ಆರು ಮಂದಿ ನಾಮಪತ್ರ ಸಲ್ಲಿಸಿದ್ದಾರೆ. ನಾಮಪತ್ರ ಹಿಂಪಡೆಯಲು ಏಪ್ರಿಲ್ 14ರ ಸಂಜೆ 6 ಗಂಟೆವರೆಗೂ ಅವಕಾಶ ಇರುತ್ತದೆ. ತಾಲ್ಲೂಕಿನಲ್ಲಿ ಪ್ರಾಥಮಿಕ ಶಾಲೆಗಳ ಒಟ್ಟು 756 ಜನ ಮತದಾರರಿದ್ದು, ಏಪ್ರಿಲ್ 19 ರಂದು ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಬೆಳಗ್ಗೆ 8.30 ರಿಂದ ಸಂಜೆ 4.30ರವರೆಗೆ ಮತದಾನ ನಡೆಯಲಿದೆ. ಸಂಜೆ 6.30ಕ್ಕೆ ಮತಗಳ ಎಣಿಕೆ ನಡೆಯಲಿದೆ. ಸಾಮೂಹಿಕ ಶಿಕ್ಷಕರ ತಂಡದಿಂದ 11 ಪುರುಷರು, ಐವರು ಮಹಿಳಾ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. ವಸಂತಗೌಡ ಶಿಕ್ಷಕ ವೇದಿಕೆಯಿಂದ ಎಂಟು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ.

# ನಸೀರ್ ಅಹ್ಮದ್ ವಿರುದ್ಧ ಕ್ರಮಕ್ಕೆ ಏನು ಕಾರಣ

### ಸಿಎಂ ಆಪ್ತನ ವಿರುದ್ಧ ಹೈಕಮಾಂಡ್ ಕ್ರಮಕ್ಕೆ ಮುಂದಾಗಿದ್ಯಾಕೆ, ನಸೀರ್ ಪಾತ್ರ ಏನು

• ಉದಯವಾಹಿನಿ, ಬೆಂಗಳೂರು



ದಾವಣಗೆರೆ ದಕ್ಷಿಣದಲ್ಲಿ ಟಿಕೆಟ್‌ಗಾಗಿ ನಡೆದ ಫೈಟ್ ಕಾಂಗ್ರೆಸ್‌ನಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಸಿದೆ. ಕಾಂಗ್ರೆಸ್ ಮುಸ್ಲಿಂ ನಾಯಕರ ನಡುವಿನ ಭಿನ್ನಾಭಿಪ್ರಾಯ ಬಹಿರಂಗಗೊಂಡಿದೆ. ದಾವಣಗೆರೆಯಲ್ಲಿ ಸಮರ್ಥ್ ಸೋಲಿಸಲು ಷಡ್ಯಂತ್ರ ರೂಪಿಸಲಾಗಿದೆ ಎಂಬ ಆರೋಪವನ್ನು ಪಕ್ಷದ ಹೈಕಮಾಂಡ್ ಗಂಭೀರವಾಗಿ ಪರಿಗಣಿಸಿದೆ. ಈ ಹಿನ್ನೆಲೆಯಲ್ಲಿ ಆರೋಪ ಹೊತ್ತವರ ವಿರುದ್ಧ ಕ್ರಮ ಜರಗಿಸಲಾಗುತ್ತಿದೆ.

ಅಬ್ದುಲ್ ಜಬ್ಬಾರ್ ಬಳಿಕ ಇದೀಗ ನಸೀರ್ ಅಹ್ಮದ್ ವಿರುದ್ಧ ಕ್ರಮ ಆಗಿದೆ. ಅಬ್ದುಲ್ ಜಬ್ಬಾರ್ ಅವರು ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡದ್ದಾರೆ. ಶಿಸ್ತು ಕ್ರಮದ ಸುಳಿವಿನ ಬೆನ್ನಲ್ಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಇದರ ಬೆನ್ನಲ್ಲೇ ನಸೀರ್‌ಅಹ್ಮದ್‌ಅವರಿಗೂ ಸೂಚನೆ ನೀಡಲಾಗಿತ್ತು. ಆದರೆ ಅವರು ರಾಜೀನಾಮೆ ಕೊಡಲು ಹಿಂದೇಟು ಹಾಕಿದ್ದರು.

**ರಾತ್ರಿ ಹೈಡ್ರಾಮ:** ನಸೀರ್ ಅವರು ರಾಜೀನಾಮೆ ಕೊಡಲು ಕಾಂಗ್ರೆಸ್ ನಾಯಕತ್ವದಿಂದ ಒತ್ತಡ ತೀವ್ರಗೊಂಡಿತ್ತು. ಆದರೆ ಅವರು ಸಿಎಂ ಸಿದ್ದರಾಮಯ್ಯ ಅವರ ಸೂಚನೆಗೆ ನಸೀರ್‌ಕಾಯುತ್ತಿದ್ದರು. ಇತ್ತ ನಸೀರ್ ರಾಜೀನಾಮೆ ಪಡೆದುಕೊಳ್ಳುವಂತೆ ಸಿಎಂ ಸಿದ್ದರಾಮಯ್ಯ ಅವರಿಗೂ ಸೂಚನೆ ಬಂದಿತ್ತು. ಈ ಹಿನ್ನೆಲೆಯಲ್ಲಿ ನಸೀರ್ ರಾಜೀನಾಮೆ ಕೊಡಬಹುದು ಎಂದು ಸಿದ್ದರಾಮಯ್ಯ ಬಹಿರಂಗವಾಗಿ ಹೇಳಿದ್ದರು. ಆದರೆ ನಸೀರ್ ವಿರುದ್ಧ ಹೈಕಮಾಂಡ್ ಕ್ರಮದ ಸಾಧ್ಯತೆ ಬಗ್ಗೆ ಅವರ ಬೆಂಬಲಿಗರು ವಿರೋಧ ಸೂಚಿಸಿದ್ದರು.

**ನಸೀರ್ ಅಹ್ಮದ್ ಯಾರು, ಪ್ರಭಾವ ಏನು?:** ನಸೀರ್‌ಅಹ್ಮದ್ ಅವರು ವಿಧಾನಪರಿಷತ್ ಸದಸ್ಯ. ಮೂಲತ ಕೋಲಾರದವರು. ಸಿಎಂ ಸಿದ್ದರಾಮಯ್ಯ ಅವರ ಆಪ್ತ ಬಣದಲ್ಲಿ ಗುರುತಿಸಿಕೊಂಡವರು. ಹೀಗಾಗಿ ಸಿದ್ದರಾಮಯ್ಯ ಅವರ ರಾಜಕೀಯ ಕಾರ್ಯದರ್ಶಿ ಹುದ್ದೆಗೆ ನೇಮಕಗೊಂಡಿದ್ದರು. ಕ್ಯಾಬಿನೆಟ್ ದರ್ಜೆಯ ಸ್ಥಾನಮಾನ ಇದಾಗಿತ್ತು. ವಿಧಾನಪರಿಷತ್‌ನಲ್ಲಿ ಕಾಂಗ್ರೆಸ್ ಪರವಾಗಿ ಕೆಲವು ಸಂದರ್ಭದಲ್ಲಿ ಗಟ್ಟಿ ಧ್ವನಿಯಲ್ಲಿ ಮಾತನಾಡುತ್ತಿದ್ದರು.

ನಸೀರ್ ಅಹ್ಮದ್ ಅವರ ವಿಧಾನಪರಿಷತ್ ಅವಧಿ ಕೆಲವು ತಿಂಗಳುಗಳಲ್ಲಿ ಮುಕ್ತಾಯ ಆಗಲಿದೆ. ಮತ್ತೆ ವಿಧಾನಪರಿಷತ್ ಸದಸ್ಯತ್ವ ವಿಸ್ತರಣೆ ಆಗುವ ನಿರೀಕ್ಷೆಯಲ್ಲಿ ಅವರಿದ್ದರು. ಸಿದ್ದರಾಮಯ್ಯ ಅವರ ಆಪ್ತರಾಗಿರುವ ಕಾರಣಕ್ಕಾಗಿ ಮತ್ತೆ ಅವರ ಆಯ್ಕೆ ಸಾಧ್ಯತೆಗಳು ಇದ್ದವು ಆದರೆ ದಾವಣಗೆರೆ ದಕ್ಷಿಣದ ಬೆಳವಣಿಗೆ ಅವರ ಪಾಲಿಗೆ ಹಿನ್ನಡೆ ಉಂಟು ಮಾಡಿದೆ.

**ಕಾರಣ -1 : ಬಂಡಾಯ ಶಮನದ ಜವಾಬ್ದಾರಿ ನಿಭಾಯಿಸದೆ ಇದ್ದದ್ದು;** ದಾವಣಗೆರೆ ದಕ್ಷಿಣ ಟಿಕೆಟ್ ವಿಚಾರವಾಗಿ ನಡೆದ ಬಂಡಾಯದ ಪರಿಣಾಮ ಇದೀಗ ಜಮೀರ್ ಅಹ್ಮದ್ ಖಾನ್ ಅವರ ಆಪ್ತರ ತಲೆದಂಡ ಆಗುತ್ತಿದೆ. ದಾವಣಗೆರೆಯಲ್ಲಿ ಸಮರ್ಥ್‌ಗೆ ಟಿಕೆಟ್ ನೀಡುವ ಸಂದರ್ಭದಲ್ಲಿ ಜಮೀರ್ ಸೇರಿದಂತೆ ಆಪ್ತ ಬಣ ಒಪ್ಪಿಗೆ ನೀಡಿತ್ತು. ಆದರೆ, ಬಳಿಕ ವಿರೋಧ ವ್ಯಕ್ತಪಡಿಸಿತ್ತು. ಈ ಬೆನ್ನಲ್ಲೇ ಸಾದಿಕ್ ಪೈಲ್ವಾನ್ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದರು. ಸಾದಿಕ್ ಬಂಡಾಯ ಕಾಂಗ್ರೆಸ್ ಪಕ್ಷಕ್ಕೆ ಆತಂಕ ಸೃಷ್ಟಿಸಿತ್ತು. ಬಂಡಾಯ ಶಮನದ ಜವಾಬ್ದಾರಿಯನ್ನು ಜಮೀರ್ ಆಪ್ತರಿಗೆ ನೀಡಲು ರಾಜ್ಯ ನಾಯಕರು ಮುಂದಾಗಿದ್ದರು. ಈ ಹಿನ್ನೆಲೆಯಲ್ಲಿ ನಸೀರ್ ಅಹ್ಮದ್ ಅವರಿಗೆ ಸೂಚನೆ ನೀಡಲಾಗಿತ್ತು. ಸಾದಿಕ್ ಪೈಲ್ವಾನ್ ಅವರನ್ನು ಭೇಟಿ ಮಾಡಿ ಮನವೊಲಿಸಿ ಬೆಂಗಳೂರಿಗೆ ಕರೆತರುವ ಜವಾಬ್ದಾರಿ ಇದಾಗಿತ್ತು. ಈ ಹಿನ್ನೆಲೆಯಲ್ಲಿ ಅವರು ಹೆಲಿಕಾಪ್ಟರ್ ಮೂಲಕ ದಾವಣಗೆರೆಗೆ ತೆರಳಲು ಸಿದ್ದರಾಗಿದ್ದರು. ಆದರೆ, ದಿಢೀರ್ ಆಗಿ ಅವರು ಹಿಂದೆ ಸರಿದರು. ದಾವಣಗೆರೆಗೆ ಬಂಡಾಯ ಶಮನ ಮಾಡಲು ತೆರಳುವುದಿಲ್ಲ ಎಂದು ನಿರ್ಧಾರ ತಿಳಿಸಿದರು. ಈ ಹಿನ್ನೆಲೆಯಲ್ಲಿ ಸಲೀಂ ಅಹ್ಮದ್, ರಿಜ್ವಾನ್ ಅರ್ಷದ್ ಅವರಿಗೆ ಪಕ್ಷದ ನಾಯಕತ್ವ ಜವಾಬ್ದಾರಿ ನೀಡಿತ್ತು. ಪಕ್ಷದ ಸೂಚನೆಯಂತೆ ಇವರಿಬ್ಬರು ತೆರಳಿ ಸಾದಿಕ್ ಪೈಲ್ವಾನ್ ಜೊತೆಗೆ ಮಾತುಕತೆ ನಡೆಸಿದ್ದರು.

**ಕಾರಣ -2 : ಜಮೀರ್ ಆಪ್ತ ಬಣದಲ್ಲಿ ಗುರುತಿಸಿಕೊಂಡಿದ್ದು**

ದಾವಣಗೆರೆ ದಕ್ಷಿಣದ ಬಂಡಾಯಕ್ಕೆ ಮೂಲ ಕಾರಣವೇ ಜಮೀರ್ ಅಸಮಾಧಾನ ಎಂಬುವುದು ಸ್ಪಷ್ಟ. ಕಾಂಗ್ರೆಸ್ ಪಕ್ಷದ ಮುಸ್ಲಿಂ ನಾಯಕರ ನಡುವೆ ಎರಡು ಬಣಗಳಾಗಿವೆ. ಜಮೀರ್ ನೇತೃತ್ವದ ಒಂದು ಬಣ, ಸಲೀಂ ಅಹ್ಮದ್, ರಿಜ್ವಾನ್, ಇತರ ಶಾಸಕರು ಮತ್ತೊಂದು ಬಣದಲ್ಲಿದ್ದಾರೆ. ನಸೀರ್ ಅಹ್ಮದ್ ಅವರು ಜಮೀರ್ ಬಣದಲ್ಲಿ ಗುರುತಿಸಿಕೊಂಡಿದ್ದಾರೆ. ಈ ಬಣ ಸಿದ್ದರಾಮಯ್ಯ ಅವರಿಗೆ ಆಪ್ತವಾಗಿದೆ. ಹೀಗಾಗಿ ಜಮೀರ್‌ಗೆ ಎಚ್ಚರಿಗೆ ನೀಡುವ ನಿಟ್ಟಿನಲ್ಲಿ ಅವರ ಆಪ್ತರ ವಿರುದ್ಧ ಕ್ರಮ ಆಗುತ್ತಿದೆ. ಅಬ್ದುಲ್ ಜಬ್ಬಾರ್ ರಾಜೀನಾಮೆ ಕೊಟ್ಟ ಬೆನ್ನಲ್ಲೇ ನಸೀರ್ ಅವರನ್ನು ರಾಜಕೀಯ ಕಾರ್ಯದರ್ಶಿ ಹುದ್ದೆಯಿಂದ ಬಿಡುಗಡೆ ಮಾಡಲಾಗಿದೆ.

**ಅಹ್ಮದ್ ಅವರ ನಿವಾಸದಲ್ಲಿ ಮಾತುಕತೆ**

**ಸೋಮವಾರ ರಾತ್ರಿ ಬೆಂಗಳೂರಿನಲ್ಲಿರುವ ನಸೀರ್ ಅಹ್ಮದ್ ಅವರ ನಿವಾಸದಲ್ಲಿ ಬೆಂಬಲಿಗರು ಜಮಾಯಿಸಿದ್ದರು. ಈ ಬೆಳವಣಿಗೆಯ ಹಿನ್ನೆಲೆಯಲ್ಲಿ ನಸೀರ್ ಅಹ್ಮದ್ ಅವರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ಇದರ ಬೆನ್ನಲ್ಲೇ ಕಾರ್ಯದರ್ಶಿ ಹುದ್ದೆಯಿಂದ ಬಿಡುಗಡೆಯ ಕುರಿತಾಗಿ ಆದೇಶ ಪತ್ರ ಹೊರಬಿದ್ದಿದೆ.**

**ರಾಜೀನಾಮೆಯೋ, ಶಿಸ್ತು ಕ್ರಮವೋ?**

**ನಸೀರ್ ಅಹ್ಮದ್ ಅವರ ವಿರುದ್ಧ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ಅವರಿಗೆ ರಾಜೀನಾಮೆ ನೀಡುವಂತೆ ಸೂಚನೆ ನೀಡಲಾಗಿತ್ತು. ದಾವಣಗೆರೆ ದಕ್ಷಿಣಕ್ಕೆ ಸಂಬಂಧಿಸಿದಂತೆ ಅವರ ಪಾತ್ರ ಏನಿತ್ತು ಎಂಬ ಬಗ್ಗೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರ ಹೈಕಮಾಂಡ್‌ಗೆ ಮಾಹಿತಿಯನ್ನು ನೀಡಿದ್ದರು. ಈ ಮಾಹಿತಿಯಲ್ಲಿ ಮೂವರ ಹೆಸರು ಉಲ್ಲೇಖವಾಗಿತ್ತು. ಈ ಮೂವರ ಪೈಕಿ ನಸೀರ್ ಅಹ್ಮದ್ ಅವರ ಹೆಸರು ಉಲ್ಲೇಖಗೊಂಡಿತ್ತು.**

## ಬೆಂಗಳೂರಿನ ಟ್ರಾಫಿಕ್‌ಗೆ ಪಾದಚಾರಿಗಳೇ ಕಾರಣ: ಉದ್ಯಮಿ ಕೊಟ್ಟ ಕಾರಣ ಹೀಗಿದೆ

• ಉದಯವಾಹಿನಿ, ಬೆಂಗಳೂರು

ಎಚ್‌ಎಎಲ್ ರಸ್ತೆಯ ಟ್ರಾಫಿಕ್ ಸಮಸ್ಯೆಗೆ ಪಾದಚಾರಿಗಳೇ ಕಾರಣ ಎಂದು ಉದ್ಯಮಿ ಆದಿತ್ಯ ಆನಂದ್ ಎಂಬುವವರು ಹೇಳಿದ್ದಾರೆ. ಸದ್ಯ, ಇವರ ಹೇಳಿಕೆಯು ಸಾಮಾಜಿಕ ಮಾಧ್ಯಮದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ. ಈ ಕುರಿತು ಲಿಂಕ್ಸ್ ಇನ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಅವರು, ನಾನು ಪ್ರತಿದಿನ ಬೆಳಿಗ್ಗೆ 6:40ಕ್ಕೆ ಬ್ಯಾಡ್ಮಿಂಟನ್ ಆಡಲು ಮನೆಯಿಂದ ಹೊರಡುತ್ತೇನೆ. ಆಟದ ಮೈದಾನವು ನನ್ನ ಮನೆಯಿಂದ 5 ಕಿ.ಮೀ ದೂರದಲ್ಲಿದೆ. ಸಾಮಾನ್ಯವಾಗಿ ಬೆಳಿಗ್ಗೆ ಅಲ್ಲಿಗೆ ತಲುಪಲು 10 ನಿಮಿಷಕ್ಕಿಂತ ಹೆಚ್ಚು ಸಮಯ ಬೇಕಾಗುವುದಿಲ್ಲ. ಆದರೆ, ನಾನು ಯಾವಾಗಲೂ ತಡವಾಗಿಯೇ ತಲುಪುತ್ತೇನೆ ಎಂದು ಹೇಳಿಕೊಂಡಿದ್ದಾರೆ. ಅದೇ ದಾರಿಯಲ್ಲಿ ಹಳೇ ಏರ್‌ಪೋರ್ಟ್ ರಸ್ತೆ, ಎಚ್.ಎ.ಎಲ್ ಕಚೇರಿ ಕೂಡ ಇದೆ. ಅಲ್ಲಿನ ನೌಕರರಿಗೆ ಬೆಳಿಗ್ಗೆ 7 ಗಂಟೆಯಿಂದ ಕೆಲಸದ ಶಿಫ್ಟ್ ಆರಂಭವಾಗುತ್ತದೆ. ಅಲ್ಲಿನ ಉದ್ಯೋಗಿಗಳು ಏಕಾಏಕಿ ಎಡದಿಂದ ಬಲಕ್ಕೆ (ಕಚೇರಿಯ ಕಡೆಗೆ) ದಾಟುತ್ತಾರೆ ಎಂದು ಹೇಳಿದ್ದಾರೆ.

ರಸ್ತೆ ದಾಟಲು ಅಲ್ಲಿ ಸುಸಜ್ಜಿತವಾದ ಪಾದಚಾರಿ ಮೇಲ್ಸೇತುವೆ ಇದ್ದರೂ, ಜನರು ಅದನ್ನು ಬಳಕೆ ಮಾಡುವುದಿಲ್ಲ. ಬದಲಾಗಿ, ರಸ್ತೆಯಲ್ಲೇ ಗುಂಪು ಗುಂಪಾಗಿ ದಾಟುತ್ತಾರೆ. ಇದರಿಂದ ಟ್ರಾಫಿಕ್ ದಟ್ಟಣೆ ಇನ್ನಷ್ಟು ಹೆಚ್ಚಾಗುತ್ತದೆ ಎಂದಿದ್ದಾರೆ. ಇವರ ಪೋಸ್ಟ್‌ಗೆ ಉತ್ತರಿಸಿದ ನೆಟ್ಟಿಗರು ನಗರದ ರಸ್ತೆಗಳು ಕಾರುಗಳಿಗಾಗಿ ಮಾತ್ರವಲ್ಲ, ಟ್ರಾಫಿಕ್ ದಟ್ಟಣೆಗೆ ಪಾದಾಚಾರಿಗಳೇ ಮುಖ್ಯ ಕಾರಣವಲ್ಲ.. ಬದಲಾಗಿ ಸುಸಜ್ಜಿತ ವ್ಯವಸ್ಥೆ ಇರಬೇಕು ಎಂದು ಅಸಮಾಧಾನ ಹೊರಹಾಕಿದ್ದರೆ, ಇನ್ನೂ ಕೆಲವರು ಇವರ ಪೋಸ್ಟ್‌ಗೆ ಮೆಚ್ಚುಗೆಯನ್ನೂ ವ್ಯಕ್ತಪಡಿಸಿದ್ದಾರೆ.

## 9.13 ಕೋಟಿ ಮೌಲ್ಯದ ಗಾಂಜಾ ಪತ್ತೆ


• ಉದಯವಾಹಿನಿ, ಬೆಂಗಳೂರು

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 9.13 ಕೋಟಿ ಮೌಲ್ಯದ 26.15 ಕೆ.ಜಿ. ಹೈಡ್ರೋಪೋನಿಕ್ ಗಾಂಜಾವನ್ನು ಕಸ್ಟಮ್ಸ್ ಅಧಿಕಾರಿಗಳು ಪತ್ತೆ ಮಾಡಿದ್ದಾರೆ. ಬ್ಯಾಂಕಾಕ್‌ನಿಂದ ಬೆಂಗಳೂರಿಗೆ ಪ್ರತ್ಯೇಕ ವಿಮಾನಗಳಲ್ಲಿ ಬಂದಿಳಿದ ನಾಲ್ವರು ಪ್ರಯಾಣಿಕರ ಬ್ಯಾಗ್‌ಗಳ ತಪಾಸಣೆ ನಡೆಸಿದಾಗ, ಕೋಟ್ಯಂತರ ರೂಪಾಯಿ ಮೌಲ್ಯದ ಗಾಂಜಾ ಪತ್ತೆಯಾಗಿದೆ. ನಾಲ್ವರು ಪೆಡ್ಲರ್‌ಗಳನ್ನು ವಿಮಾನ ನಿಲ್ದಾಣದ ಭದ್ರತಾ ಸಿಬ್ಬಂದಿ ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ. ಕೆಲವು ದಿನಗಳ ಹಿಂದೆ 5.79 ಕೋಟಿ ಮೌಲ್ಯದ ಮಾದಕ ವಸ್ತುಗಳು ಪತ್ತೆಯಾಗಿದ್ದವು. ಅದರ ಬೆನ್ನಲ್ಲೇ ಈಗ ಮತ್ತೆ ಅಪಾರ ಪ್ರಮಾಣದ ಡ್ರಗ್ಸ್ ಅನ್ನು ಅಧಿಕಾರಿಗಳು ಜಪ್ತಿ ಮಾಡಿದ್ದಾರೆ. ಬ್ಯಾಂಕಾಕ್‌ನಲ್ಲಿ ಕಡಿಮೆ ಬೆಲೆಗೆ ದೊರೆಯುವ ಡ್ರಗ್ಸ್ ಅನ್ನು ಕಳ್ಳಸಾಗಣೆ ಮೂಲಕ ನಗರಕ್ಕೆ ಪೂರೈಕೆ ಮಾಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

# ಇಂಜಿನಿಯರಿಂಗ್ ಕೋರ್ಸ್ ಶುಲ್ಕ ಹೆಚ್ಚಳ : ಪೋಷಕರಿಗೆ ಮತ್ತೊಂದು ಹೊರೆ ಹೇರಿದ ಸರ್ಕಾರ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದ ಇಂಜಿನಿಯರಿಂಗ್ ವಿದ್ಯಾರ್ಥಿಗಳು, ಅವರ ಪೋಷಕರಿಗೆ ರಾಜ್ಯ ಸರ್ಕಾರ ಮತ್ತೊಂದು ಆಘಾತ ನೀಡಿದೆ. 2026-27ನೇ ಶೈಕ್ಷಣಿಕ ಸಾಲಿಗೆ ಅನ್ವಯವಾಗುವಂತೆ ಇಂಜಿನಿಯರಿಂಗ್ ಕೋರ್ಸ್‌ಗಳ ಶುಲ್ಕವನ್ನು ಶೇಕಡಾ 7.5 ರಷ್ಟು ಹೆಚ್ಚಿಸಲು ತೀರ್ಮಾನಿಸಲಾಗಿದೆ. ಸತತ ಎರಡನೇ ವರ್ಷವೂ ಈ ಶುಲ್ಕ ಏರಿಕೆ ಮುಂದುವರಿದಿರುವುದು ತಾಂತ್ರಿಕ ಶಿಕ್ಷಣದ ಕನಸು ಕಾಣುತ್ತಿರುವ ಮಧ್ಯಮ, ಕೆಳಮಧ್ಯಮ ವರ್ಗದ ಕುಟುಂಬಗಳಿಗೆ ಇದು ಮತ್ತಷ್ಟು ಆರ್ಥಿಕ ಹೊಡೆತ ನೀಡಿದೆ. ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದಡಿ ಸೀಟು ಪಡೆಯುವ ವಿದ್ಯಾರ್ಥಿಗಳು ಇನ್ನು ಮುಂದೆ ಹೆಚ್ಚಿನ ಮೊತ್ತ ಪಾವತಿಸಬೇಕಾಗುತ್ತದೆ. ಒಂದೇ ವರ್ಷದಲ್ಲಿ ಸುಮಾರು 6,000 ರೂ. ಗಳಿಂದ 7,000 ರೂ.ಗಳವರೆಗೆ ಹೆಚ್ಚಳವಾಗಿದೆ. ಕಳೆದ ವರ್ಷವಷ್ಟೇ



ಸರ್ಕಾರ ಶುಲ್ಕ ಹೆಚ್ಚಿಸಿತ್ತು. ಅದರ ಬೆನ್ನಲ್ಲೇ ಈ ವರ್ಷವೂ ಏರಿಕೆ ಮಾಡಿರುವುದು ಪೋಷಕರ ಆಕ್ರೋಶಕ್ಕೆ ಕಾರಣವಾಗಿದೆ.

**ಸರ್ಕಾರದ ವಾದ :** ಸಿಬ್ಬಂದಿ ವೇತನ, ಮೂಲಸೌಕರ್ಯ ನಿರ್ವಹಣೆ, ಹಣದುಬ್ಬರ ಮತ್ತು ತಾಂತ್ರಿಕ ಅಪ್‌ಗ್ರೇಡ್‌ಗಳನ್ನು ಎದುರಿಸಲು ಶುಲ್ಕ ಹೆಚ್ಚಿಸುವ ಅನಿವಾರ್ಯತೆ ಇದೆ ಎಂದು ಸರ್ಕಾರ ವಾದಿಸುತ್ತದೆ. ಕಾಲೇಜುಗಳ ಆಡಳಿತ ಮಂಡಳಿಗಳು ಬಹುಕಾಲದಿಂದ ಶುಲ್ಕ ಪರಿಷ್ಕರಣೆಯ ಒತ್ತಡ ಹೇರಿದ್ದವು. ಅದರ ಆಧಾರದ ಮೇಲೆ ಶುಲ್ಕ ನಿಯಂತ್ರಣ ಸಮಿತಿ ಈ ಹೆಚ್ಚಳಕ್ಕೆ ಅನುಮೋದನೆ ನೀಡಿದೆ.

ಈಗಾಗಲೇ ನಿತ್ಯ ಬಳಕೆಯ ವಸ್ತುಗಳಿಂದ ಹಿಡಿದು ಇಂಧನ, ವಿದ್ಯುತ್ ಶುಲ್ಕ ಎಲ್ಲವೂ ಏರಿದೆ. ಅದರ ಮೇಲೆ ಇಂಜಿನಿಯರಿಂಗ್ ಶುಲ್ಕ ಇನ್ನಷ್ಟು ಏರಿಕೆಯಾಗುತ್ತಿರುವುದು ಸಹಿಸಲಾಗದು ಎಂಬ ಮಾತು ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ. ಕಳೆದ ವರ್ಷವೂ ಶುಲ್ಕ ಏರಿಕೆ ವಿರುದ್ಧ ಪ್ರತಿಭಟನೆ ನಡೆದಿತ್ತು. ಆದರೂ ಸರ್ಕಾರ ಈಗ ಮತ್ತೆ ಅದೇ ತಪ್ಪನ್ನು ಪುನರಾವರ್ತಿಸಿದೆ. ಪರೀಕ್ಷಾ ಶುಲ್ಕ, ಪ್ರವೇಶ ಶುಲ್ಕ, ಪ್ರಯೋಗಾಲಯ ಶುಲ್ಕ ಸೇರಿದಂತೆ ಹಲವು ನೆಪಗಳಲ್ಲಿ ಕಾಲೇಜುಗಳು ಹೆಚ್ಚುವರಿ ಹಣ ವಸೂಲಿ ಮಾಡುತ್ತಿವೆ. ಮೂಲ ಶುಲ್ಕ ಏರಿಕೆ ಅಂತಿಮ ಹೊರೆಯಾಗಿ ಪರಿಣಮಿಸಿದೆ.


**ಪ್ರತಿಭಟನೆ ಮತ್ತು ಸರ್ಕಾರಕ್ಕೆ ಮನವಿ :** ವಿದ್ಯಾರ್ಥಿ ಸಂಘಗಳು ಮತ್ತು ಪೋಷಕರ ಸಂಘಟನೆಗಳು ಸರ್ಕಾರದ ಈ ನಿರ್ಧಾರವನ್ನು ಖಂಡಿಸಿ ಪ್ರತಿಭಟನೆಗೆ ಕರೆ ನೀಡಿವೆ. ಬೆಂಗಳೂರಿನಲ್ಲಿ ಮುಂಬರುವ ದಿನಗಳಲ್ಲಿ ವಿದ್ಯಾರ್ಥಿಗಳು ಸಿಇಟಿ ಕಚೇರಿಗೆ ಮುತ್ತಿಗೆ ಹಾಕುವ ಸಾಧ್ಯತೆಯಿದೆ. ಕೂಡಲೇ ಈ ಪ್ರಸ್ತಾವನೆಯನ್ನು ಮರು ಪರಿಶೀಲಿಸಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಶುಲ್ಕ ಹೆಚ್ಚಳವನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಲಾಗಿದೆ.

**ಹೊಸ ಶುಲ್ಕ ರಚನೆ**

**ಕಾಲೇಜುಗಳು (ಹಳೆಯ ಶುಲ್ಕ- 81,800)**
**ಹೆಚ್ಚಳದ ನಂತರ 87,935 ರೂ.**
**ಕಾಲೇಜುಗಳು (ಹಳೆಯ ಶುಲ್ಕ- 91,000)**
**ಹೆಚ್ಚಳದ ನಂತರ 97,825 ರೂ.**

## ಶಾಲಾ ದಾಖಲಾತಿ ಆಂದೋಲನ

• ಉದಯವಾಹಿನಿ, ವಿಜಯಪುರ




ಇಲ್ಲಿನ ಸರ್ಕಾರಿ ಮಾದರಿ ಹೆಣ್ಣುಮಕ್ಕಳ ಪಾಠಶಾಲೆಯಿಂದ 2026-27 ನೇ ಸಾಲಿನ ಶಾಲಾ ದಾಖಲಾತಿ ಆಂದೋಲನ ಅಂಗವಾಗಿ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಜಾಥಾ ನಡೆಯಿತು. ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಿಸಲು, ಸರ್ಕಾರಿ ಶಾಲೆಯಲ್ಲಿ ಸಿಗುವ ಉಚಿತ ಸೌಲಭ್ಯಗಳನ್ನು ಪರಿಚಯಿಸಲು ಮತ್ತು ಶಾಲೆ ಬಿಟ್ಟ ಮಕ್ಕಳನ್ನು ಮರಳಿ ಸೇರಿಸಲು, ಅಭಿಯಾನದ ಬಗ್ಗೆ ಪೋಷಕರಲ್ಲಿ ಜಾಗೃತಿ ಮೂಡಿಸಲಾಯಿತು.

ಪಠ್ಯಪುಸ್ತಕಗಳ ಜೊತೆಗೆ ನೋಟ್‌ಬುಕ್, ಟ್ರ್ಯಾಕ್ ಸೂಟ್, ಶೂ ಮತ್ತು ಉಚಿತವಾಗಿ ಕರಾಟೆ ತರಬೇತಿ ನೀಡಲಾಗುತ್ತಿದೆ. ಪ್ರತಿದಿನ ಬೆಳಗಿನ ಉಪಹಾರ, ಮಧ್ಯಾಹ್ನದ ಬಿಸಿಯೂಟದೊಂದಿಗೆ ಬಾಳೆಹಣ್ಣು, ಮೊಟ್ಟೆ ಮತ್ತು ಹಾಲನ್ನು ಒದಗಿಸಲಾಗುತ್ತಿದೆ. ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಸಹಯೋಗದೊಂದಿಗೆ ನೂತನ ಕಟ್ಟಡಗಳು, ಕಂಪ್ಯೂಟರ್ ಲ್ಯಾಬ್ ಹಾಗೂ ಅತ್ಯಾಧುನಿಕ ಗ್ರಂಥಾಲಯ ಸೌಲಭ್ಯವಿದೆ ಎಂದು ಶಾಲಾ ಮುಖ್ಯಶಿಕ್ಷಕ ಮನೋಹರ್ ತಿಳಿಸಿದರು. ಈಗಾಗಲೇ ಶಾಲೆಯಲ್ಲಿ 500 ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದು, ಹೆಚ್ಚುತ್ತಿರುವ ದಾಖಲಾತಿಗೆ ಅನುಗುಣವಾಗಿ ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲಾಗುತ್ತಿದೆ. ನುರಿತ ಹೆಚ್ಚುವರಿ ಶಿಕ್ಷಕರ ನಿಯೋಜನೆ ಮಾಡಲಾಗಿದೆ. ಈಗಿರುವ ಪ್ರತಿಯೊಬ್ಬ ವಿದ್ಯಾರ್ಥಿ ಕನಿಷ್ಠ ಒಬ್ಬ ಮಗುವನ್ನಾದರೂ ಸರ್ಕಾರಿ ಶಾಲೆಗೆ ಸೇರಿಸಲು ಪ್ರೇರೇಪಿಸಿದರೆ ಸಾಕು, ನಮ್ಮ ಶಾಲೆ ಇತರರಿಗೆ ಮಾದರಿಯಾಗಿ ಮುಂದುವರಿಯಲಿದೆ ಎಂದರು.

## ಜಿಬಿಎ ಚುನಾವಣೆ ಮುಂದೂಡಲು ರಾಜಕೀಯ ಷಡ್ಯಂತ್ರ

• ಉದಯವಾಹಿನಿ, ಬೆಂಗಳೂರು




ಬರುವ ಜೂನ್ ತಿಂಗಳಿನೊಳಗೆ ಜಿಬಿಎ ಚುನಾವಣೆ ನಡೆಸಲು ಸುಪ್ರೀಂ ಕೋರ್ಟ್ ನೀಡಿರುವ ಗಡುವು ಸಮೀಪಿಸುತ್ತಿರುವಂತೆ ಚುನಾವಣೆ ಮುಂದೂಡುವ ಕಸರತ್ತು ಆರಂಭಗೊಂಡಿದೆ.

ಕೇಂದ್ರ ಸರ್ಕಾರದ ಜನಗಣತಿ ಕಾರ್ಯ ನಡೆಯುತ್ತಿರುವ ಹಿನ್ನೆಲೆಯಲ್ಲಿ ಜಿಬಿಎ ಚುನಾವಣೆಯನ್ನು ತಾತ್ಕಾಲಿಕವಾಗಿ ಮುಂದೂಡುವಂತೆ ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆಯಲು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್‌ರಾವ್ ನಿರ್ಧರಿಸಿದ್ದಾರೆ.

ಜನಗಣತಿ ಕಾರ್ಯಕ್ಕೆ ಸರ್ಕಾರ, ಜಿಬಿಎ ಸಿಬ್ಬಂದಿಗಳನ್ನು ನಿಯೋಜಿಸುವುದರಿಂದ, ಚುನಾವಣೆಯನ್ನು ನಡೆಸಲು ಅಗತ್ಯ ಸಿಬ್ಬಂದಿ ಕೊರತೆ ಉಂಟಾಗುವ ಸಾಧ್ಯತೆ ಇದೆ. ಈಗಾಗಲೇ ಹಲವಾರು ಸಿಬ್ಬಂದಿಗಳು ಜನಗಣತಿ ಕಾರ್ಯದಲ್ಲಿ ತೊಡಗಿಸಿಕೊಂಡಿರುವುದರಿಂದ ಚುನಾವಣಾ ಪ್ರಕ್ರಿಯೆಯನ್ನು ಸುಗಮವಾಗಿ ನಡೆಸುವುದು ಕಷ್ಟಕರವಾಗಲಿದೆ ಎಂಬ ವಾದದ ಮೇಲೆ ಅವರು ಪತ್ರ ಬರೆಯಲು ನಿರ್ಧರಿಸಿದ್ದಾರೆ.

ಇದರ ಜೊತೆಗೆ ವಾರ್ಡ್‌ಗಳ ಗಡಿ ಗುರುತಿಸುವ ಕಾರ್ಯ ಇನ್ನೂ ಪೂರ್ಣಗೊಂಡಿಲ್ಲ. ಈ ಪ್ರಕ್ರಿಯೆ ಪೂರ್ಣಗೊಳ್ಳಲು ಹೆಚ್ಚಿನ ಕಾಲಾವಕಾಶ ಅಗತ್ಯವಿರುವುದರಿಂದ, ಚುನಾವಣೆಯ ವೇಳಾಪಟ್ಟಿಗೆ ಮತ್ತಷ್ಟು ಸಮಯ ಬೇಕು ಎಂದು ಅವರು ಮನವಿ ಮಾಡಿಕೊಳ್ಳಲಿದ್ದಾರೆ.


ಹೀಗಾಗಿ ಜಿಬಿಎ ಚುನಾವಣೆಯನ್ನು ಕನಿಷ್ಠ ಎರಡು ರಿಂದ ಮೂರು ತಿಂಗಳುಗಳ ಕಾಲ ಮುಂದೂಡಲು ಅನುಮತಿ ನೀಡುವಂತೆ ಅವರು ಕೇಳಿಕೊಳ್ಳಲಿದ್ದಾರೆ ಎಂದು ಜಿಬಿಎ ಮೂಲಗಳು ಮಾಹಿತಿ ನೀಡಿವೆ.

ಜೂನ್ ತಿಂಗಳಿನ ಬದಲು ಬರುವ ಆಗಸ್ಟ್ ಅಂತ್ಯದೊಳಗೆ ಚುನಾವಣೆ ನಡೆಸಲು ಅವಕಾಶ ನೀಡುವಂತೆ ಮನವಿ ಮಾಡುವ ಸಾಧ್ಯತೆಗಳಿವೆ ಎಂದು ತಿಳಿದುಬಂದಿದೆ. ಜಿಬಿಎ ಮುಖ್ಯ ಆಯುಕ್ತರ ಮನವಿ ಪತ್ರವನ್ನೇ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿ ಜಿಬಿಎ ಚುನಾವಣೆಯನ್ನು ಮತ್ತೆ ಮುಂದಕ್ಕೆ ಹಾಕಿಸುವ ಪ್ರಯತ್ನಕ್ಕೆ ಸರ್ಕಾರ ಕೈ ಹಾಕಿದೆ ಎಂದು ಗೊತ್ತಾಗಿದೆ. ಡಿಕೆಶಿ ಸಿಎಂ ಆಗುವ ಕನಸು ನನಸಾಗಾದಿರುವುದರಿಂದ ಹೇಗಾದರೂ ಮಾಡಿ ಜಿಬಿಎ ಚುನಾವಣೆಯನ್ನು ಮುಂದೂಡಿಸುವ ಕಸರತ್ತು ಆರಂಭಿಸಲಾಗಿದೆ.

ಒಂದು ವೇಳೆ ಸುಪ್ರೀಂ ಕೋರ್ಟ್ ಸರ್ಕಾರ ನಡವಳಿಕೆಗೆ ಛೀಮಾರಿ ಹಾಕಿದ್ದೇ ಆದರೆ ನಿಗದಿಯಂತೆ ಜೂನ್ ತಿಂಗಳಿನಲ್ಲೇ ಚುನಾವಣೆ ನಡೆಸಲು ಸಿದ್ದತೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದು

# ಸಚಿವ ಪ್ರಲ್ಲಾದ್ ಜೋಶಿ ಸಂಗೊಳ್ಳಿ ರಾಯಣ್ಣನನ್ನು ಅವಮಾನಿಸಿದರೆ? ಏನಿದು ಹೊಸ ವಿವಾದ

• ಉದಯವಾಹಿನಿ, ಬೆಂಗಳೂರು



ಬೆಂಗಳೂರು-ಮುಂಬೈ ಹೊಸ ವಂದೇ ಭಾರತ್ ರೈಲಿನ ಬಗ್ಗೆ ಕೇಂದ್ರ ಸಚಿವ ಪ್ರಲಾದ್ ಜೋಶಿ ಅವರು ಮಾಹಿತಿ ಹಂಚಿಕೊಂಡು ನಿನ್ನೆ ಟ್ವಿಟ್ ಹಾಗೂ ಫೇಸ್‌ಬುಕ್ ಪೋಸ್ಟ್ ಮಾಡಿದ್ದರು. ಅವರ ಪೋಸ್ಟ್‌ನಲ್ಲಿ ಕನ್ನಡದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನಿಗೆ ಅವಮಾನಿಸಲಾಗಿದೆ ಎಂದು ಕೆಲವರು ಆರೋಪಿಸಿ ಪ್ರತಿಕ್ರಿಯೆ ನೀಡುತ್ತಿದ್ದಾರೆ. ಮತ್ತೆ ಕೆಲವರು ಪ್ರತ್ಯೇಕವಾಗಿ ಪೋಸ್ಟ್ ಹಂಚಿಕೊಂಡು ಜೋಶಿ ಅವರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಬೆಂಗಳೂರು-ಮುಂಬೈ ಹೊಸ ವಂದೇ ಭಾರತ್ ರೈಲು ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕೇಂದ್ರ ರೈಲು ನಿಲ್ದಾಣದಿಂದ (ಕೆಎಸ್‌ಆರ್) ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ ಟರ್ಮಿನಲ್ (ಸಿಎಸ್‌ಎಂಟಿ) ನಡುವೆ ಸಂಚರಿಸುವುದು ಖಾತ್ರಿಯಾಗಿದೆ. ಈ ರೈಲು ಹುಬ್ಬಳ್ಳಿ ಮಾರ್ಗದ ಬದಲಾಗಿ ಕಲಬುರ್ಗಿ ಕಡೆಯಿಂದ ಸಂಚರಿಸಲಿದೆ. ಇದೇ



ಮಾಹಿತಿಯನ್ನು ಹಂಚಿಕೊಂಡು ಜೋಶಿ ಅವರು ಪೋಸ್ಟ್‌ಗಳನ್ನು ಮಾಡಿದ್ದರು. ಆದರೆ, ಪೋಸ್ಟ್‌ನಲ್ಲಿ 'ಸಿಎಸ್‌ಎಂಟಿ'ಗೆ ಛತ್ರಪತಿ ಶಿವಾಜಿ ಮಹಾರಾಜ ಟರ್ಮಿನಲ್ ಎಂದು ಬರೆದು, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕೇಂದ್ರ ರೈಲು ನಿಲ್ದಾಣಕ್ಕೆ ಮಾತ್ರ 'ಕೆಎಸ್ ಆರ್' ಎಂದು ಬರೆದಿದ್ದಾರೆ ಎಂದು ಖ್ಯಾತೆ ತೆಗೆಯಲಾಗಿದೆ. ಈ ನಿಟ್ಟಿನಲ್ಲಿ ಬಿಗ್ ಬಾಸ್ ಮಾಜಿ ಸ್ಪರ್ಧಿ ರೂಪೇಶ್ ರಾಜಣ್ಣ, ಸಂಗೊಳ್ಳಿ ರಾಯಣ್ಣರ ಕೆಲ ಅಭಿಮಾನಿಗಳು, ಹಲವು ಕನ್ನಡಪರ ಹೋರಾಟಗಾರರು ಸೇರಿದಂತೆ ಅನೇಕರು ಜೋಶಿ ಅವರನ್ನು ವಿರೋಧಿಸಿದ್ದಾರೆ.

### 6 ತಿಂಗಳಲ್ಲಿ 818 ಸ್ವತ್ತುಗಳಿಗಷ್ಟೇ ಎ-ಖಾತಾ ಭಾಗ್ಯ! ದಾಖಲೆಗಳೇ ಪ್ರಮುಖ ಕಾರಣ

# ಬೆಂಗಳೂರಲ್ಲಿ ಆಸ್ತಿ ಮಾಲೀಕರಿಗೆ ಎ ಖಾತಾ ಗಗನಕುಸುಮ

• ಉದಯವಾಹಿನಿ, ಬೆಂಗಳೂರು

ಮಹಾನಗರದಲ್ಲಿನ ಬಿ-ಖಾತಾ ಆಸ್ತಿ ಮಾಲೀಕರಿಗೆ ತಮ್ಮ ಸ್ವತ್ತುಗಳಿಗೆ ಎ-ಖಾತಾ ಪಡೆದುಕೊಳ್ಳುವುದು ಗಗನಕುಸುಮವೇ ಆಗಿದೆ. ಪಂಚ ಪಾಲಿಕೆಗಳು ಕಳೆದ 6 ತಿಂಗಳಲ್ಲಿ ಕೇವಲ 818 ಆಸ್ತಿಗಳಿಗಷ್ಟೇ ಎ-ಖಾತೆ ನೀಡಿವೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) 5 ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಬಿ-ಖಾತಾ ಆಸ್ತಿಗಳನ್ನು ಎ-ಖಾತಾ ಆಸ್ತಿಗಳನ್ನಾಗಿ ಪರಿವರ್ತಿಸುವ ಸಂಬಂಧ ಸಾರ್ವಜನಿಕರು ಅರ್ಜಿ ಸಲ್ಲಿಸಲು 2025ರ ಅ.15ರಿಂದ ಅವಕಾಶ ಕಲ್ಪಿಸಲಾಗಿದೆ.

ನಗರದಲ್ಲಿ ಆಸ್ತಿ ತೆರಿಗೆ ತಂತ್ರಾಂಶದ ಮಾಹಿತಿಯಂತೆ 8,25,150 ಸ್ವತ್ತುಗಳು 'ಬಿ' ವಹಿಯಲ್ಲಿ ದಾಖಲಾಗಿವೆ. ಆದರೆ, ಎ-ಖಾತಾ ದುಬಾರಿಯಾಗಿರುವ ಹಿನ್ನೆಲೆಯಲ್ಲಿ ಬಹುತೇಕ ಬಿ-ಖಾತಾ ಹೊಂದಿರುವ ಆಸ್ತಿ

- **8308 ಅರ್ಜಿ ಸ್ವೀಕಾರ-3 ಕೋಟಿ ರೂ. ಆದಾಯ ಸಂದಾಯ, ಇನ್ನೂ 7490 ಅರ್ಜಿಗಳು ಬಾಕಿ**
- **ಐದು ನಗರ ಪಾಲಿಕೆಗಳಲ್ಲಿ 25,14,375 ಆಸ್ತಿ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ.**
- **ಅರ್ಜಿ ಸಲ್ಲಿಸಿದವರಲ್ಲಿ ಶೇ. 10ರಷ್ಟು ಮಂದಿಗೆ ಮಾತ್ರ ಎ-ಖಾತಾ ಭಾಗ್ಯ ದೊರೆತಿದೆ.**



ಮಾಲೀಕರು ಅರ್ಜಿ ಸಲ್ಲಿಸಲು ಮುಂದಾಗುತ್ತಿಲ್ಲ.

ಪಂಚ ಪಾಲಿಕೆಗಳು 6 ತಿಂಗಳಲ್ಲಿ ಬಿ-ಖಾತಾ ಆಸ್ತಿಗಳನ್ನು ಎ-ಖಾತಾ ಆಸ್ತಿಗಳನ್ನಾಗಿ ಪರಿವರ್ತಿಸುವ ಸಂಬಂಧ 8308 ಅರ್ಜಿಗಳನ್ನು ಸ್ವೀಕರಿಸಿವೆ. ಈ ಪೈಕಿ 818 ಅರ್ಜಿಗಳಿಗಷ್ಟೇ ಎ-ಖಾತೆ ನೀಡಲು ಅನುಮೋದನೆ ನೀಡಿವೆ. ಇದರಿಂದ ಸುಮಾರು 3 ಕೋಟಿ ರೂ. ಅಷ್ಟು ಆದಾಯ ಬಂದಿದ್ದು, ಇನ್ನೂ 7490 ಅರ್ಜಿಗಳು ಬಾಕಿ ಇವೆ. ಅರ್ಜಿ ಸಲ್ಲಿಸಿದವರಲ್ಲಿ ಶೇ. 10ರಷ್ಟು ಮಂದಿಗೆ ಮಾತ್ರ ಎ-ಖಾತಾ ಭಾಗ್ಯ ದೊರೆತಿದೆ.

**ದಾಖಲಾತಿಗಳ ಅಲಭ್ಯತೆ:** ಬಿ-ಖಾತಾಗಳನ್ನು ಎ-ಖಾತೆಗಳನ್ನಾಗಿ ಪರಿವರ್ತಿಸಲು ಖಾಸಗಿ ರಸ್ತೆಗಳನ್ನು ಸಾರ್ವಜನಿಕ ರಸ್ತೆಗಳೆಂದು ಘೋಷಿಸಬೇಕು. ಬಳಿಕ ಆಕ್ಷೇಪಣೆ ಸಲ್ಲಿಕೆಗೆ 30 ದಿನಗಳ ಅವಧಿಯನ್ನು ಕಡ್ಡಾಯಗೊಳಿಸಲಾಗಿದೆ. ಆಕ್ಷೇಪಣೆ ಅರ್ಜಿಗಳನ್ನು ಇತ್ಯರ್ಥಪಡಿಸಿ, ಅನುಮೋದನೆ ನೀಡಿದ ನಂತರ ನಿಗದಿತ ಶುಲ್ಕಗಳನ್ನು ಪಾವತಿಸಿಕೊಂಡು ಎ-ಖಾತಾ ನೀಡಲಾಗುತ್ತಿದೆ. ಖಾಲಿ ನಿವೇಶನಗಳಿಗೆ ನಿವೇಶನ ನಕ್ಷೆ, ಕಟ್ಟಡಗಳಿಗೆ ನಿವೇಶನ ಮತ್ತು ಕಟ್ಟಡ ನಕ್ಷೆ ಪ್ರತಿ ಸಲ್ಲಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಸಾರ್ವಜನಿಕ ರಸ್ತೆ ಇಲ್ಲದೆ, ಖಾಸಗಿ ರಸ್ತೆ ಹೊಂದಿದ್ದರೆ ನಕ್ಷೆ ಪ್ರತಿ ಸಲ್ಲಿಸಬೇಕಿದೆ. ಬಹುತೇಕ ಮಾಲೀಕರ ಬಳಿ ಸೂಕ್ತ ದಾಖಲೆಗಳೇ ಇಲ್ಲ. ಹೀಗಾಗಿ, ಎ-ಖಾತಾ ಪಡೆಯಲಾಗುತ್ತಿಲ್ಲ ಎನ್ನಲಾಗಿದೆ. ಬಿ-ಖಾತಾ ಸ್ವತ್ತುಗಳಿಗೆ ಎ-ಖಾತಾ ಪಡೆಯಲು 500 ರೂ. ಅರ್ಜಿ ಶುಲ್ಕ ಪಾವತಿಸಬೇಕು. ಜತೆಗೆ, 2 ಸಾವಿರ ಚ.ಮೀ. ವರೆಗೆ ಮಾರ್ಗಸೂಚಿ ದರದ ಶೇ. 5ರಷ್ಟು ಶುಲ್ಕ, ಭೂಪರಿವರ್ತನೆ ದಂಡ ಹಾಗೂ ಇತರೆ ಶುಲ್ಕಗಳನ್ನು ಭರಿಸಬೇಕಿದೆ.

ಬಡ ಮತ್ತು ಮಧ್ಯಮ ವರ್ಗದವರೇ ಹೆಚ್ಚಿನ ಸಂಖ್ಯೆಯಲ್ಲಿ ಬಿ-ಖಾತಾ ಸ್ವತ್ತುಗಳನ್ನು ಹೊಂದಿದ್ದಾರೆ. ಪರಿಣಾಮ, ಸರಕಾರ ನಿಗದಿಪಡಿಸಿರುವ ಶುಲ್ಕ ಭರಿಸಿ ಎ-ಖಾತಾ ಪಡೆಯಲು ಸಾಧ್ಯವಾಗದೆ ಹೆಣಗಾಡುತ್ತಿದ್ದಾರೆ.

**1,31,282 ಅರ್ಜಿ ತಿರಸ್ಕೃತ**

**ಐದು ನಗರ ಪಾಲಿಕೆಗಳಲ್ಲಿ 25,14,375 ಆಸ್ತಿ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ. ಇ-ಖಾತಾ ಅಭಿಯಾನದಡಿ ಇ-ಖಾತಾ ಕೋರಿ 9,63,076 ಅರ್ಜಿಗಳು ಸಲ್ಲಿಕೆಯಾಗಿವೆ. ಈ ಪೈಕಿ 5,51,718 ಸ್ವತ್ತುಗಳಿಗೆ 'ಎ' ಇ-ಖಾತಾ, 2,72,590 ಆಸ್ತಿಗಳಿಗೆ 'ಬಿ' ಇ-ಖಾತಾ ವಿತರಿಸಲಾಗಿದೆ. 1,31,282 ಅರ್ಜಿಗಳನ್ನು ತಿರಸ್ಕರಿಸಲಾಗಿದೆ.**

# ಟಿಪ್ಪರ್ ಅಬ್ಬರಕ್ಕೆ ಮತ್ತೆರಡು ಬಲಿ : ಕೇರಳ ಮೂಲದ ತಾಯಿ ಮಗಳ ಧಾರುಣ ಅಂತ್ಯ

# ಅಧಿಕಾರಿಗಳ ನಿರಾಪೇಕ್ಷತೆಗೆ ಜನಸಾಮಾನ್ಯರ ಹೆಣ ಉರುಳುತ್ತಿವೆ

• **ಉದಯವಾಹಿನಿ, ಗುಂಡ್ಲುಪೇಟೆ**

ಕಿಲ್ಲರ್ ಟಿಪ್ಪರ್ ಅಬ್ಬರಕ್ಕೆ ಕೇರಳ ಮೂಲದ ತಾಯಿ ಮಗಳು ಧಾರುಣವಾಗಿ ಸಾವೀಗೀಡಾದ ಘಟನೆ ತಾಲ್ಲೂಕಿನ ಮಲ್ಲಯ್ಯನಪುರ ಗೇಟ್ ಸಮೀಪ ಮಂಗಳವಾರ ಮಧ್ಯಾಹ್ನ ಸಂಭವಿಸಿದ್ದು ಭೀಕರ ಅಪಘಾತದ ದೃಶ್ಯ ನೋಡಿದ ಸ್ಥಳೀಯರು ಬೆಚ್ಚಿಬಿದ್ದಿದ್ದಾರೆ. ಘಟನೆ ಮಾಹಿತಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ದೌಡಾಯಿಸಿದ ಗುಂಡ್ಲುಪೇಟೆ ಪೊಲೀಸರು ಮೃತದೇಹಗಳನ್ನ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಸ್ಥಳಾಂತರಿಸಿ ಚಾಲಕ ಮೊಹಮ್ಮದ್ ಅಜೀರ್, ಬಾಲಕ ನಮಿಯಾನ್ ನನ್ನ ಮೈಸೂರಿಗೆ ರವಾನಿಸಿದ್ದಾರೆ.



ಉದಯವಾಹಿನಿ ಚಿತ್ರ

ಬೆಂಗಳೂರಿನ ಕೇಂದ್ರೀಯ ಸಂಶೋಧನಾ ಪ್ರಯೋಗಶಾಲೆ ಭಾರತ್ ಎಲೆಕ್ಟ್ರಾನಿಕ್ ಲಿಮಿಟೆಡ್ ನ ಉದ್ಯೋಗಿ ಮೊಹಮ್ಮದ್ ಅಜೀರ್ ಎಂಬವರು ಸಹೋದರಿ ಆಯಿಷಾ ನೂರ್, ಅವರ ಪುತ್ರಿ ನುಹಾ , ಪುತ್ರ ನಮಿಯಾನ್ ಜೊತೆಯಾಗಿ 23ಬಿಎಚ್ 9341ಕೆ ನೋಂದಣೀಯ ಕಾರಿನಲ್ಲಿ ಬೆಂಗಳೂರಿಗೆ ತೆರಳುತ್ತಿದ್ದ ವೇಳೆ ಗುಂಡ್ಲುಪೇಟೆ ಮಾರ್ಗವಾಗಿ ಆಗಮಿಸಿದ ಕೆಎಲ್ 47 ಎಂ 3272 ನೋಂದಣೀಯ ಟಿಪ್ಪರ್ ಡಿಕ್ಕಿ ಹೊಡೆದ ರಭಸಕ್ಕೆ ಸಹೋದರಿ ಆಯಿಷಾ ಹಾಗೂ ಪುತ್ರಿ ನುಹಾ ಸ್ಥಳದಲ್ಲೇ ಉಸಿರು ಚೆಲ್ಲಿದ್ದಾರೆ, ಪವಾಡ ಸದೃಷ ರೀತಿಯಲ್ಲಿ ಬದುಕುಳಿದ ಬಾಲಕ ನಮಿಯಾನ್ (09)




ಮೈಸೂರಿನ ಆಸ್ಪತ್ರೆಯಲ್ಲಿ ಜೀವನ್ಮರಣ ಹೋರಾಟ ನಡೆಸುತ್ತಿದ್ದಾನೆ ಇತ್ತ ಅಪಘಾತದ ಭೀಕರತೆಯಲ್ಲಿ ಕೈ ಕಾಲು ಮುರಿತಕ್ಕೊಳಗಾದ ಮೊಹಮದ್ ಅಜೀರ್ ಆಘಾತಕ್ಕೊಳಗಾಗಿದ್ದಾರೆ.

**ಧುರ್ಘಟನೆ ಸ್ಥಳದಲ್ಲಿ ಪ್ರತಿಭಟನೆ :** ಬಿಳಿಕಲ್ಲು ಎಂಸ್ಯಾನ್ಡ್ ಮಾಫೀಯಾದ ಪಾರುಪತ್ಯ ದಿನದಿಂದ ದಿನಕ್ಕೆ ಹೆಚ್ಚುತ್ತಲಿದೆ ಅಕ್ರಮ ಗಣಿಗಾರಿಕೆ, ಕೇರಳ ಟಿಪ್ಪರ್ ಸಂಚಾರಕ್ಕೆ ಅನುಮತಿ ನಿರಾಕರಿಸುವಂತೆ ಹಿಂದಿನಿಂದಲೂ ಜಿಲ್ಲಾಡಳಿತ ಹಾಗೂ ಇಲಾಖೆ ಅಧಿಕಾರಿಗಳಿಗೆ ಮನವಿ ಮಾಡುತ್ತಲೇ ಬಂದಿದ್ದರೂ ಅಧಿಕಾರಿಗಳ ನಿರಾಪೇಕ್ಷತೆಗೆ ಜನಸಾಮಾನ್ಯರ ಹೆಣ ಉರುಳುತ್ತಿವೆ ಎಂದು ರೊಚ್ಚಿಗೆದ್ದ ಬಿಜೆಪಿ ಕಾರ್ಯಕರ್ತರು ಪೊಲೀಸರು, ಜಿಲ್ಲಾಡಳಿತದ ವಿರುದ್ಧ ದಿಕ್ಕಾರದ ಘೋಷಣೆಗಳನ್ನ ಕೂಗಿ ಆಕ್ರೋಶ ಹೊರಹಾಕಿದರು.

ಗಡಿಭಾಗದಿಂದ ಖನಿಜ ಸಂಪತ್ತು ಸಾಗಿಸಲು ಕೇರಳಿಗರಿಗೆ ವಿಶೇಷ ಅನುಮತಿ ನೀಡುತ್ತಿರುವ ಜನಪ್ರತಿನಿಧಿಗಳು ಹಾಗೂ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳೇ ಪರೋಕ್ಷವಾಗಿ ಸಾರ್ವಜನಿಕರ ಜೀವವನ್ನ ಆಹುತಿ ಪಡೆಯುತ್ತಿದ್ದಾರೆ ಎಂದು ನೇರ ವಾಗ್ದಾಳಿ ನಡೆಸಿದರು.

**ಟಿಪ್ಪರ್ ಪೊಲೀಸರ ವಶ :** ಘಟನಾ ಸಂಬಂದ ಟಿಪ್ಪರ್ ವಶಕ್ಕೆ ಪಡೆದಿರುವ ಪೊಲೀಸರು ದೂರು ದಾಖಲಿಸಿಕೊಳ್ಳುತ್ತಾರೆ ಆದರೆ ಜೀವತೆತ್ತ ಅಮಾಯಕರ ಸಾವಿಗೆ ಮಾತ್ರ ನ್ಯಾಯ ಸಿಗುವುದಿಲ್ಲ ಎಂಬುದು ಸ್ಥಳೀಯರ ವಾದವಾಗಿದ್ದು ಹಣ ಬಲವುಳ್ಳ ಟಿಪ್ಪರ್ ಮಾಲೀಕರು ಕೆಲವೇ ಗಂಟೆಗಳಲ್ಲಿ ಪೊಲೀಸ್ ಸುಪರ್ದಿಯಿಂದ ಲಾರಿಯನ್ನ ಮುಕ್ತಗೊಳಿಸಿ ಯಥಾವತ್ತಾಗಿ ರಸ್ತೆಗಿಳಿಸಿ ಪ್ರಾಬಲ್ಯವೇನೆಂಬುದನ್ನ ಗಡಿಭಾಗದ ಜನರಿಗೆ ಅರ್ಥೈಸುತ್ತಾರೆ ಹಾಗಾದರೆ ಕಾನೂನಿನಲ್ಲಿ ಜೀವಬಲಿಪಡೆದ ದಂಧೇಕೋರರಿಗೂ ಎಲ್ಲಾ ವ್ಯವಸ್ಥೆಗಳಿವೆಯೇ ಎಂದು ನಾಗರೀಕರು ಪ್ರಶ್ನಿಸುತ್ತಿದ್ದರೂ ಇದುವರೆಗೂ ಸರಿಯಾದ ಉತ್ತರ ಸಿಗದಿರುವುದಕ್ಕೆ ಅಧಿಕಾರಿಗಳ ಒಳಒಪ್ಪಂದವೇ ಕಾರಣ ಎಂಬ ಆರೋಪಗಳು ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗುತ್ತಿದೆ.

**ಎಚ್ಚೆತ್ತುಕೊಳ್ಳದ ಜಿಲ್ಲಾಡಳಿತ**

**ಕೆಲ ದಿನಗಳ ಹಿಂದಷ್ಟೇ ಶಾಲಾ ಮಕ್ಕಳನ್ನ ಕರೆದೊಯ್ಯುತ್ತಿದ್ದ ವಾಹನಕ್ಕೆ ಗುದ್ದಿದ್ದ ಟಿಪ್ಪರ್ ಏಳು ವಿದ್ಯಾರ್ಥಿಗಳನ್ನ ಆಸ್ಪತ್ರೆ ಪಾಲು ಮಾಡುವುದಲ್ಲದೆ ವರ್ಷಗಟ್ಟಲೆ ಚಿಕಿತ್ಸೆ ಪಡೆಯುವ ಹಾಗೆ ಜರ್ಜರಿತಗೊಳಿಸಿದ್ದ ವೇಳೆಯಲ್ಲೇ ಎಚ್ಚೆತ್ತುಕೊಳ್ಳಬೇಕಿದ್ದ ಜಿಲ್ಲಾಡಳಿತ ಮೌನಕ್ಕೆ ಶರಣಾದ ಹಿನ್ನೆಲೆ ಇಂತಹ ವಿದ್ರಾವಕ ಘಟನೆಗಳು ಮರುಕಳಿಸುತ್ತಿವೆ. ಸಾವು ನೋವುಗಳು ಘಟಿಸಿದ ಸಂಧರ್ಭದಲ್ಲಿ ಕ್ಷಣ ಮಾತ್ರದಲ್ಲಿ ಕಡಿವಾಣ ಹಾಕಲಾಗುವುದು ಎಂದು ನಾಜೂಕುತನ ತೋರುವ ಅಧಿಕಾರಿಗಳು ಭೀಕರ ದೃಶ್ಯದ ತುಣುಕು ಮರೆಯಾಗುತ್ತಲಿದ್ದಂತೆ ಕೈ ಕೈ ಮಿಲಾಯಿಸಿ ಹೆಣ ಉರುಳಿಸುವ ಕಬಂದ ದಂಧೆಗೆ ಸಹಕಾರ ನೀಡುತ್ತಿರುವುದು ಗಡಿ ಜನರ ದೌರ್ಭಾಗ್ಯವಾಗಿದೆ ಎಂದು ರೈತ ಮುಖಂಡರು ಬೇಸರ ಹೊರಹಾಕಿದ್ದಾರೆ. ಸಂತಸದಿಂದ ಮನೆ ಸೇರಬೇಕಿದ್ದ ಕುಟುಂಬದ ಇಬ್ಬರು ಸದಸ್ಯರು ಜವರಾಯನ ಅಟ್ಟಹಾಸಕ್ಕೆ ಬಲಿಯಾಗಿದ್ದು ಮಾತ್ರ ದುರ್ದೈವವಾಗಿದೆ ಗಣಿಗಾರಿಕೆ ಉಂಬತನಕ್ಕೆ ಇನ್ನೆಷ್ಟು ಬಲಿಯಾಗುತ್ತವೆಯೋ ಎಂಬ ಆತಂಕದ ವಾತಾವರಣ ನಿರ್ಮಾಣವಾಗಿರುವುದು ಮಾತ್ರ ಸುಳ್ಳಲ್ಲ ಎಂಬುದು ಪ್ರಜ್ಞಾವಂತರ ಮಾತಾಗಿದ್ದು ಮುಂದಿನ ದಿನಗಳಲ್ಲಾದರೂ ಕೇರಳದವರ ಮಾಫೀಯಾಗೆ ಅಂಕುಶ ಹಾಕಲಾಗುವುದೇ ಕಾದು ನೋಡಬೇಕಿದೆ.**

## 2028ರಲ್ಲಿ ರಾಜ್ಯದಲ್ಲಿ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ

• **ಉದಯವಾಹಿನಿ, ನಾಗಮಂಗಲ**

ಮುಂಬರುವ 2028ರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ರಚನೆಯಾಗಲಿದೆ. ಯಾರು ಮುಖ್ಯಮಂತ್ರಿಯಾಗಬೇಕೆಂದು ಪ್ರಧಾನಿ ನರೇಂದ್ರ ಮೋದಿ ತೀರ್ಮಾನಿಸಲಿದ್ದಾರೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2028ರಲ್ಲಿ ಕರ್ನಾಟಕದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ನೇತೃತ್ವದ ಸರ್ಕಾರ ರಚನೆಯಾಗಲಿದೆ. ಜೆಡಿಎಸ್ ಕೂಡ ಜೊತೆಗೆ ಇರಲಿದೆ. ಯಾರು ಮುಖ್ಯಮಂತ್ರಿಯಾಗಬೇಕು ಎಂದು ಪ್ರಧಾನಿ ನರೇಂದ್ರಮೋದಿ, ಸಚಿವ ಅಮಿತ್ ಶಾ ಮೊದಲಾದ ನಾಯಕರು ತೀರ್ಮಾನಿಸಲಿದ್ದಾರೆ ಎಂದರು.

ಬಿಜೆಪಿಯಲ್ಲಿ ಸಿಎಂ ಆಕಾಂಕ್ಷಿಗಳು ಅನೇಕರಿದ್ದಾರೆ. ಪಕ್ಷದ ಆಶೀರ್ವಾದವಿದ್ದರೆ ನಾನು ಕೂಡ ಸಿಎಂ ಆಗಬಹುದು. ಈಗ ಅವೆಲ್ಲಕ್ಕಿಂತಲೂ ಸಿದ್ದರಾಮಯ್ಯ



ನೇತೃತ್ವದ ಭ್ರಷ್ಟ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯುವುದು ಮುಖ್ಯ. ಇದಕ್ಕಾಗಿ ನಾವು ಹೋರಾಟ ಮುಂದುವರಿಸುತ್ತೇವೆ ಎಂದರು. ಸಿಎಂ ಬದಲಾವಣೆ ನವೆಂಬರ್‌ನಲ್ಲಿ ಆಗಬೇಕಿತ್ತು. ಈಗ ಆ ದಿನಾಂಕ ಮುಗಿದುಹೋಗಿದೆ. ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಮಲ್ಲಿಕಾರ್ಜುನ ಖರ್ಗೆಯವರ ಮನೆಗೆ ಹೋಗಿ ಗಲಾಟೆ ಮಾಡಿದ್ದಾರೆ.

ಈ ಜಗಳದಲ್ಲೇ ಸರ್ಕಾರ ಸತ್ತುಹೋಗಿದೆ. ಪಕ್ಷದ ಅಧ್ಯಕ್ಷರಿಗೆ ಗೌರವ ಇದ್ದಿದ್ದರೆ ಶಾಸಕರು ದೆಹಲಿಗೆ ಹೋಗುತ್ತಿರಲಿಲ್ಲ. ಡಿ.ಕೆ.ಶಿವಕುಮಾರ್ ಧ್ವನಿಗೆ ಮೂರು ಪೈಸೆಯ ಬೆಲೆಯನ್ನು ಶಾಸಕರು ನೀಡುತ್ತಿಲ್ಲ ಅವರ ವರ್ಚಸ್ಸು ಕಡಿಮೆಯಾಗುತ್ತಿದೆ ಎಂಬುದು ಇದರಿಂದ ತಿಳಿದುಬರುತ್ತದೆ ಎಂದು ವ್ಯಂಗ್ಯವಾಡಿದರು. ಕಾಂಗ್ರೆಸ್‌ನಲ್ಲಿ ಸಿಎಂ ಆಸೆ ಇಟ್ಟುಕೊಂಡವರು ಜಗಳ ಆಡುತ್ತಿದ್ದಾರೆ. ಈ ನಡುವೆ ರಾಜ್ಯದ ಅಭಿವೃದ್ಧಿ ನಡೆಯುತ್ತಿಲ್ಲ. ಹಿಂದೆ ಜನತಾದಳವನ್ನು ಜಗಳಗಳ ಪಾರ್ಟಿ ಎಂದು ಕರೆಯುತ್ತಿದ್ದರು. ಈಗ ಅದೇ ಕಾಂಗ್ರೆಸ್ಸೇ ಜಗಳಗಳ ಪಾರ್ಟಿಯಾಗಿದೆ ಎಂದು ಟೀಕಿಸಿದರು.

**ಮಂದಿರ ಉದ್ಘಾಟನೆ:** ಆದಿಚುಂಚನಗಿರಿ ಸಂಸ್ಥಾನದ ಗುರು ಭೈರವೈಕ್ಯ ಮಂದಿರದ ಉದ್ಘಾಟನೆಗೆ ಪ್ರಧಾನಿ ನರೇಂದ್ರ ಮೋದಿ ಆಗಮಿಸಲಿದ್ದಾರೆ. ಇಲ್ಲಿ ಉತ್ತಮ ತಯಾರಿ ನಡೆಯುತ್ತಿದ್ದು, ಸಾವಿರಾರು ಜನರು ಕೂರುವ ವ್ಯವಸ್ಥೆ ಮಾಡಲಾಗಿದೆ.

ಮಂದಿರವನ್ನು ಬಹಳ ಆಕರ್ಷಕ ವಿನ್ಯಾಸದಲ್ಲಿ ನಿರ್ಮಿಸಲಾಗಿದೆ. ಪ್ರಧಾನಿ ನರೇಂದ್ರಮೋದಿಗೆ ಮಠದ ಬಗ್ಗೆ ಅಪಾರ ಭಕ್ತಿ ಭಾವವಿದೆ.

ಈ ಹಿಂದೆಯೂ ಅವರು ಮಠದ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಪ್ರಧಾನಿ ನರೇಂದ್ರ ಮೋದಿಯವರು ಮೊದಲಿಗೆ ಭೈರವೈಕ್ಯ ದೇವರ ಪೂಜೆಯಲ್ಲಿ ಪಾಲ್ಗೊಂಡು, ನಂತರ ಮಂದಿರ ಉದ್ಘಾಟನೆ ಹಾಗೂ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸುತ್ತಾರೆ ಎಂದು ತಿಳಿಸಿದರು. ನನಗೂ ಕೂಡ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಅವಕಾಶ ದೊರೆತಿದ್ದು, ನಾಳಿನ ಕಾರ್ಯಕ್ರಮದಲ್ಲಿ ಭಾಗಿಯಾಗುವುದಾಗಿ ಆರ್. ಅಶೋಕ್ ಹೇಳಿದರು.

## ಬೇಸಿಗೆ ಶಿಬಿರವು ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿ

• **ಉದಯವಾಹಿನಿ, ಮೈಸೂರು**

ಯೋಗ ಮಂದಿರ, ಕೃಷ್ಣಮೂರ್ತಿಪುರಂ ಮೈಸೂರು ಪತಂಜಲಿ ಯೋಗ ಶಿಕ್ಷಣ ಸಂಸ್ಥೆ(ರಿ)ಯ ವಸಂತ ಯೋಗ ಶಿಬಿರ ಕಾರ್ಯಕ್ರಮದಲ್ಲಿ ಭಾಗವಹಿಸಿ ಕೇವಲ ನಾಲ್ಕು ಗೋಡೆಗಳ ಮಧ್ಯದಲ್ಲಿ ವರ್ಷವಿಡೀ ಶಾಲಾ ಚಟುವಟಿಕೆಗಳಲ್ಲಿ ಭಾಗವಹಿಸಿ ಕಲಿಯುತ್ತಿದ್ದ ಮಕ್ಕಳು ಮಂಗಳವಾರ ಬೇಸಿಗೆ ರಜೆಯಲ್ಲಿ ವಿವಿಧ ಶಾಲೆಯ ಮಕ್ಕಳೊಂದಿಗೆ ಬೆರೆತು ,ತಾವು ಇಷ್ಟಪಟ್ಟ ವಿಚಾರಗಳ ಬಗ್ಗೆ ವಿವರವಾಗಿ ಕಲಿತು ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಇಂತಹ ಮಕ್ಕಳ ಬೇಸಿಗೆ ಶಿಬಿರವು ವರದಾನವಾಗಿದೆ ಆಟವಾಡಿಕೊಂಡು, ಹಾಡಿ ಕುಣಿದು, ಕುಪ್ಪಳಿಸಿ ಮಕ್ಕಳು ಸಂತೋಷದಿಂದ ಕಲಿಕೆಯಲ್ಲಿ ತೊಡಗುವುದರಿಂದ ಮಕ್ಕಳ ವ್ಯಕ್ತಿತ್ವವು ಸಮಗ್ರವಾಗಿ ಸರ್ವತೋಮುಖವಾಗಿ ವಿಕಾಸವಾಗುವುದಲ್ಲದೆ ಕ್ರಿಯಾತ್ಮಕತೆ, ಕ್ರಿಯಾಶೀಲತೆ ಹಾಗೂ ಲವಲವಿಕೆ ಮೂಡಿ ಜೀವನದಲ್ಲಿ ಏನನ್ನಾದರೂ ಸಾಧಿಸಬೇಕು ಎಂಬ ಆತ್ಮವಿಶ್ವಾಸ ಮೂಡುತ್ತದೆ ಮಕ್ಕಳು ಮೊಬೈಲ್ ಫೋನಿನಿಂದ ದೂರವಿದ್ದು ಹಾಡು, ಚಿತ್ರಕಲೆ, ಭಾಷಣ, ಧ್ಯಾನ , ಯೋಗ, ಕಥೆ ಕೇಳುವಂತಹ ಗುಣಾತ್ಮಕ ಅಭ್ಯಾಸದಿಂದ ಕಲಿಕಾ ಸಾಮರ್ಥ್ಯ ಹೆಚ್ಚಾಗಿ ಉತ್ತಮವಾದ ವಿಚಾರಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಾಧನೆ


ಉದಯವಾಹಿನಿ ಚಿತ್ರ

**ಮಕ್ಕಳ ವಸಂತ ಯೋಗ ಶಿಬಿರ**

ಮಾಡುವ ದಿಕ್ಕಿನತ್ತ ಮುನ್ನಡೆಯುವ ಛಲ ಬೆಳೆಯುತ್ತದೆ.

ನಮ್ಮ ಸಂಸ್ಕೃತಿ ಹಾಗೂ ಪರಂಪರೆಯನ್ನು ಉಳಿಸಿ ಬೆಳೆಸುವ ಕಾಯಕವನ್ನು ಬದ್ಧತೆಯಿಂದ ಮಾಡುತ್ತಿರುವ ಇಂತಹ ಸಂಸ್ಥೆಗೆ ಶುಭವಾಗಲಿ ಎಂದು ಆಶಿಸಿದರು.

ಮೈಸೂರು ಪ್ರಾಂತ್ಯದ ಮುಖ್ಯಸ್ಥರಾದ ಶ್ರೀನಾಗೇಂದ್ರ ಅರಸ್, ತರಬೇತುದಾರರಾದ ಶ್ರೀಮತಿ ಭಾಗ್ಯ, ಬಸವರಾಜ್, ಚಂದ್ರು, ಸೇರಿದಂತೆ ಮಕ್ಕಳ ಪೋಷಕರು, ಸಾರ್ವಜನಿಕರ ಜೊತೆ ಕೂತು ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸಿ, ಸಂಭ್ರಮಿಸಿದರು.

## ಲಿಂಗತ್ವ ಅಲ್ಪಸಂಖ್ಯಾತರ ಕಾಯ್ದೆಗೆ ವಿರೋಧ



ಉದಯವಾಹಿನಿ ಚಿತ್ರ

• **ಉದಯವಾಹಿನಿ, ತುಮಕೂರು**

ಲಿಂಗತ್ವ ಅಲ್ಪಸಂಖ್ಯಾತರ ಕಾಯ್ದೆ ಜಾರಿಗೆ ವಿರೋಧಿಸಿ ಜಿಲ್ಲಾಧಿಕಾರಿ ಕಚೇರಿ ಎದುರು ಸೋಮವಾರ ಕಾಯ್ದೆ ಪ್ರತಿ ಸುಟ್ಟು ಲಿಂಗತ್ವ ಅಲ್ಪಸಂಖ್ಯಾತರು ಆಕ್ರೋಶ ವ್ಯಕ್ತಪಡಿಸಿದರು. ಮಂಗಳವಾರ ಸಹಬಾಳ್ವೆ ಸಂಘ, ರಾಷ್ಟ್ರೀಯ ಲಿಂಗತ್ವ ಲೈಂಗಿಕ ಅಲ್ಪಸಂಖ್ಯಾತರ ಒಕ್ಕೂಟ, ಸ್ಲಂ ಜನಾಂದೋಲನ-ಕರ್ನಾಟಕ, ಪ್ರಗತಿಪರ ಸಂಘಟನೆಗಳ ಆಶ್ರಯದಲ್ಲಿ ಪ್ರತಿಭಟನೆ ನಡೆಯಿತು.

ಲಿಂಗತ್ವ ಅಲ್ಪಸಂಖ್ಯಾತರ ಕಾಯ್ದೆ ಜಾರಿಗೆ ತರುತ್ತಿರುವ ಕೇಂದ್ರ ಸರ್ಕಾರದ ಕ್ರಮವನ್ನು ಖಂಡಿಸಿದರು. ಕೇಂದ್ರದ ವಿರುದ್ಧ ಘೋಷಣೆ ಕೂಗಿದರು. ಈ ಕಾಯ್ದೆಯನ್ನು ರಾಜ್ಯ ಸರ್ಕಾರ ಜಾರಿಗೆ ತರಬಾರು ಎಂದು ಆಗ್ರಹಿಸಿದರು.

ಲಿಂಗತ್ವ ಅಲ್ಪಸಂಖ್ಯಾತರ ಸಮುದಾಯದ ಮುಖಂಡರಾದ ದೀಪಿಕಾ, ಹೊಸ ಕಾಯ್ದೆ ಜಾರಿಮಾಡಿ ಸಮುದಾಯದ ಸಾಂವಿಧಾನಿಕ ಹಕ್ಕಿನ ಮೇಲೆ ದಮನಕಾರಿ ನೀತಿ ಹೇರುತ್ತಿರುವುದು ಜನವಿರೋಧಿ ನಡೆಯಾಗಿದೆ.ಇದು ಗೌಪ್ಯತೆ, ದೇಹದ ಸ್ವಾಯತ್ತತೆ, ಸ್ವ-ಗುರುತಿನ ಮೂಲಭೂತ ಹಕ್ಕಿಗೆ ಬೆದರಿಕೆ ಉಂಟುಮಾಡುತ್ತದೆ ಎಂದು ಆರೋಪಿಸಿದರು.


ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಒಕ್ಕೂಟದ ಪ್ರತಿನಿಧಿ ವೈಶಾಲಿ, ಹೊಸ ಕಾಯ್ದೆ ಜಾರಿಮಾಡಿ ಜೀತ ಪದ್ಧತಿಗೆ ತಳ್ಳುವ ಹುನ್ನಾರ ನಡೆದಿದೆ. ವಿಶೇಷ ವೈದ್ಯರಿಂದಲೇ ಲಿಂಗತ್ವ ಪರೀಕ್ಷೆಗೆ ಒಳಪಡಿಸಬೇಕು ಎಂಬ ಕ್ರಮ ಸರಿಯಲ್ಲ. ನಮ್ಮನ್ನು ಗುರಿಯಾಗಿಸಿ ದಾಳಿ ಮಾಡಲಾಗುತ್ತಿದೆ ಎಂದು ದೂರಿದರು.

## ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳ ದಾಖಲೆ ಜಯ

• **ಉದಯವಾಹಿನಿ, ಬಿಡದಿ**

ಬಿಡದಿ ರೈತರ ವಿವಿಧೋದ್ದೇಶ ಸಹಕಾರ ಸಂಘದ ಆಡಳಿತ ಮಂಡಳಿ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು 12 ಸ್ಥಾನಗಳ ಪೈಕಿ 11 ಸ್ಥಾನಗಳನ್ನುಗಳಿಸಿ ದಾಖಲೆಯ ಜಯ ಸಾಧಿಸಿದ್ದಾರೆ. ಜೆಡಿಎಸ್-ಬಿಜೆಪಿ ಮೈತ್ರಿಕೂಟ ಕೇವಲ ಒಂದು ಸ್ಥಾನದಲ್ಲಿ ಮಾತ್ರ ಜಯಗಳಿಸಿದೆ. ಸಂಘದ 12 ನಿರ್ದೇಶಕ ಸ್ಥಾನಗಳಿಗೆ ಒಟ್ಟು 29 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಕಾಂಗ್ರೆಸ್ ಎನ್‌ಡಿಎ ಮೈತ್ರಿಕೂಟ ಈ ಚುನಾವಣೆಯನ್ನು ಪ್ರತಿಷ್ಠೆಯಾಗಿ ಕಂಡಿದ್ದವು. ಶಾಸಕ ಎಚ್.ಸಿ.ಬಾಲಕೃಷ್ಣ ಕಾಂಗ್ರೆಸ್ ಪರವಾಗಿ ಪ್ರಚಾರ ನಡೆಸಿದ್ದರೆ, ಮಾಜಿ ಶಾಸಕ ಎ.ಮಂಜುನಾಥ್ ಎನ್‌ಡಿಎ ಮೈತ್ರಿ ಅಭ್ಯರ್ಥಿಗಳ ಪರ ಪ್ರಚಾರ ಮಾಡಿದ್ದರು.

ಸಂಘ ಅಸ್ತಿತ್ವಕ್ಕೆ ಬಂದ 25 ವರ್ಷಗಳ ಇತಿಹಾಸದಲ್ಲೇ ಮೊದಲ ಬಾರಿಗೆ ಕಾಂಗ್ರೆಸ್ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬಂದಿದೆ. ಕಳೆದ ಚುನಾವಣೆಯಲ್ಲಿ ಜೆಡಿಎಸ್ 7 ಮತ್ತು ಕಾಂಗ್ರೆಸ್‌ಗೆ 5 ಸ್ಥಾನಗಳು ಮಾತ್ರ ಲಭಿಸಿದ್ದವು. ಕಾಂಗ್ರೆಸ್ ಬೆಂಬಲಿತ ವಿಜೇತರು (ಸ್ಥಾನವಾರು ಮತಗಳು) ಸಾಲಗಾರರ ಕ್ಷೇತ್ರದಲ್ಲಿ ವಿ.ಆರ್.


ಉದಯವಾಹಿನಿ ಚಿತ್ರ

ಮಹೇಶ್ (1361), ಎಸ್.ಜೀವನ್ (1360), ದೊಡ್ಡರೇವಯ್ಯ (1333), ಸತ್ಯಮೂರ್ತಿ (1263), ಎಚ್.ಎಸ್.ಮಧುಕುಮಾರ್(1195) ಮತಗಳೊಂದಿಗೆ ಗೆಲುವು ಸಾಧಿಸಿದ್ದಾರೆ.

ಮಹಿಳಾ ಮೀಸಲು ಸ್ಥಾನದಲ್ಲಿ ಅನ್ನಪೂರ್ಣೇಶ್ವರಿ. ಎನ್ (1245) ಮತ್ತು ಶೋಭಾ ಸಿ.ಟಿ (1223) ಮತಗಳೊಂದಿಗೆ ಆಯ್ಕೆಯಾಗಿದ್ದಾರೆ. ಹಿಂದುಳಿದ ವರ್ಗ 'ಎ' ಮೀಸಲಿನಲ್ಲಿ ಕೆ.ಪಿ.ಬಾಲಕೃಷ್ಣ (1372), ಹಿಂದುಳಿದ ವರ್ಗ 'ಬಿ' ಮೀಸಲಿನಲ್ಲಿ ಸಂತೋಷ್ ಬಿ.ಎಸ್, ಪರಿಶಿಷ್ಟ ಜಾತಿ ಮೀಸಲಿನಲ್ಲಿ ಆರ್.ರಮೇಶ್ (1379), ಪರಿಶಿಷ್ಟ ಪಂಗಡ ಮೀಸಲಿನಲ್ಲಿ ಕೆಂಗಲ್ ಹನುಮಂತಯ್ಯ (1464) ಮತಗಳೊಂದಿಗೆ ಗೆದ್ದಿದ್ದಾರೆ.

**ಎನ್‌ಡಿಎ ಮೈತ್ರಿಕೂಟದ ಗೆಲುವು:** ಸಾಲಗಾರರಲ್ಲದ ಕ್ಷೇತ್ರದಲ್ಲಿ ಟಿ.ಡಿ.ನಿತ್ಯಾನಂದ 508 ಮತಗಳೊಂದಿಗೆ ಗೆದ್ದಿದ್ದಾರೆ. ಸಾಲಗಾರರಲ್ಲದ ಸಾಮಾನ್ಯ ಸ್ಥಾನದಲ್ಲಿ ಬಸವರಾಜು ಕೇವಲ 13 ಮತ ಪಡೆದು ಸೋತರು. ಇತರ ಸೋತ ಅಭ್ಯರ್ಥಿಗಳಲ್ಲಿ ಎಚ್.ಎಲ್. ಚಂದ್ರು (980), ಬಿ.ಮಂಜುನಾಥ್ (1033), ಜಯಲಕ್ಷ್ಮಮ್ಮ (1045), ಎಂ.ಪುಷ್ಪರಾಜು (840), ಬಿ.ಪಿ.ರಾಮು (739), ಅನಂತ (307), ಲೀಲಾವತಿ (887) ಮತಗಳೊಂದಿಗೆ ಪರಾಭವಗೊಂಡಿದ್ದಾರೆ.

ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಗಾಣಕಲ್ ನಟರಾಜ್, ಬಿಡದಿ ಪುರಸಭೆ ಪ್ರತಿಪಕ್ಷ ನಾಯಕ ಸಿ.ಉಮೇಶ್, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಯರೇಹಳ್ಳಿ ಮಂಜು ಸೇರಿದಂತೆ ಹಲವಾರು ಮುಖಂಡರು ವಿಜಯೋತ್ಸವದಲ್ಲಿ ಭಾಗವಹಿಸಿದ್ದರು.

## ಅಂಬೇಡ್ಕರ್ ಭವನಕ್ಕೆ ಚಿಂತಾಮಣಿ ನನ್ನ ಆದ್ಯತೆ ಎಂದ ಸಚಿವ ಎಂ.ಸಿ.ಸುಧಾಕರ್

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ನಗರದ ಕನ್ನಡ ಭವನದಲ್ಲಿ ಮಂಗಳವಾರ ನಡೆದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಸಚಿವ ಡಾ.ಎಂ.ಸಿ.ಸುಧಾಕರ್ ಸಮ್ಮುಖದಲ್ಲಿಯೇ ಶಾಸಕ ಪ್ರದೀಪ್ ಈಶ್ವರ್ ವಿರುದ್ಧ ದಲಿತ ಮುಖಂಡರು ಧಿಕ್ಕಾರದ ಘೋಷಣೆಗಳನ್ನು ಕೂಗಿದರು. ರಾಜ್ಯ ಬೀಜ ನಿಗಮದ ಅಧ್ಯಕ್ಷ ನಂದಿ ಆಂಜನಪ್ಪ ಮಾತನಾಡಲು ಮುಂದಾದಾಗ 'ಅಂಬೇಡ್ಕರ್ ಬಗ್ಗೆ ಮಾತನಾಡಿ. ರಾಜಕಾರಣಕ್ಕೆ ಸಂಬಂಧಿಸಿದ ಮಾತುಗಳು ಬೇಡ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಚಿಂತಾಮಣಿಯಲ್ಲಿ ಅದ್ಭುತವಾದ ಅಂಬೇಡ್ಕರ್ ಭವನ ನಿರ್ಮಾಣ ಆಗುತ್ತಿದೆ. ಉದ್ಘಾಟನಾ ಕಾರ್ಯಕ್ರಮಕ್ಕೆ ನೀವು ಬನ್ನಿ. ನಂತರ ಚಿಕ್ಕಬಳ್ಳಾಪುರದಲ್ಲಿಯೂ ಇಂತಹ ಭವನ ಏಕೆ ನಿರ್ಮಾಣವಾಗಲಿಲ್ಲ. ಚಿಕ್ಕಬಳ್ಳಾಪುರದಲ್ಲಿಯೂ ಭವನ ನಿರ್ಮಿಸಿ ಎಂದು ನನ್ನ ಮೇಲೆ ಒತ್ತಡ ಹೇರುವಿರಿ. ಶಿಡ್ಲಘಟ್ಟದಲ್ಲಿಯೂ ಬೃಹತ್ ಮಟ್ಟದಲ್ಲಿ ಭವನ ನಿರ್ಮಾಣವಾಗುತ್ತಿದೆ. ಗೌರಿಬಿದನೂರಿನಲ್ಲಿ ಶಿವಶಂಕರ ರೆಡ್ಡಿ ಅವರು ಶಾಸಕರಾಗಿದ್ದ ವೇಳೆ ಭವನ ನಿರ್ಮಿಸಿದ್ದಾರೆ. ಬಾಗೇಪಲ್ಲಿಯಲ್ಲಿ ಉತ್ತಮ ಭವನ ಆಗಲಿದೆ ಎಂದರು.

ಜಿಲ್ಲಾ ಮಟ್ಟದಲ್ಲಿ ಅಂಬೇಡ್ಕರ್ ಭವನ ಬೇಕು ಎನ್ನುವ ಬೇಡಿಕೆ ಇದೆ. ಆದರೆ ಚಿಕ್ಕಬಳ್ಳಾಪುರ ನಗರದೊಳಗೆ ಸೂಕ್ತ ನಿವೇಶನ ದೊರೆಯುತ್ತಿಲ್ಲ. ಸೂಕ್ತ ಜಾಗ ಹುಡುಕಬೇಕು ಎಂದು ಜಿಲ್ಲಾಧಿಕಾರಿ ಅವರಿಗೆ ಹೇಳಿದ್ದೇನೆ. ಭವನವು ನಗರದಿಂದ ಹೊರಗೆ ಇರಬಾರದು. ಬಹಳ ಕನಸು ಕಟ್ಟಿಕೊಂಡು ಕೆಲಸ ಮಾಡಬೇಕಿದೆ ಎಂದು ಸಚಿವರು ಹೇಳಿದರು.

ಆಗ ಕೆಲವು ಸಭಿಕರು ಚಿಕ್ಕಬಳ್ಳಾಪುರದಲ್ಲಿ ಅಂಬೇಡ್ಕರ್ ಭವನ ಯಾವಾಗ ಆಗುತ್ತದೆ? ಖಚಿತವಾಗಿ ಎಷ್ಟು ವರ್ಷಗಳಲ್ಲಿ ಆಗುತ್ತದೆ ಎಂದು ಹೇಳಿ ಎಂದು ಪಟ್ಟು ಹಿಡಿದರು. ಮತ್ತಷ್ಟು



ಮಂದಿ ಅಂಬೇಡ್ಕರ್ ಜಯಂತಿಗೆ ಶಾಸಕರು ಏಕೆ ಬರಲಿಲ್ಲ ಎಂದು ಪ್ರಶ್ನಿಸುತ್ತಲೇ ಧಿಕ್ಕಾರ ಕೂಗಿದರು. 'ನೀವು ಚಿಂತಾಮಣಿಗೆ ಹೆಚ್ಚು ಆದ್ಯತೆ ನೀಡುತ್ತಿದ್ದೀರಿ. ಚಿಕ್ಕಬಳ್ಳಾಪುರವನ್ನೂ ಗಮನಿಸಿ. ಇದೂ ಸಹ ನಿಮ್ಮ ಕ್ಷೇತ್ರ ಎಂದು ಮುಖಂಡರು ಆಗ್ರಹಿಸಿದರು. ಗಲಾಟೆ ಜೋರಾಗುತ್ತಿದ್ದಂತೆ ಪೊಲೀಸರು ಮಧ್ಯಪ್ರವೇಶಿಸಿದರು.

ಸಚಿವ ಡಾ.ಎಂ.ಸಿ.ಸುಧಾಕರ್. ನಾನು ಇಲ್ಲಿ ನಿಂತಿದ್ದೇನೆ ಎಂದರೆ ಅದಕ್ಕೆ ಚಿಂತಾಮಣಿ ಜನರು ಕಾರಣ. ಚಿಂತಾಮಣಿ ನನ್ನ ಸ್ವಕ್ಷೇತ್ರ ಎಂದು ಭಾಷಣಕ್ಕೆ ತೆರೆ ನಿಲ್ಲಿಸಿದರು.

**ಜನರ ನೋವು ಶಾಸಕರ ಗಮನಕ್ಕೆ ತರುವೆ:** ನಾನು ತಮಿಳುನಾಡಿಗೆ ಹೋಗಬೇಕಾಗಿತ್ತು. ಆದರೆ ಇಲ್ಲಿಗೆ ಬಂದೆ. ಕಾರ್ಯಕ್ರಮಗಳಲ್ಲಿ ಪರ, ವಿರೋಧ ಎನ್ನುವುದು ಇರುತ್ತದೆ. ಜನರ ವ್ಯಕ್ತಪಡಿಸಿರುವ ನೋವುಗಳನ್ನು ಶಾಸಕರ ಗಮನಕ್ಕೆ ತರುವೆ ಎಂದು ಸಚಿವ ಡಾ. ಎಂ.ಸಿ.ಸುಧಾಕರ್ ತಿಳಿಸಿದರು.

ಬಾಬೂ ಜಗಜೀವನ ರಾಂ ಅವರ ಜಯಂತಿಯ ವೇಳೆ ನಾನು ದಾವಣಗೆರೆಯಲ್ಲಿ ಇದ್ದೆ. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದಿದ್ದಕ್ಕೆ ಬೇಸರವಾಯಿತು. ಸಣ್ಣ ಪುಟ್ಟ ಕಾರ್ಯಕ್ರಮಗಳನ್ನು ತಪ್ಪಿಸಿಕೊಂಡಿದ್ದೇನೆ. ಆದರೆ ದೊಡ್ಡ ಕಾರ್ಯಕ್ರಮಗಳನ್ನು ತಪ್ಪಿಸಿಕೊಂಡಿಲ್ಲ ಎಂದರು. ಅವರು (ಪ್ರದೀಪ್ ಈಶ್ವರ್) ಎಲ್ಲಿ ಇದ್ದಾರೆ ಎನ್ನುವ ಮಾಹಿತಿ ಇಲ್ಲ. ಜನರ ನೋವುಗಳನ್ನು ಅವರ ಗಮನಕ್ಕೆ ತರುವೆ ಎಂದು ಹೇಳಿದರು.

### ಮಂಡ್ಯದಲ್ಲಿ ದೇಶದ 5ನೇ ಆಟೋಮೋಟಿವ್ ಕೇಂದ್ರ ಸ್ಥಾಪನೆಗೆ ಸರ್ಕಾರದಿಂದ 500 ಎಕರೆ ಭೂಮಿ ಮಂಜೂರು: ಏನಿದು ಎಆರ್‌ಎಐ ಕೇಂದ್ರ?

## 500 ಎಕರೆ ಭೂಮಿಯಲ್ಲಿ ಎಆರ್‌ಎಐ ಸ್ಥಾಪನೆಗೆ ಸರ್ಕಾರ ನಿರ್ಧಾರ

• **ಉದಯವಾಹಿನಿ, ಮಂಡ್ಯ**

ಮಂಡ್ಯದಲ್ಲಿ ಮಹತ್ವಾಕಾಂಕ್ಷೆಯ ಆಟೊಮೋಟಿವ್ ರೀಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾ ಸ್ಥಾಪನೆಗೆ 500 ಎಕರೆ ಭೂಮಿ ಮಂಜೂರು ಮಾಡುವುದಾಗಿ ರಾಜ್ಯ ಸರ್ಕಾರ ತಿಳಿಸಿದೆ.

**ಮಂಡ್ಯದಲ್ಲಿ ಎಆರ್‌ಎಐ ಕೇಂದ್ರಕ್ಕಾಗಿ 500 ಎಕರೆ ಜಾಗ:** ವಾಹನಗಳನ್ನು ಪರೀಕ್ಷಿಸಿ ಪ್ರಾಮಾಣೀಕರಿಸುವ ಎಆರ್‌ಎಐ ಕೇಂದ್ರಕ್ಕಾಗಿ ಜಿಲ್ಲೆಯಲ್ಲಿ 100 ಎಕರೆ ಭೂಮಿಯನ್ನು ನೀಡುವುದಾಗಿ ಆರಂಭಿಕವಾಗಿ ಸರ್ಕಾರ ಸುಳಿವು ನೀಡಿತ್ತು. ಆದರೆ, ಇದೀಗ ಕೇಂದ್ರ ಉಕ್ಕು, ಭಾರೀ ಕೈಗಾರಿಕೆಗಳ ಸಚಿವ ಎಚ್‌ಡಿ ಕುಮಾರಸ್ವಾಮಿ ಮತ್ತು ಕರ್ನಾಟಕ ಕೈಗಾರಿಕಾ ಸಚಿವ ಎಂಬಿ ಪಾಟೀಲ್ ಅವರು ಚರ್ಚೆ ನಡೆಸಿದ್ದು, ಇದಾದ ಬಳಿಕ ಮಂಡ್ಯದಲ್ಲಿ ಎಆರ್‌ಎಐ ಸ್ಥಾಪಿಸಲು ಬರೋಬ್ಬರಿ 500 ಎಕರೆ ಭೂಮಿಯನ್ನು ಗುರುತಿಸುವಂತೆ ವಿಶೇಷ ಜಿಲ್ಲಾಧಿಕಾರಿಗೆ ಕೈಗಾರಿಕಾ ಸಚಿವ ಎಂಬಿ ಪಾಟೀಲ್ ಅವರು ನಿರ್ದೇಶನ ನೀಡಿದ್ದಾರೆ. ಈ ಕುರಿತು ಹೇಳಿಕೆ ನೀಡಿದ ಎಂಬು ಪಾಟೀಲ್ ಮಂಡ್ಯದಲ್ಲಿ ಎಆರ್‌ಎಐ ಸ್ಥಾಪಿಸಲು ಕೇಂದ್ರವು ಆಸಕ್ತಿ ತೋರಿಸಿದೆ. ಈ ಹಿಂದೆ ಪ್ರಸ್ತಾಪಿಸಿದಂತೆ 100 ಎಕರೆಗಳಲ್ಲಿ ಸ್ಥಾಪಿಸುವ ಬದಲು, ಕನಿಷ್ಠ 500 ಎಕರೆಗಳಲ್ಲಿ ಸಮಗ್ರ ಕೈಗಾರಿಕಾ ಉದ್ಯಾನವನವನ್ನು ಸ್ಥಾಪಿಸುವ ಸಾಧ್ಯತೆಯ ಬಗ್ಗೆ ನಾವು ಚರ್ಚಿಸಿದ್ದೇವೆ ಎಂದಿದ್ದಾರೆ.

**ಕೇಂದ್ರವು ಆಸಕ್ತಿ ತೋರಿಸಿದೆ**

**ಎಆರ್‌ಎಐ ಕೇಂದ್ರಕ್ಕೆ 500 ಎಕರೆ ಜಾಗ ಏಕೆ?:** ಮುಂದುವರೆದು, ಕೇವಲ 100 ಎಕರೆಗಳಲ್ಲಿ ಎಆರ್‌ಎಐ ಅನ್ನು ಸ್ಥಾಪಿಸುವುದರಿಂದ ಅದು ಏಕೈಕ ಸೌಲಭ್ಯವಾಗಿ ಬದಲಾಗುತ್ತದೆ, ಅದರ ಬದಲಾಗಿ ಆಟೋಮೊಬೈಲ್ ವಲಯವನ್ನು ಬೆಂಬಲಿಸಲು ಎಆರ್‌ಎಐ ಅನ್ನು ಸಂಯೋಜಿಸುವ ಸಮಗ್ರ ಕೈಗಾರಿಕಾ ಕೇಂದ್ರವನ್ನು ಅಭಿವೃದ್ಧಿಪಡಿಸುವುದು ಉತ್ತಮ. ಈಗಾಗಲೇ ಎಚ್‌ಡಿ ಕುಮಾರಸ್ವಾಮಿ ಈ ಪ್ರಸ್ತಾವನೆಗೆ ಒಪ್ಪಿಕೊಂಡಿದ್ದಾರೆ. ಅದರಂತೆ, ಮಂಡ್ಯ ಜಿಲ್ಲೆಯಲ್ಲಿ ಸರ್ಕಾರಿ ಅಥವಾ ಖಾಸಗಿ ಭೂಮಿಯನ್ನು ಗುರುತಿಸಲು ವಿಶೇಷ ಜಿಲ್ಲಾಧಿಕಾರಿಗೆ ಸೂಚನೆಗಳನ್ನು ನೀಡಲಾಗಿದೆ ಎಂದು ತಿಳಿಸಿದ್ದಾರೆ.


ಉದಯವಾಹಿನಿ ಚಿತ್ರ

ಈ ಮೊದಲು ಎಆರ್‌ಎಐ ಕೇಂದ್ರಕ್ಕಾಗಿ ಮಂಡ್ಯದ ಬಸರಾಳು ಬಳಿ 105 ಎಕರೆ ಭೂಮಿಯನ್ನು ಒಪ್ಪಿಕೊಳ್ಳಲಾಗಿತ್ತು, ಆದರೆ, ಈಗ ಯೋಜನೆಗಳು ಬದಲಾಗಿರುವ ಕಾರಣದಿಂದಾಗಿ ಸರ್ಕಾರ ಇತರೆ ಆಯ್ಕೆಗಳಿಗೆ ಶೋಧ ಕಾರ್ಯ ನಡೆಸುತ್ತಿದೆ. ಅಲ್ಲದೆ, ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿಯ ಉದ್ದಕ್ಕೂ ಬೆಳ್ಳೂರು ಬಳಿ ಸುಮಾರು 425 ಎಕರೆ ಭೂಮಿಯನ್ನು 2021 ರಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಸದ್ಯ ಯೋಜನೆಗಾಗಿ ಈ ಸ್ಥಳವನ್ನು ಪರಿಗಣಿಸಲು ಕೇಂದ್ರವನ್ನು ಕೇಳಲಾಗಿದೆ ಎಂದು ಎಂಬಿ ಪಾಟೀಲ್ ತಿಳಿಸಿದ್ದಾರೆ. ಸಭೆಯಲ್ಲಿ ಭಾಗವಹಿಸಿದ್ದ ಕೆಲವರು ಪಾಂಡವಪುರದ ತೂಬಿನಕೆರೆ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಿರುವ ಭೂಮಿಯಲ್ಲಿ ಅಥವಾ ಮಂಡ್ಯ ತಾಲ್ಲೂಕಿನ ಗಡಿಯಲ್ಲಿ ಕೈಗಾರಿಕಾ ಕೇಂದ್ರವನ್ನು ಅಭಿವೃದ್ಧಿಪಡಿಸಬಹುದು ಎಂಬದಾಗಿ ಸೂಚಿಸಿದ್ದಾರೆ. ಆದಾಗ್ಯೂ, ಭೂಮಿಯ ಲಭ್ಯತೆಯ ಬಗ್ಗೆ ವಿವರವಾದ ವರದಿಯನ್ನು ಸಲ್ಲಿಸಿದ ನಂತರ ಯೋಜನೆಗೆ ಅಂತಿಮ ಸ್ಥಳದ ಬಗ್ಗೆ ಚರ್ಚಿಸುವುದು ಉತ್ತಮ ಎಂದು ಪರಿಗಣಿಸಲಾಗಿದೆ.

**ಮೇ ತಿಂಗಳಲ್ಲಿ ಎಆರ್‌ಎಐ ಕೇಂದ್ರಕ್ಕೆ ಶಂಕು ಸ್ಥಾಪನೆಗೆ ಯೋಜನೆ: ಈ ಮಧ್ಯೆ, ಯೋಜನೆಗೆ ಭೂಸ್ವಾಧೀನಕ್ಕೆ ಸಂಬಂಧಿಸಿದ ಎಲ್ಲಾ ಸಮಸ್ಯೆಗಳನ್ನು ಏಪ್ರಿಲ್ 30ರೊಳಗೆ ಪರಿಹರಿಸುವಂತೆ ಕುಮಾರಸ್ವಾಮಿ ವಿನಂತಿಸಿದ್ದು, ನಾವು ಮೇ ತಿಂಗಳಲ್ಲಿ ಎಆರ್‌ಎಐ ಕೇಂದ್ರಕ್ಕೆ ಶಂಕುಸ್ಥಾಪನೆ ಸಮಾರಂಭವನ್ನು ನಡೆಸಲು ಯೋಜಿಸುತ್ತಿದ್ದೇವೆ.**

**-ಎಚ್‌ಡಿ ಕುಮಾರಸ್ವಾಮಿ, ಕೇಂದ್ರ ಸಚಿವ**

**ಏನಿದು ಎಆರ್‌ಎಐ ಕೇಂದ್ರ?:** ಕೇಂದ್ರದ ಭಾರಿ ಕೈಗಾರಿಕೆಗಳ ಸಚಿವಾಲಯದ ಅಧೀನದಲ್ಲಿರುವ ಎಆರ್‌ಎಐ ಆಟೋಮೋಟಿವ್ ಕ್ಷೇತ್ರದ ಪ್ರತಿಷ್ಠತ ಸಂಶೋಧನೆ ಹಾಗೂ ಅಭಿವೃದ್ಧಿ ಸಂಸ್ಥೆಯಾಗಿದೆ. ವಾಹನಗಳ ಇಂಜಿನಿಯರಿಂಗ್, ಸುರಕ್ಷತೆ, ಮಾಲಿನ್ಯ ಹಾಗೂ ತಂತ್ರಜ್ಞಾನ ಅಭಿವೃದ್ಧಿ ಕೇಂದ್ರತವಾಗಿ ಪರೀಕ್ಷೆ ನಡೆಸುವ ಸಂಶೋಧನಾ ಹಾಗೂ ಅಭಿವೃದ್ಧಿ ಕೇಂದ್ರವಾಗಿದೆ. ಸಾರಿಗೆ-ಸಂಚಾರದಲ್ಲಿ ವ್ಯವಸ್ಥೆಯಲ್ಲಿ ಸುಧಾರಿತ ಪರಿಹಾರಗಳನ್ನು ಕಂಡುಕೊಳ್ಳುವ ಹಾಗೂ ಕೈಗಾರಿಕ ಮಾನದಂಡಗಳು, ಏಕರೂಪತೆ ಹಾಗೂ ಪ್ರಾಮಾಣೀಕರಣವನ್ನು ರೂಪಿಸುವಲ್ಲಿ ಪ್ರಮುಖ ಕೆಲಸ ಮಾಡುತ್ತದೆ.

**4 ಎಆರ್‌ಎಐ ಕೇಂದ್ರಗಳನ್ನು ಹೊಂದಿದೆ**

**ದೇಶವು ಈಗಾಗಲೇ 4 ಎಆರ್‌ಎಐ ಕೇಂದ್ರಗಳನ್ನು ಹೊಂದಿದೆ. ಆದಾಗ್ಯೂ, ಕರ್ನಾಟಕದಲ್ಲಿ 5ನೇ ಕೇಂದ್ರವನ್ನು ಸ್ಥಾಪಿಸುವ ಮಹಾದಾಸೆಯಿದ್ದು, ಇದು ಆಟೋಮೊಬೈಲ್ ಉದ್ಯಮ ಮತ್ತು ವಿದ್ಯುತ್ ವಾಹನಗಳ ತಯಾರಿಕೆಗೆ ಉತ್ತೇಜನ ನೀಡಲಿದೆ. ಅದರಲ್ಲೂ ನನ್ನ ಲೋಕಸಭಾ ಕ್ಷೇತ್ರವಾದ ಮಂಡ್ಯದಲ್ಲಿ ಎಆರ್‌ಎಐ ಕೇಂದ್ರವನ್ನು ಸ್ಥಾಪಿಸಲು ನಾನು ನಿರ್ಧರಿಸಿದ್ದೇನೆ. ಪಾಟೀಲ್ ಭರವಸೆ ನೀಡಿದಂತೆ ರಾಜ್ಯ ಸರ್ಕಾರ ಬೆಂಬಲ ನೀಡಿದರೆ, ನಾನು ಕರ್ನಾಟಕಕ್ಕೆ ಅಂತಹ ಹೆಚ್ಚಿನ ಕೈಗಾರಿಕೆಗಳನ್ನು ತರಬಲ್ಲೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಇದೇ ವೇಳೆ, ವಿದ್ಯುತ್ ಉಪಕರಣಗಳು, ದೊಡ್ಡ ಕೈಗಾರಿಕಾ ಫ್ಯಾನ್‌ಗಳು ಮತ್ತು ಟ್ರಾನ್ಸ್‌ಫಾರ್ಮರ್‌ಗಳನ್ನು ತಯಾರಿಸುವ ಆಂಡ್ರ್ಯೂ ಯೂಲ್ ಕಂಪನಿ ಲಿಮಿಟೆಡ್ (ಎವೈಸಿಎಲ್) ಮಂಡ್ಯದಲ್ಲಿ ತನ್ನ ಉತ್ಪಾದನಾ ಘಟಕವನ್ನು ಸ್ಥಾಪಿಸಲು 25-50 ಎಕರೆಗಳ ಅಗತ್ಯವಿದೆ ಎಂದು ಗಮನಿಸಿದ ಎಂ.ಬಿ. ಪಾಟೀಲ್ ಶೀಘ್ರದಲ್ಲೇ ಇದಕ್ಕಾಗಿ ಭೂಮಿಯನ್ನು ಮಂಜೂರು ಮಾಡುವುದಾಗಿ ಕಂಪನಿಗೆ ಭರವಸೆ ನೀಡಿದ್ದಾರೆ.**


**ಉದಯವಾಹಿನಿ**

**ಪ್ರಾದೇಶಿಕ**

ಬುಧವಾರ
15 ಏಪ್ರಿಲ್ 2026




# ಮಿನಿ ನ್ಯೂಸ್

## ಕಾಂಗ್ರೆಸ್ ಕಚೇರಿಗೆ ಜಾಗ ಜೆಡಿಎಸ್ ವಿರೋಧ


• **ಉದಯವಾಹಿನಿ, ಮಾಗಡಿ**

ಪುರಸಭೆ ಬೆಲೆಬಾಳುವ ಜಾಗವನ್ನು ಕಾಂಗ್ರೆಸ್ ಕಚೇರಿಗೆ ನೀಡಿದ್ದನ್ನು ಜೆಡಿಎಸ್ ತೀವ್ರವಾಗಿ ವಿರೋಧಿಸಿದೆ. ಪುರಸಭೆ ಮಾಜಿ ಸದಸ್ಯ ಎಂ.ಎಂ. ಮಂಜುನಾಥ್ ಮಾತನಾಡಿ, ತಾವು ಸಭೆಯಲ್ಲೇ ಈ ನಿರ್ಧಾರವನ್ನು ಪ್ರಶ್ನಿಸಿದ್ದಾಗಿ ತಿಳಿಸಿದರು. ಆ ಜಾಗದಲ್ಲಿ ವಾಣಿಜ್ಯ ಅಂಗಡಿ ಕಟ್ಟಿ ಪುರಸಭೆಗೆ ಆದಾಯ ತರಬಹುದಿತ್ತು. ಬದಲಿಗೆ ಶಾಸಕರು ತಮ್ಮ ಅಧಿಕಾರವೆಂಬಂತೆ ಜಾಗ ಮಂಜೂರು ಮಾಡಿಸಿಕೊಂಡಿದ್ದಾರೆ ಎಂದು ಆರೋಪಿಸಿದರು.

ಕೆಂಪೇಗೌಡರ ಪ್ರತಿಮೆ ಸ್ಥಳಾಂತರಿಸಿದ್ದನ್ನೂ ಅವರು ಪ್ರಶ್ನಿಸಿದರು. ಕಳೆದ ಏಳು ವರ್ಷಗಳಿಂದ ಜೆಡಿಎಸ್ ಕಚೇರಿ ಮುಂದಿನ ರಸ್ತೆ, ಚರಂಡಿ ಕಾಮಗಾರಿ ಆಗಿಲ್ಲ. ಇದನ್ನು ಪ್ರಶ್ನಿಸಿದರೆ ಅಭಿವೃದ್ಧಿಗೆ ವಿರೋಧ ಎನ್ನಲಾಗುತ್ತದೆ ಎಂದು ಹೇಳಿದರು.

ಶಾಸಕರ ಅನುದಾನದಲ್ಲಿ ಅವರ ಹಿಂಬಾಲಕರು ದರ್ಬಾರು ಮಾಡುತ್ತಿದ್ದಾರೆ ಎಂದು ದೂರಿದರು. ಬೆಳಗುಂಬ ವಿಎಸ್‌ಎಸ್‌ಎನ್ ಅಧ್ಯಕ್ಷ ಹೊಸಹಳ್ಳಿ ರಂಗಣ್ಣ ಮಾತನಾಡಿ, ತಮ್ಮ ವಿರುದ್ಧ ಆರೋಪ ಮಾಡಿರುವ ಕಾಂಗ್ರೆಸ್ ಮುಖಂಡ ಕೃಷ್ಣಮೂರ್ತಿಗೆ ತಾವೇ ಒಮ್ಮೆ ಚುನಾವಣೆಯಲ್ಲಿ ಸಹಾಯ ಮಾಡಿದ್ದಾಗಿ ನೆನಪಿಸಿದರು.

## ಸ್ಮಾರ್ಟ್ ಮೀಟರ್ ಅಳವಡಿಕೆಗೆ ವಿರೋಧ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಮಧುಗಿರಿ**

ಕೇಂದ್ರ ಸರ್ಕಾರ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣ ಮಾಡುತ್ತಿರುವುದನ್ನು ರಾಜ್ಯ ಸರ್ಕಾರ ವಿರೋಧಿಸಬೇಕು. ರೈತರ ಪಂಪ್‌ಸೆಟ್‌ಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಕೆಯನ್ನು ರಾಜ್ಯ ಸರ್ಕಾರ ಕೂಡಲೇ ಕೈ ಬಿಡುವ ಮೂಲಕ ರೈತರ ಪರ ನಿಲ್ಲಬೇಕು ಎಂದು ಜಿಲ್ಲಾ ರೈತ ಸಂಘದ ಅಧ್ಯಕ್ಷ ಎ. ಗೋವಿಂದರಾಜು ಆಗ್ರಹಿಸಿದರು. ರೈತಸಂಘದಿಂದ ಟೌನ್ ಹಾಲ್‌ನಿಂದ ತಾಲ್ಲೂಕು ಕಚೇರಿವರೆಗೆ ಪ್ರತಿಭಟನೆ ನಡೆಸಲಾಯಿತು. ರೈತರಿಗೆ ಅಗತ್ಯವಾದ ವಿದ್ಯುತ್ತನ್ನು ಸರ್ಕಾರವೇ ಒದಗಿಸಬೇಕು. ಹಗಲು ದಿನಕ್ಕೆ 7ಗಂಟೆ ಸಮರ್ಪಕವಾಗಿ ಸರಬರಾಜು ಆಗಬೇಕು ಎಂದರು. ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗಿರೇಗೌಡನಹಳ್ಳಿ ಶಂಕರಪ್ಪ ಮಾತನಾಡಿ, ತಾಲ್ಲೂಕಿನ ಹತ್ತಿ ಬೆಳಗಾರರಿಗೆ ಏಜೆಂಟರಿಂದ ಬರಬೇಕಾದ ಬಾಕಿ ಸಂದಾಯವಾಗಬೇಕು. ಹತ್ತಿ ಕಾಳಿನ ತೂಕ, ಬೆಲೆಯಲ್ಲಿ ಮೋಸ ಮಾಡಿ ರೈತರಿಗೆ ಕಿರುಕುಳ ಕೊಡುವ ಏಜೆಂಟರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಚಿಕ್ಕಬಳ್ಳಾಪುರ ಜಿಲ್ಲಾ ರೈತ ಸಂಘದ ಅಧ್ಯಕ್ಷ ಲಕ್ಷ್ಮಿನಾರಾಯಣ ರೆಡ್ಡಿ ಮಾತನಾಡಿ, ಜಿಲ್ಲೆಯಲ್ಲಿ ಹುಣಸೆ ಅಭಿವೃದ್ಧಿ ಮಂಡಳಿ ಸ್ಥಾಪನೆ ಆಗಬೇಕು ಎಂದು ಒತ್ತಾಯಿಸಿದರು. ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ತಹಶೀಲ್ದಾರ್ ಶ್ರೀನಿವಾಸ್ ಏ. 21ರಂದು ಅಧಿಕಾರಿಗಳನ್ನು ಕರೆಸಿ ಸಭೆ ನಡೆಸುವುದಾಗಿ ಭರವಸೆ ನೀಡಿದರು.

## ಮೋದಿ ಸ್ವಾಗತಕ್ಕೆ ಮೈಸೂರು ಪೇಟ

• **ಉದಯವಾಹಿನಿ, ಮೈಸೂರು**

ಏ. 15ರಂದು ಮಂಡ್ಯ ಜಿಲ್ಲೆಯ ಆದಿಚುಂಚನಗಿರಿ ಪೀಠದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳಲಿದ್ದು, ಅವರ ಸ್ವಾಗತಕ್ಕಾಗಿ ವಿಶಿಷ್ಟ ರೀತಿಯ ಮೈಸೂರು ಪೇಟ ಸಜ್ಜಾಗಿದೆ. ಇಲ್ಲಿನ ಕಲಾವಿದ ನಂದನ್ ಸಿಂಗ್ ಅವರು ಈ ಪೇಟ ಸಿದ್ದಗೊಳಿಸಿದ್ದಾರೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಧರಿಸುತ್ತಿದ್ದ ಪೇಟದ ಮಾದರಿ ಇದಾಗಿದ್ದು, ಕೆಂಪು ವರ್ಣದ ಮೈಸೂರು ರೇಷ್ಮೆ ಹಾಗೂ ಬನಾರಸ್ ಸಾಫ್ಟ್ ಸಿಲ್ಕ್ ಅನ್ನು ಬಳಸಲಾಗಿದೆ. ಮಧ್ಯದಲ್ಲಿ ಮೈಸೂರಿನ ರಾಜ ಲಾಂಛನ ಗಂಡುಬೇರುಂಡವನ್ನು ಸೇರಿಸಲಾಗಿದೆ. ಎರಡೂ ಕಡೆ ಸಣ್ಣ ಸಣ್ಣ ಮುತ್ತುಗಳನ್ನು ಪೋಣಿಸಲಾಗಿದೆ. ಇದಕ್ಕಾಗಿ ನಂದನ್ ಸಿಂಗ್ ಐದು ದಿನ ಕಾಲ ಶ್ರಮಿಸಿದ್ದಾರೆ.



ನಿರ್ಮಲಾನಂದನಾಥ ಶ್ರೀಗಳ ಸಲಹೆಯಂತೆ ಈ ಪೇಟ ಸಿದ್ದಗೊಳಿಸಲು ನಂದನ್ ಅವರನ್ನು ಕೋರಿದ್ದೆವು. ಅವರು ಸಿದ್ಧಪಡಿಸಿಕೊಟ್ಟ ಪೇಟವನ್ನು ಶ್ರೀಗಳಿಗೆ ಒಪ್ಪಿಸಲಾಗುತ್ತಿದೆ. 15ರಂದು ನಡೆಯುವ ಕಾರ್ಯಕ್ರಮದಲ್ಲಿ ಶ್ರೀಗಳು ಪ್ರದಾನಿ ಮೋದಿ ಅವರಿಗೆ ಇದನ್ನು ನೀಡಲಿದ್ದಾರೆ ಎಂದು ಮಠದ ಭಕ್ತರಾದ ಸತೀಶ್ ಗೌಡ ತಿಳಿಸಿದರು.

ಅಂತರಾಳದಿಂದ... EDITORIAL

# ದಾಖಲೆ ಪ್ರಮಾಣದಲ್ಲಿ ಮತದಾನ: ಪ್ರಜಾಪ್ರಭುತ್ವ ವ್ಯವಸ್ಥೆಗೆ ಹುರುಪು



ಕೇರಳ, ಅಸ್ಸಾಂ, ಪುದುಚೇರಿಗಳಲ್ಲಿ ಕಳೆದ ಗುರುವಾರ (ಏಪ್ರಿಲ್ 9) ನಡೆದ ವಿಧಾನಸಭಾ ಚುನಾವಣೆಯಲ್ಲಿ ನಡೆದಿರುವ ದಾಖಲೆ ಪ್ರಮಾಣದ ಮತದಾನ, ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದನ್ನು ಮತದಾರರು ಗಂಭೀರವಾಗಿ ಪರಿಗಣಿಸಿರುವುದರ ಸೂಚನೆಯಂತಿದೆ.

ಶೇ. 78.27ರಷ್ಟು ಮತದಾನ ಆಗಿರುವ ಕೇರಳವು ಮೊದಲಿನಿಂದಲೂ ಚುನಾವಣಾ ಪ್ರಕ್ರಿಯೆಯಲ್ಲಿ ಮತದಾರರು ಉತ್ಸಾಹದಿಂದ ಭಾಗವಹಿಸುವುದಕ್ಕೆ ಪ್ರಸಿದ್ಧವಾದ ರಾಜ್ಯ. 2021ರ ಚುನಾವಣೆಯಲ್ಲಿ ನಡೆದಿದ್ದ ಶೇ 74.06ಷ್ಟು ಮತದಾನಕ್ಕೆ ಹೋಲಿಸಿದರೆ ಈ ಬಾರಿ ಮತದಾನದ ಪ್ರಮಾಣ ಶೇ 4ರ ಜಿಗಿತ ದಾಖಲಿಸಿದೆ.

ಪುದುಚೇರಿಯಲ್ಲಿ ದಾಖಲಾಗಿರುವ ಶೇ 89.87ರಷ್ಟು ಮತದಾನ, ಆ ಕೇಂದ್ರಾಡಳಿತ ಪ್ರದೇಶದ ಚುನಾವಣಾ ಚರಿತ್ರೆಯಲ್ಲಿಯೇ ಗರಿಷ್ಠ ಪ್ರಮಾಣದ್ದಾಗಿದೆ. ಅಸ್ಸಾಂ ಕೂಡ ಅದರ ಚುನಾವಣಾ ಇತಿಹಾಸದಲ್ಲಿ ಗರಿಷ್ಠ ದಾಖಲೆಯಾದ ಶೇ 85ರಷ್ಟು ಮತ ಚಲಾವಣೆಯನ್ನು ಕಂಡಿದೆ. ಮತದಾನ ಪ್ರಮಾಣದಲ್ಲಿನ ಹೆಚ್ಚಳಕ್ಕೆ ಕಾರಣಗಳು ಹಾಗೂ ಅದರಿಂದ ಫಲಿತಾಂಶದ ಮೇಲೆ ಆಗಬಹುದಾದ ಪರಿಣಾಮಗಳ ಬಗ್ಗೆ ಚರ್ಚೆಗಳು ಮತ್ತು ವಿಶ್ಲೇಷಣೆಗಳು ನಡೆಯುತ್ತಿವೆ. ಆದರೆ, ಮತದಾನ ಪ್ರಮಾಣದಲ್ಲಿನ ಗಣನೀಯ ಹೆಚ್ಚಳವನ್ನು ಆಡಳಿತ ವಿರೋಧಿ ಅಲೆಯ ರೂಪದಲ್ಲಿ ನೋಡುವ ಸಾಮಾನ್ಯ ಪರಿಕಲ್ಪನೆಯು ಎಲ್ಲಾ ಸಂದರ್ಭಗಳಲ್ಲೂ ಸರಿಯಾಗಿರಲಾರದು ಎನ್ನುವುದು ಈಗಾಗಲೇ ಹಲವು ಬಾರಿ ಸಾಬೀತಾಗಿದೆ. ಮತದಾನ ಪ್ರಮಾಣದ ಹೆಚ್ಚಳಕ್ಕೆ ಕಾರಣಗಳನ್ನು ಸದ್ಯದ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳುವುದು ಸಾಧ್ಯವಿಲ್ಲ.

**ವಲಸೆ ಮತ್ತು ಪೌರತ್ವ ಹಕ್ಕುಗಳ ವಿಶೇಷ ಪರಿಸ್ಥಿತಿಯಿಂದಾಗಿ ಅಸ್ಸಾಂನಲ್ಲಿ ಮತದಾರರ ಪಟ್ಟಿಗಳಿಂದ ಶೇ 1ರಷ್ಟು ಹೆಸರುಗಳನ್ನು ಮಾತ್ರ ತೆಗೆದುಹಾಕಲಾಗಿದೆ. ಆದರೂ ಅಲ್ಲಿ ಮತದಾನದ ಪ್ರಮಾಣದಲ್ಲಿ ಗಣನೀಯ ಹೆಚ್ಚಳವಾಗಿರುವುದು ಗಮನಾರ್ಹ.**

ಆದರೆ, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯು (ಎಸ್ಐಆರ್) ಮತ ಚಲಾವಣೆ ಪ್ರಮಾಣ ಹೆಚ್ಚಾಗಲಿಕ್ಕೆ ಕಾರಣಗಳಲ್ಲೊಂದು ಎಂದು ಹೇಳುವುದು ತಪ್ಪಾಗಲಾರದು.

ಎಸ್ಐಆರ್ ಪ್ರಕ್ರಿಯೆಯು ಕೇರಳದಲ್ಲಿ ಶೇ 3.2ರಷ್ಟು ಹಾಗೂ ಪುದುಚೇರಿಯಲ್ಲಿ ಶೇ 7.5ರಷ್ಟು ಮತದಾರರ ಸಂಖ್ಯೆಯನ್ನು ಕಡಿಮೆ ಮಾಡಿದೆ. ಮತದಾರರ ಪಟ್ಟಿಯಿಂದ ಹೊರ ಬಿದ್ದವರಲ್ಲಿ, ಮೃತಪಟ್ಟವರು, ನಕಲಿ ನಮೂದುಗಳು ಮತ್ತು ಅಗತ್ಯ ದಾಖಲೆಗಳನ್ನು ಸಲ್ಲಿಸಲು ವಿಫಲರಾದವರು ಸೇರಿದ್ದಾರೆ. ಹೀಗೆ ಮತದಾರರ ಪಟ್ಟಿಯು ಕುಗ್ಗಿರುವುದು ಮತದಾನದ ಪ್ರಮಾಣ ಹೆಚ್ಚಾಗುವುದಕ್ಕೆ ಒಂದು ಕಾರಣವಾಗಿದೆ.

ಮತಪಟ್ಟಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಹೆಸರುಗಳನ್ನು ತೆಗೆದುಹಾಕಿರುವ ಪುದುಚೇರಿಯಲ್ಲಿ, ಕೇರಳಕ್ಕಿಂತಲೂ ಹೆಚ್ಚಿನ ಶೇಕಡಾವಾರು ಮತದಾನ ಆಗಿರುವುದು ಗಮನಾರ್ಹ. ಕೇರಳದ ಕೆಲವು ಕ್ಷೇತ್ರಗಳಲ್ಲಿ ಹೆಚ್ಚಿನ ಪ್ರಮಾಣದ ಮತದಾನ ಆಗಿದ್ದರೂ, ಚಲಾವಣೆಯಾದ ಮತಗಳ ಸಂಖ್ಯೆಯಲ್ಲೇನೂ ಹೆಚ್ಚಳವಾಗಿಲ್ಲ. ಕೇರಳ ಹಾಗೂ ಪುದುಚೇರಿಗೆ ಹೋಲಿಸಿದರೆ ಅಸ್ಸಾಂನಲ್ಲಿ ಎಸ್ಐಆರ್ ಪ್ರಕ್ರಿಯೆ ತೀರಾ ಕಟ್ಟುನಿಟ್ಟಾಗಿರಲಿಲ್ಲ.

ವಲಸೆ ಮತ್ತು ಪೌರತ್ವ ಹಕ್ಕುಗಳ ವಿಶೇಷ ಪರಿಸ್ಥಿತಿಯಿಂದಾಗಿ ಅಸ್ಸಾಂನಲ್ಲಿ ಮತದಾರರ ಪಟ್ಟಿಗಳಿಂದ ಶೇ 1ರಷ್ಟು ಹೆಸರುಗಳನ್ನು ಮಾತ್ರ ತೆಗೆದುಹಾಕಲಾಗಿದೆ. ಆದರೂ ಅಲ್ಲಿ ಮತದಾನದ ಪ್ರಮಾಣದಲ್ಲಿ ಗಣನೀಯ ಹೆಚ್ಚಳವಾಗಿರುವುದು ಗಮನಾರ್ಹ.

ಮತದಾರರ ಪಟ್ಟಿಯಿಂದ ಹೆಸರುಗಳನ್ನು ತೆಗೆದುಹಾಕುವ ಎಸ್ಐಆರ್ ಪ್ರಕ್ರಿಯೆಯು ಮೂಡಿಸಿರಬಹುದಾದ ಎಚ್ಚರವು, ಹೆಚ್ಚಿನ ಮತದಾರರು ತಮ್ಮ ಹಕ್ಕನ್ನು ಚಲಾಯಿಸುವುದಕ್ಕೆ ಪ್ರೇರಣೆ ಆಗಿರಬಹುದು. ಇದಕ್ಕೆ ಉದಾಹರಣೆಯಾಗಿ, ದೊಡ್ಡ ಸಂಖ್ಯೆಯ ವಲಸೆ ಕಾರ್ಮಿಕರು ರಾಜ್ಯಕ್ಕೆ ಹಿಂದಿರುಗಿ ಮತ ಚಲಾಯಿಸಿರುವ ಬೆಳವಣಿಗೆ ಅಸ್ಸಾಂನಲ್ಲಿ ನಡೆದಿದೆ. ಆದರೆ, ಇರಾನ್ ಹಾಗೂ ಅಮೆರಿಕ ಇಸ್ರೇಲ್ ನಡುವಿನ ಯುದ್ಧದಿಂದಾಗಿ ವಾಯುಯಾನದಲ್ಲಿ ಉಂಟಾಗಿರುವ ವ್ಯತ್ಯಯದಿಂದಾಗಿ, ಗಲ್ಫ್ ರಾಷ್ಟ್ರಗಳಲ್ಲಿ ವಾಸಿಸುತ್ತಿರುವ ಕೇರಳದ ಹಲವು ಮತದಾರರಿಗೆ ತವರಿಗೆ ಬಂದು ಮತದಾನ ಮಾಡುವುದು ಸಾಧ್ಯವಾಗಿಲ್ಲ. ಮತದಾನ ಪ್ರಮಾಣದಲ್ಲಿನ ಜಿಗಿತವು ತಮಗೆ ಅನುಕೂಲಕರ ಫಲಿತಾಂಶ ಕಲ್ಪಿಸಲಿದೆ ಎಂದು ಪ್ರಸ್ತುತ ಎಲ್ಲಾ ರಾಜಕೀಯ ಪಕ್ಷಗಳು ಹೇಳಿಕೊಳ್ಳುತ್ತಿವೆ. ಆದರೆ, ಯಾರ ನಿರೀಕ್ಷೆ ನಿಜವಾಗಲಿದೆ ಎನ್ನುವುದನ್ನು ತಿಳಿಯಲು ಮೇ 4ರ ಫಲಿತಾಂಶದವರೆಗೂ ಕಾಯಬೇಕಾಗಿದೆ. ಫಲಿತಾಂಶ ಏನೇ ಆಗಿರಲಿ, ಮತದಾನ ಪ್ರಮಾಣದಲ್ಲಿನ ಹೆಚ್ಚಳವು ಪ್ರಜಾಪ್ರಭುತ್ವ ವ್ಯವಸ್ಥೆಗೆ ಉತ್ಸಾಹ ತುಂಬುವಂತಿದೆ.



# ಮಗುವಿಗೆ ಎಣ್ಣೆ ಮಸಾಜ್

**ಶಿಶು ಅಭ್ಯಂಗ**

ಶಿಶುಗಳಿಗೆ ಔಷಧೀಯ ಎಣ್ಣೆ ಚಿಕಿತ್ಸೆ, ಆಯುರ್ವೇದದಲ್ಲಿ ಶಿಶು ಅಭ್ಯಂಗ ಎಂದು ಕರೆಯಲ್ಪಡುತ್ತದೆ, ಇದು ಸರಳವಾದ ಆದರೆ ಶಕ್ತಿಯುತವಾದ ಅಭ್ಯಾಸವಾಗಿದ್ದು, ಒಟ್ಟಾರೆ ಬೆಳವಣಿಗೆಯನ್ನು ಬೆಂಬಲಿಸುತ್ತದೆ. ಇದು ಸ್ನಾಯುಗಳು ಮತ್ತು ಮೂಳೆಗಳನ್ನು ಬಲಪಡಿಸಲು ಸಹಾಯ ಮಾಡುತ್ತದೆ.

ಚರ್ಮವನ್ನು ಮೃದುವಾಗಿಡುತ್ತದೆ ಮತ್ತು ದದ್ದುಗಳಿಂದ ರಕ್ಷಿಸುತ್ತದೆ ಮತ್ತು ರಕ್ತ ಪರಿಚಲನೆ, ಜೀರ್ಣಕ್ರಿಯೆ, ರೋಗನಿರೋಧಕ ಶಕ್ತಿ ಮತ್ತು ನಿದ್ರೆಯನ್ನು ಸುಧಾರಿಸುತ್ತದೆ. ನಿಯಮಿತ ಚಿಕಿತ್ಸೆಯು ಮೆದುಳಿನ ಬೆಳವಣಿಗೆಯನ್ನು ಸಹ ಬೆಂಬಲಿಸುತ್ತದೆ ಮತ್ತು ಪೋಷಕರು ಮತ್ತು ಮಗುವಿನ ನಡುವೆ ಬಲವಾದ ಭಾವನಾತ್ಮಕ ಬಂಧವನ್ನು ಸೃಷ್ಟಿಸುತ್ತದೆ .

**ನೀವು ಯಾವಾಗ ಮಸಾಜ್ ಮಾಡಲು ಪ್ರಾರಂಭಿಸಬೇಕು?**

ಅಕಾಲಿಕ ಶಿಶುಗಳಲ್ಲಿ, ಇದು ಆರೋಗ್ಯಕರ ತೂಕ ಹೆಚ್ಚಳಕ್ಕೆ ಸಹಾಯ ಮಾಡುತ್ತದೆ ಮತ್ತು ಮೂಳೆ ಬೆಳವಣಿಗೆಯನ್ನು ಪೋಷಿಸುತ್ತದೆ. ಆದರ್ಶಪ್ರಾಯವಾಗಿ, ಪೋಷಕರು ಜನನದ ನಂತರ ಸುಮಾರು 2?4 ವಾರಗಳ ನಂತರ ಪ್ರಾರಂಭಿಸಬಹುದು, ಮಗುವಿನ ಚರ್ಮದ ತಡೆಗೋಡೆ ರೂಪುಗೊಂಡ ನಂತರ ಮತ್ತು ಹೊಕ್ಕುಳಬಳ್ಳಿಯು ಗುಣವಾದ ನಂತರ. ನವಜಾತ ಶಿಶುಗಳಿಗೆ, ಹೊಕ್ಕುಳ ಪ್ರದೇಶವನ್ನು ತಪ್ಪಿಸುವಾಗ ಮೊದಲ 1?2 ವಾರಗಳಲ್ಲಿ ಬಹಳ ಸೌಮ್ಯವಾದ ಚಿಕಿತ್ಸೆಯು ಮೊದಲೇ ಪ್ರಾರಂಭವಾಗಬಹುದು ಮತ್ತು ನಂತರ ಒಂದು ತಿಂಗಳೊಳಗೆ ಕ್ರಮೇಣ ಹೆಚ್ಚು ನಿಯಮಿತವಾಗಬಹುದು.

**ದೈಹಿಕ ಬೆಳವಣಿಗೆಗೆ ಸಹಾಯ ಮಾಡುತ್ತದೆ**

ಆಯುರ್ವೇದದಲ್ಲಿ, ಅಭ್ಯಂಗ?ಅಥವಾ ಎಣ್ಣೆ ಮಸಾಜ್?ದೇಹದ ಸಮತೋಲನವನ್ನು ಕಾಪಾಡಿಕೊಳ್ಳಲು ಅತ್ಯಗತ್ಯ ಎಂದು ವಿವರಿಸಲಾಗಿದೆ. ಚಿಕ್ಕ ಮಕ್ಕಳಲ್ಲಿ, ಈ ಅಭ್ಯಾಸವು ಅವರ ದೈಹಿಕ ಬೆಳವಣಿಗೆಯನ್ನು ಬೆಂಬಲಿಸುತ್ತದೆ. ಸೌಮ್ಯವಾದ ಮಸಾಜ್ ದೇಹದ ನಮ್ಯತೆಯನ್ನು ಹೆಚ್ಚಿಸುತ್ತದೆ ಮತ್ತು ಸ್ನಾಯುಗಳಿಗೆ ಶಕ್ತಿಯನ್ನು ನೀಡುತ್ತದೆ.

# ಮನಮೋಹಕ ಅರ್ಥಪೂರ್ಣ 'ಸಮನ್ವಯ' ಕಲೋತ್ಸವ



ಕಲಾ ಸಾಹಿತ್ಯ

ವೈ.ಕೆ. ಸಂಧ್ಯಾ ಶರ್ಮ
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು



**ಈಗಾಗಲೇ ಉತ್ತಮ ಭರತನಾಟ್ಯ ಕಲಾವಿದೆಯರಾಗಿ ಗುರುತಿಸಿಕೊಂಡಿರುವ ಶ್ರೀಮತಿ ಜಯಶೀಲ ವಿನೋದ್ ಮತ್ತು ರವಳೀ ನಾಗೇಶ್ವರ ಅವರು ಹಲವಾರು ಮನಸೆಳೆವ ಕೃತಿಗಳನ್ನು ಸೊಗಸಾಗಿ ಅಭಿನಯಿಸಿ, ಸುಮನೋಹರವಾಗಿ ನರ್ತಿಸಲಿದ್ದಾರೆ.**

ಭಾರತೀಯ ನೃತ್ಯ ಜಗತ್ತಿನಲ್ಲಿ ಭರತನಾಟ್ಯ ಮತ್ತು ಕುಚಿಪುಡಿ ಎರಡೂ ನೃತ್ಯ ಶೈಲಿಗಳ ನೃತ್ಯಪಟು ಡಾ.ವೀಣಾ ಮೂರ್ತಿ ವಿಜಯ್ ಅವರ ಹೆಸರನ್ನು ಕೇಳದವರೇ ಇಲ್ಲ. ವರ್ಷವಿಡಿ ಒಂದಲ್ಲ ಒಂದು ಬಗೆಯ ಚಟುವಟಿಕೆಯಿಂದ ನಾಟ್ಯರಂಗದವರ ಗಮನವನ್ನು ಸೆಳೆದಿರುವ ಇವರು ಅನವರತ ಕ್ರಿಯಾಶೀಲರು ಎಂದರೆ ಅತಿಶಯೋಕ್ತಿಯಲ್ಲ. ಹೊಸತನ, ಪ್ರಯೋಗ ಶೀಲತೆ ಇವರ ಅಸ್ಮಿತೆ. ಸಂಘಟನೆ ಇವರ ಚೇತನ. ಸತತ ಐದು ದಶಕಗಳನ್ನು ಯಶಸ್ವಿಯಾಗಿ ದಾಟಿ ಬಂದಿರುವ ಇವರ ನೇತೃತ್ವದ 'ಶ್ರೀ ರಾಜರಾಜೇಶ್ವರಿ ಕಲಾನಿಕೇತನ್' ನೃತ್ಯ ಸಂಸ್ಥೆಗೆ ಈ ವರ್ಷ ಸುವರ್ಣ ಸಂಭ್ರಮ. ಅಂತರಾಷ್ಟ್ರೀಯ ಮಟ್ಟದಲ್ಲೂ ಸುಪ್ರಸಿದ್ಧ ಕಲಾವಿದೆಯಾಗಿರುವ ವೀಣಾ ಅಪೂರ್ವ ನೃತ್ಯ ಸಂಯೋಜಕಿ- ಬದ್ಧತೆಯ ಗುರು, ಮಾರ್ಗದರ್ಶಿ ಮತ್ತು ಕಲಾ ಪ್ರೋತ್ಸಾಹಕಿ. ಈ ನಿಟ್ಟಿನಲ್ಲಿ ವೀಣಾ, ಕಲಾವಿದರಿಗೆ ವೇದಿಕೆ ಒದಗಿಸಿ ಅವರನ್ನು ಪ್ರೋತ್ಸಾಹಿಸಲು ಅನೇಕಾನೇಕ ನೃತ್ಯೋತ್ಸವಗಳನ್ನು ನಡೆಸುತ್ತಾ ಬಂದಿರುವುದು ಸರ್ವರಿಗೂ ವಿದಿತ. ಅವರ ನುರಿತ ಗರಡಿಯಲ್ಲಿ ಸಾವಿರಾರು ಮಂದಿ ಉದಯೋನ್ಮುಖ ಕಲಾವಿದರು ರೂಹುಗೊಂಡು ರಂಗಪ್ರವೇಶ ಮಾಡಿ ಉತ್ತಮ ಕಲಾವಿದೆಯರಾಗಿ ಸಾಧಕ ಹೆಜ್ಜೆಗಳನ್ನು ಇರಿಸುತ್ತಿರುವ ಶ್ರೇಯಸ್ಸು ಇವರ ಅಗ್ಗಳಿಕೆ. ಹಿರಿ-ಕಿರಿಯರೆನ್ನುವ ತಾರತಮ್ಯತೆ ಇಲ್ಲದೆ ಎಲ್ಲರನ್ನೂ ತಮ್ಮೊಟ್ಟಿಗೆ ಕೊಂಡೊಯ್ಯುತ್ತ ಬೆಳೆಸುವುದು ಇವರ ವೈಶಿಷ್ಟ್ಯ.

ಅದೇ ಇವರ ಅಸ್ಮಿತೆಯ 'ಸಮನ್ವಯ'ತೆಯ ಗುಣ. ಇದನ್ನು ಎತ್ತಿಹಿಡಿಯುವ ಪ್ರಮುಖೋದ್ದೇಶದಿಂದ ಪ್ರತಿ ವರ್ಷವೂ ತಪ್ಪದೇ ಇವರು ನೆರವೇರಿಸುವ ವಿಶಿಷ್ಟ ಕಾರ್ಯಕ್ರಮವೇ 'ಸಮನ್ವಯ ಕಲಾ ಉತ್ಸವ'. ಸಮಕಾಲೀನ ವಿಷಯ, ವಸ್ತುಗಳನ್ನು ಆಯ್ದುಕೊಂಡು ನೃತ್ಯರೂಪಕಗಳನ್ನು, ವಿನೂತನ ನೃತ್ಯಪ್ರಯೋಗಗಳನ್ನು ಸಮನ್ವಯದ ಶೀರ್ಷಿಕೆಯಡಿ ಆಯೋಜಿಸುತ್ತ ಬಂದಿದ್ದು, ಅದರಂತೆ ಈ ಹೊಸವರ್ಷದಲ್ಲಿ ಸಮನ್ವಯ ಕಲಾ ಉತ್ಸವವನ್ನು ಇದೇ ತಿಂಗಳ 18 ಶನಿವಾರ ಸಂಜೆ 5 ಗಂಟೆಗೆ ಮಲ್ಲೇಶ್ವರದ ಸೇವಾಸದನದಲ್ಲಿ ವಿಭಿನ್ನ ಆಯಾಮದಲ್ಲಿ ವೈವಿಧ್ಯಪೂರ್ಣ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸುತ್ತಿದ್ದಾರೆ.

ಪ್ರಸ್ತುತ ಸಮಾಜದ ಜ್ವಲಂತ ಸಮಸ್ಯೆಯಾಗಿ ಕಾಡುತ್ತಿರುವ ಅನಾರೋಗ್ಯವನ್ನು ಸೃಷ್ಟಿಸುತ್ತಿರುವ ಜನತೆಗೆ ತಲೆನೋವಾಗಿರುವ 'ಕಸದ ಸಮಸ್ಯೆ'ಯ ಬಗ್ಗೆ ಉತ್ತಮ ಸಂದೇಶಾತ್ಮಕ ಕಥಕ್ -ಸಮಕಾಲೀನ ನೃತ್ಯ ಶೈಲಿಯ ನೃತ್ಯರೂಪಕ ಗಬ್ಬು ಕಥೆಯನ್ನು ವಿನೋದಾತ್ಮಕವಾಗಿ, ವಿಮರ್ಶಕ ವಿಚಕ್ಷಣ ದೃಷ್ಟಿಯಿಂದ ಜನತೆಗೆ ಉತ್ತಮ ಸಂದೇಶ ಸಾರುವ ಮನರಂಜನಾತ್ಮಕವಾಗಿಯೂ ಇರುವ ಕಥಾರೂಪಕವನ್ನು ಸುಪ್ರಸಿದ್ಧ ಕಥಕ್ ಕಲಾವಿದರು, ಸಂಯೋಜಕರೂ ಆಗಿರುವ ಕೀರ್ತಿಕುಮಾರ್ ಮತ್ತು ತಂಡ ಪ್ರಸ್ತುತಪಡಿಸಲಿದ್ದಾರೆ. ಪರಿಸರ ರಕ್ಷಣೆ, ಶುದ್ಧ ವಾತಾವರಣದ ಮಹತ್ವವನ್ನು ಎಲ್ಲ ಮಕ್ಕಳೂ ಹಾಗೂ ಕುಟುಂಬ ವರ್ಗದವರೂ ಅರಿಯಬೇಕಾದ ಉತ್ತಮ ಪಾಠವನ್ನು ಅರುಹುವ ನೀತಿ ಸಂದೇಶ ಇದರಲ್ಲಿ ಅಡಗಿದೆ.

ನಂತರ- ಉತ್ತಮ ಪುರುಷನರ್ತಕರಾಗಿ ಗಮನ ಸೆಳೆದಿರುವ ನೃತ್ಯಕಲಾವಿದ ಶ್ರೀ ಸೂರ್ಯ ಎನ್ ರಾವ್ ಅವರು ಪರಿಕಲ್ಪಿಸಿ ಸಂಯೋಜಿಸಿರುವ ವಿಶಿಷ್ಟ ರಾವಣ ವ್ಯಕ್ತಿತ್ವದ ಬಗ್ಗೆ ನೂತನ ಆಯಾಮವನ್ನು ತೆರೆದಿಡುವ ಕುತೂಹಲ ಭರಿತವಾದ ಅಂಶಗಳ ಸುತ ಪರಿಭ್ರಮಿಸುವ 'ರಾವಣ' ಏಕವ್ಯಕ್ತಿ ನೃತ್ಯರೂಪಕವನ್ನು ಅನಾವರಣಗೊಳಿಸಲಿದ್ದಾರೆ. ಜನಜನಿತವಾಗಿ ಲೋಕ ಭಾವಿಸಿರುವಂತೆ ಅವನು ದುಷ್ಟ, ಖಳನಾಯಕನಲ್ಲ. ಬದಲಾಗಿ ಅವನಂಥ ಮಹಾ ಶಿವಭಕ್ತನಿಲ್ಲ. ಅಪರಿಮಿತ ಪೌರುಷವನ್ನುಳ್ಳ ಮೇಧಾವಿ, ಮಹಾನ್ ವೈಣಿಕ- ವಿದ್ವಾಂಸ, ತ್ರಿಕಾಲ ಜ್ಞಾನಿಯಾದ ರಾವಣನ ಶಕ್ತಿ- ಸಾಮರ್ಥ್ಯ- ಔದಾರ್ಯದ ವಿವಿಧ ಮುಖಗಳನ್ನು ಪರಿಚಯಿಸುವ ವಿಶಿಷ್ಟ ಪ್ರಯತ್ನ ಇದಾಗಿದೆ.

ಕಣ್ಮನ ರಂಜಿಸುವ ಕಾರ್ಯಕ್ರಮದ ಭಾಗವಾಗಿ ಇದರೊಡನೆ ಮನಸ್ಸನ್ನು ಅರಳಿಸುವ ಸುಮನೋಹರ ಭರತನಾಟ್ಯ ರಂಜನೆಯೂ ಇದೆ. ಈಗಾಗಲೇ ಉತ್ತಮ ಭರತನಾಟ್ಯ ಕಲಾವಿದೆಯರಾಗಿ ಗುರುತಿಸಿಕೊಂಡಿರುವ ಶ್ರೀಮತಿ ಜಯಶೀಲ ವಿನೋದ್ ಮತ್ತು ರವಳೀ ನಾಗೇಶ್ವರ ಅವರು ಹಲವಾರು ಮನಸೆಳೆವ ಕೃತಿಗಳನ್ನು ಸೊಗಸಾಗಿ ಅಭಿನಯಿಸಿ, ಸುಮನೋಹರವಾಗಿ ನರ್ತಿಸಲಿದ್ದಾರೆ. ಜನಮಾನಸವನ್ನು ಆಕರ್ಷಿಸುವ ಈ ಕಾರ್ಯಕ್ರಮಗಳ ಆಯೋಜಕರು ಡಾ. ವೀಣಾ ಮೂರ್ತಿ ವಿಜಯ್, ಇದರ ಹಿನ್ನಲೆಯಲ್ಲಿ ಅವರ ಅಪಾರ ಪರಿಶ್ರಮವನ್ನು ಗುರುತಿಸಬಹುದು.

ಕಾಲಕಾಲಕ್ಕೆ ನಗರದ ಕಲಾರಸಿಕರಿಗೆ ನೃತ್ಯಧಾರೆಯ ಸವಿಯನ್ನು ಬದ್ಧತೆಯಿಂದ ಉಣಬಡಿಸುತ್ತಿರುವುದು ಅವರ ಕಲಾ ಪ್ರೀತಿಯ ದ್ಯೋತಕ. ಮನ ತಣಿಸುವ ಈ ಸುಂದರ ಕಾರ್ಯಕ್ರಮಗಳನ್ನು ಕಣ್ತುಂಬಿಕೊಳ್ಳಲು ಕಲಾರಸಿಕರೆಲ್ಲರಿಗೂ ಆದರದ ಸುಸ್ವಾಗತ.

# ಜಗತ್ತಿನ ಪ್ರತಿಯೊಂದು ದಾಖಲೆಯೂ ಬಾಬಾಸಾಹೇಬರ ಹೆಸರಿನಲ್ಲಿದೆ



ನಾ ಕಂಡಂತೆ

ವಿಶ್ವಾಸ್.ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

...ಮುಂದುವರೆದ ಭಾಗ

**ಬಾಬಾಸಾಹೇಬ್ ಅಂಬೇಡ್ಕರ್ ಸ್ಥಾಪಿಸಿದ ಸಾಮಾಜಿಕ ಸಂಘಟನೆ**

1.ಬಹಿಷ್ಕೃತ ಹಿತ್ಕಾರಿಣಿ ಸಭಾ - 20 ಜುಲೈ 1924
2. ಸಮತಾ ಸೈನಿಕ್ ದಳ - 3 ಮಾರ್ಚ್ 1927

**ರಾಜಕೀಯ ಸಂಘಟನೆ**

1. ಸ್ವತಂತ್ರ ಮಜ್ದೂರ್ ಪಾರ್ಟಿ - 16 ಆಗಸ್ಟ್ 1936
2. ಪರಿಶಿಷ್ಟ ಜಾತಿ ಒಕ್ಕೂಟ - 19 ಜುಲೈ 1942
3. ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ - 3 ಅಕ್ಟೋಬರ್ 1957

**ಧಾರ್ಮಿಕ ಸಂಘಟನೆ**

1. ಭಾರತೀಯ ಬೌದ್ಧ ಮಹಾಸಭಾ - 4 ಮೇ 1955

**ಶೈಕ್ಷಣಿಕ ಸಂಸ್ಥೆ**

1.ಡಿಪ್ರೆಸ್ಡ್ ಕ್ಲಾಸ್ ಎಜುಕೇಶನ್ ಸೊಸೈಟಿ- 14 ಜೂನ್ 1928
2. ಪೀಪಲ್ಸ್ ಎಜುಕೇಶನ್ ಸೊಸೈಟಿ - 8 ಜುಲೈ 1945
3. ಸಿದ್ದಾರ್ಥ ಕಾಲೇಜು, ಮುಂಬೈ - 20 ಜೂನ್ 1946
4. ಮಿಲಿಂದ್ ಕಾಲೇಜು, ಔರಂಗಾಬಾದ್ - 1 ಜೂನ್ 1950

**ಬಾಬಾ ಸಾಹೇಬರಿಂದ ಪ್ರಕಟವಾದ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳು**

1. ಮೂಕ ನಾಯಕ್ - 31 ಜನವರಿ 1920
2. ಬಹಿಷ್ಕೃತ ಭಾರತ - 3 ಏಪ್ರಿಲ್ 1927
3.ಸಮತಾ- 29 ಜೂನ್ 1928
4 ಜನತಾ - 24 ನವೆಂಬರ್ 1930
5.ಪ್ರಬುದ್ಧ ಭಾರತ- 4 ಫೆಬ್ರವರಿ 1956


ಬಾಬಾಸಾಹೇಬ್ ಅಂಬೇಡ್ಕರ್ ತಮ್ಮ ಜೀವನದಲ್ಲಿ ವಿವಿಧ ವಿಷಯಗಳ ಕುರಿತು 527 ಕ್ಕೂ ಹೆಚ್ಚು ಭಾಷಣಗಳನ್ನು ನೀಡಿದ್ದಾರೆ.

**ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ಸಂದ ಸನ್ಮಾನಗಳು.**

1.ಭಾರತ ರತ್ನ
2.ವಿಶ್ವದ ಶ್ರೇಷ್ಠ ವ್ಯಕ್ತಿ (ಕೊಲಂಬಿಯಾ ವಿಶ್ವವಿದ್ಯಾಲಯ)
3 ಯೂನಿವರ್ಸ್ ಮೇಕರ್ (ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ)
4. ದಿ ಗ್ರೇಟೆಸ್ಟ್ ಇಂಡಿಯನ್

**ವೈಯಕ್ತಿಕ ಲೈಬ್ರರಿ ಪುಸ್ತಕಗಳು (ಅವರು ಹೊಂದಿದ್ದರು)**

1. ಇಂಗ್ಲಿಷ್ ಸಾಹಿತ್ಯ - 1300 ಪುಸ್ತಕಗಳು
2. ರಾಜಕೀಯ - 3,000 ಪುಸ್ತಕಗಳು
3. ಯುದ್ಧಶಾಸ್ತ್ರ- 300 ಪುಸ್ತಕಗಳು
4. ಅರ್ಥಶಾಸ್ತ್ರ - 1100 ಪುಸ್ತಕಗಳು
5. ಇತಿಹಾಸ - 2,600 ಪುಸ್ತಕಗಳು
6. ಧರ್ಮ- 2000 ಪುಸ್ತಕಗಳು
7. ಕಾನೂನು - 5,000 ಪುಸ್ತಕಗಳು
8) ಸಂಸ್ಕೃತ- 200 ಪುಸ್ತಕಗಳು
9. ಮರಾಠಿ- 800 ಪುಸ್ತಕಗಳು



10. ಹಿಂದಿ- 500 ಪುಸ್ತಕಗಳು
11. ತತ್ವಶಾಸ್ತ್ರ - 600 ಪುಸ್ತಕಗಳು
12. ವರದಿ- 1,000
13.ಉಲ್ಲೇಖ ಪುಸ್ತಕಗಳು - 400 ಪುಸ್ತಕಗಳು
14.ಪತ್ರಗಳು ಮತ್ತು ಭಾಷಣಗಳು- 600
15. ಜೀವನಚರಿತ್ರೆ (ಜೀವನಚರಿತ್ರೆ) - 1200
16. ಎನ್‌ಸೈಕ್ಲೋಪೀಡಿಯಾ ಆಫ್ ಬ್ರಿಟಾನಿಕಾ - ಸಂಪುಟಗಳು 1 ರಿಂದ 29
17. ಎನ್ಸೈಕ್ಲೋಪೀಡಿಯಾ ಆಫ್ ಸೋಶಿಯಲ್ ಸೈನ್ಸ್ - ಸಂಪುಟಗಳು 1 ರಿಂದ 15
18. ಕ್ಯಾಥೋಲಿಕ್ ಎನ್ಸೈಕ್ಲೋಪೀಡಿಯಾ - ಸಂಪುಟಗಳು 1 ರಿಂದ 12
19. ಎನ್ಸೈಕ್ಲೋಪೀಡಿಯಾ ಆಫ್ ಎಜುಕೇಶನ್
20. ಇತಿಹಾಸಕಾರರ ಪ್ರಪಂಚದ ಇತಿಹಾಸ - ಸಂಪುಟಗಳು 1 ರಿಂದ 25
21. ದೆಹಲಿಯಲ್ಲಿ ಇರಿಸಲಾಗಿರುವ ಪುಸ್ತಕಗಳು - ಬುದ್ಧ ಧಮ್ಮ, ಪಾಲಿ ಸಾಹಿತ್ಯ, ಮರಾಠಿ ಸಾಹಿತ್ಯ - 2000 ಪುಸ್ತಕಗಳು
22. ಉಳಿದ ವಿಷಯಗಳ ಕುರಿತು 2305 ಪುಸ್ತಕಗಳು

ಅದಕ್ಕಾಗಿಯೇ ಬ್ರಿಟಿಷರು ಅವರನ್ನು ಚಲಿಸುವ ಗ್ರಂಥಾಲಯ ಎಂದು ಕರೆಯುತ್ತಿದ್ದರು.

ಒಬ್ಬ ಮನುಷ್ಯನ ಜೀವಿತ ಕಾಲದಲ್ಲಿ ಇಷ್ಟೊಂದು ಸಾಧನೆ ಮಾಡಲು ಸಾಧ್ಯವೇ. ಅದಕ್ಕೆ ಜಗತ್ತು ಅವರನ್ನು "Symbol of knowledge " ಎಂದು ಅವರನ್ನು ಗೌರವಿಸುತ್ತದೆ.

**ಜೈ ಭೀಮ್**

**ಗರಡಿ ಮನೆಯ ಕೆಮ್ಮಣ್ಣಿನ ಅಂಗಳವೆಂದರೆ ಅದು ಬರಿ ಧೂಳಿನ ರಾಶಿಯಲ್ಲ; ಅದು ಪೈಲ್ವಾನರ ಪಾಲಿನ ಶಕ್ತಿಯ ಅಕ್ಷಯಪಾತ್ರೆ ಮತ್ತು ಸಂಸ್ಕಾರದ ಪಾಠಶಾಲೆ. ಆಧುನಿಕ ನಾಗರಿಕತೆಯು ಪಾದರಕ್ಷೆಗಳ ಕೃತಕ ಆವರಣದಲ್ಲಿ ಭೂಮಿಯಿಂದ ದೂರ ಸರಿಯುತ್ತಿರುವ ಈ ಕಾಲಘಟ್ಟದಲ್ಲಿ, ಜಟ್ಟಿಗಳು ಮಾತ್ರ ಬರಿಗಾಲಿನ ನಡಿಗೆಯ ಮೂಲಕವೇ ತಮ್ಮ ಶೌರ್ಯದ ಅಡಿಪಾಯವನ್ನು ಭದ್ರಪಡಿಸಿಕೊಳ್ಳುತ್ತಿದ್ದಾರೆ. ಈ ಬರಿಗಾಲಿನ ಪಯಣ ಕೇವಲ ಒಂದು ಪ್ರಾಚೀನ ಪದ್ಧತಿಯಲ್ಲ, ಬದಲಿಗೆ ಮಣ್ಣಿನ ಶಕ್ತಿಯೊಂದಿಗೆ ಬೆಸೆಯುವ ಅದ್ಭುತ ಜೈವಿಕ ವಿಜ್ಞಾನ.**

# ಪೈಲ್ವಾನರ ಬರಿಗಾಲಿನ ನಡಿಗೆಯ ಜೈವಿಕ ರಹಸ್ಯ




ಅಂತರಂಗದ ಮಾತು

ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

ವಿಜ್ಞಾನದ ತರ್ಕದಂತೆ ಈ ಭೂಮಿಯು ಅನಂತ ಋಣವಿದ್ಯುತ್ ಕಣಗಳ (ಎಲೆಕ್ಟ್ರಾನ್‌ಗಳ) ಆಗರ. ಮಲ್ಲರು ದಿನದ ಬಹುಪಾಲು ಸಮಯವನ್ನು ಬರಿಗಾಲಿನಿಂದ ಮಣ್ಣಿನ ಮೇಲೆ ಕಳೆದಾಗ, ಅವರ ದೇಹದ ಆಂತರಿಕ ವಿದ್ಯುತ್ ವ್ಯೂಹವು ಭೂಮಿಯೊಂದಿಗೆ ನೇರವಾದ ಭೂಸಂಪರ್ಕವನ್ನು ಸಾಧಿಸುತ್ತದೆ.

ತೀವ್ರತರವಾದ ಕಸರತ್ತಿನ ಸಂದರ್ಭದಲ್ಲಿ ಮಲ್ಲರ ಸ್ನಾಯುಗಳಲ್ಲಿ ಉಂಟಾಗುವ ಉರಿಯೂತ ಮತ್ತು ಆಕ್ಸಿಡೀಕರಣದ ಒತ್ತಡವನ್ನು ಭೂಮಿಯಿಂದ ಹರಿಯುವ ಈ ಋಣವಿದ್ಯುತ್ ಕಣಗಳು ತಟಸ್ಥಗೊಳಿಸುತ್ತವೆ. ಇದು ಸ್ನಾಯುಗಳ ತ್ವರಿತ ಚೇತರಿಕೆಗೆ ಮಾತ್ರವಲ್ಲದೆ, ರಕ್ತದ ಸಾಂದ್ರತೆಯನ್ನು ಹದವಾಗಿರಿಸಿ, ಮಲ್ಲರಿಗೆ ದಿವ್ಯ ಚೈತನ್ಯವನ್ನು ನೀಡುತ್ತದೆ.




ಪಾದಗಳು ಶರೀರದ ತಳಹದಿ. ಪಾದರಕ್ಷೆಗಳ ಅತಿಯಾದ ಬಳಕೆಯಿಂದ ಪಾದದ ಸೂಕ್ಷ್ಮ ಸ್ನಾಯುಗಳು ಜಡವಾಗುತ್ತವೆ.

ಆದರೆ, ಅಖಾಡದಲ್ಲಿ ಬರಿಗಾಲಿನಿಂದ ವ್ಯಾಯಾಮ ಮಾಡುವುದರಿಂದ ಪಾದದ ಕಮಾನುಗಳು ಮತ್ತು ಅಸ್ಥಿರಜ್ಜುಗಳು ವಜ್ರದಂತೆ ಕಠಿಣವಾಗುತ್ತವೆ. ಇಲ್ಲಿ ಚಲನಾ ಪ್ರಜ್ಞೆ ಎನ್ನುವ ನರಮಂಡಲದ ಪ್ರಕ್ರಿಯೆ ಕೆಲಸ ಮಾಡುತ್ತದೆ. ಮಣ್ಣಿನ ಮೇಲಿನ ಏರಿಳಿತಗಳು ಮತ್ತು ಉಷ್ಣತೆಯ ಮಾಹಿತಿಯನ್ನು ಪಾದದ ನರಗಳು ಕ್ಷಣಾರ್ಧದಲ್ಲಿ ಮಿದುಳಿಗೆ ತಲುಪಿಸುತ್ತವೆ. ಈ ಜ್ಞಾನವು ಕುಸ್ತಿಯ ಅಖಾಡದಲ್ಲಿ ಎದುರಾಳಿಯ ಪಟ್ಟುಗಳಿಗೆ ತಕ್ಕಂತೆ ದೇಹದ ಭಾರವನ್ನು ಸಮತೋಲನಗೊಳಿಸಲು ಮತ್ತು ನೆಲದ ಮೇಲೆ ಭದ್ರವಾದ ಹಿಡಿತ ಸಾಧಿಸಲು ನೆರವಾಗುತ್ತದೆ.

ಯೋಗ ಮತ್ತು ಆಯುರ್ವೇದ ಶಾಸ್ತ್ರಗಳ ಪ್ರಕಾರ, ಪಾದತಲದಲ್ಲಿ ದೇಹದ ಪ್ರತಿಯೊಂದು ಪ್ರಮುಖ ಅಂಗಾಂಗಗಳಿಗೆ ಸಂಬಂಧಿಸಿದ ಮರ್ಮ ಬಿಂದುಗಳು ಇವೆ. ಮಲ್ಲರು ಕೆಮ್ಮಣ್ಣಿನ ಮೇಲೆ ನಡೆಯುವಾಗ ಆ ಮಣ್ಣಿನ ಹದವಾದ ಒತ್ತಡವು ಈ ಪ್ರತಿಫಲಿತ ಬಿಂದುಗಳ ಮೇಲೆ ನೈಸರ್ಗಿಕವಾಗಿ ಬೀಳುತ್ತದೆ. ಇದೊಂದು ಅದ್ಭುತವಾದ ಬಿಂದು ಒತ್ತಡ ಚಿಕಿತ್ಸೆ. ಈ ನೈಸರ್ಗಿಕ ಮರ್ಧನದಿಂದ ರಕ್ತಪರಿಚಲನೆ ಸುಗಮಗೊಂಡು, ಜೀರ್ಣಶಕ್ತಿ ವೃದ್ಧಿಸುತ್ತದೆ. ಮಲ್ಲರ ಮುಖದಲ್ಲಿ ಕಾಣುವ ಅಪ್ರತಿಮ ತೇಜಸ್ಸಿಗೆ ಈ ನಿರಂತರ ಪಾದಾಭ್ಯಂಗವೇ ಕಾರಣ.

ಗರಡಿ ಮನೆಯ ಕಸರತ್ತಿನ ವೇಳೆ ಶರೀರವು ಗರಿಷ್ಠ ಉಷ್ಣತೆಯನ್ನು ಬಿಡುಗಡೆ ಮಾಡುತ್ತದೆ. ಬರಿಗಾಲಿನ ನಡಿಗೆಯು ಈ ಆಂತರಿಕ ಉಷ್ಣತೆಯನ್ನು ನಿಯಂತ್ರಿಸಲು ಪೂರಕವಾಗಿದೆ.

ಕೆಮ್ಮಣ್ಣು ಸ್ವಭಾವತಃ ತಂಪು ಮತ್ತು ಅದರಲ್ಲಿ ಗಂಧಕದಂತಹ ಅನೇಕ ಔಷಧೀಯ ಖನಿಜಾಂಶಗಳಿವೆ. ಮಲ್ಲರು ಮಣ್ಣಿನಲ್ಲಿ ಹೊರಳಾಡುವಾಗ ಈ ಮಣ್ಣು ಶರೀರದ ಅಧಿಕ ಉಷ್ಣತೆಯನ್ನು ಹೀರಿಕೊಳ್ಳುತ್ತದೆ. ಅಲ್ಲದೆ, ಮಣ್ಣಿನಲ್ಲಾಗುವ ಸೂಕ್ಷ್ಮ ಘರ್ಷಣೆಯು ಪಾದದ ಸತ್ತ ಜೀವಕೋಶಗಳನ್ನು ನಿವಾರಿಸಿ ಚರ್ಮವನ್ನು ನೈಸರ್ಗಿಕವಾಗಿ ಶುದ್ಧೀಕರಿಸುತ್ತದೆ. ಇದು ಚರ್ಮಕ್ಕೆ ಬಿಗಿತ ಮತ್ತು ಸಹಿಷ್ಣುತೆಯನ್ನು ನೀಡುತ್ತದೆ.

ನಡಿಗೆ ಕೇವಲ ದೈಹಿಕ ವ್ಯಾಯಾಮವಲ್ಲ, ಅದು ಅಹಂಕಾರದ ವಿಸರ್ಜನೆಯ ಸಂಕೇತವೂ ಹೌದು. ಭೂಮಿಯನ್ನು ತಾಯಿಯೆಂದು ಪೂಜಿಸುವ ಮಲ್ಲನು ಪಾದರಕ್ಷೆಗಳನ್ನು ಹೊರಗಿಟ್ಟು ಅಖಾಡ ಪ್ರವೇಶಿಸುವಾಗ ತನ್ನ ಅಹಮಿಕೆಯನ್ನು ತ್ಯಜಿಸುತ್ತಾನೆ.

ಪ್ರತಿ ದಿನದ ಕಸರತ್ತಿನ ನಂತರ ಪಾದಗಳನ್ನು ಉಗುರುಬೆಚ್ಚಗಿನ ನೀರಿನಿಂದ ತೊಳೆದು,ಶುದ್ಧ ಬೇವಿನ ಎಣ್ಣೆಯಿಂದ ಮಾಲೀಸು ಮಾಡುವುದು ಮಲ್ಲರ ಶಿಸ್ತಿನ ಭಾಗ. ಈ ಆರೈಕೆಯಿಂದಾಗಿ ಮಲ್ಲರ ಪಾದಗಳು ಒಂದೆಡೆ ಅತಿ ಗಟ್ಟಿಯಾಗಿ ಬಂಡೆಯಂತೆ ದೃಢವಾಗಿದ್ದರೂ, ಮತ್ತೊಂದೆಡೆ ಹತ್ತಿಯಂತೆ ಮೃದುತ್ವವನ್ನು ಹೊಂದಿರುತ್ತವೆ.

ವೈಜ್ಞಾನಿಕ ನವೀನತೆಗಳ ನಡುವೆಯೂ ಮಲ್ಲರ ಬರಿಗಾಲಿನ ಈ ಪಯಣವು ವಿಜ್ಞಾನ ಮತ್ತು ಸಂಪ್ರದಾಯದ ಅನನ್ಯ ಸಂಗಮ. ಭೂಮಿಯೊಂದಿಗಿನ ಈ ಸತತ ಸಂಪರ್ಕವೇ ಅವರ ದೇಹವನ್ನು ವಜ್ರದಂತೆ ಕಠಿಣವಾಗಿಸುತ್ತದೆ ಮತ್ತು ಮನಸ್ಸನ್ನು ವಿಶಾಲವಾಗಿಸುತ್ತದೆ. ಧರಣಿಯ ಸ್ಪರ್ಶವೇ ಜೀವನದ ನೈಜ ಶಕ್ತಿ ಎಂಬ ಸತ್ಯಕ್ಕೆ ಅಖಾಡದ ಈ ಜೀವನಶೈಲಿಯೇ ಸಾಕ್ಷಿ.

# ಬೆಳಕಿನ ಪಥ

## ಬಾಬಾಸಾಹೇಬರ ಸ್ಮರಣೆ

ಕತ್ತಲೆ ಆವರಿಸಿದ ಹಾದಿಯಲಿ ಬೆಂಕಿಯುಂಡೆಯಾಗಿ ಬಂದವರು
ಅವಮಾನದ ಸುಳಿಯಲ್ಲೂ ಜ್ಞಾನದ ಶಿಖರವ ಏರಿದವರು
ಛಲವೊಂದಿದ್ದರೆ ಜಗವನ್ನೇ ಗೆಲ್ಲಬಹುದು ಎಂದು ತೋರಿದವರು
ನಮ್ಮ ಬದುಕಿನ ಸಂಕೋಲೆಗಳ ಅಳಿಸಿ ಸ್ವಾತಂತ್ರ್ಯ ನೀಡಿದವರು.

ಓದುವ ಹಂಬಲಕೆ ಅಂದು
ಜಾತಿಯ ಗೋಡೆ ಅಡ್ಡವಿತ್ತು
ಸಹನೆಯೇ ಅವರ ಅಸ್ತ್ರವಾಗಿ
ಗುರಿಯತ್ತ ಮನವಿತ್ತು
ಸಾಗರದಾಚೆ ಜ್ಞಾನವನ್ನರಸಿ
ದಣಿವರಿಯದೆ ಶ್ರಮಿಸಿದರು
ಸಂವಿಧಾನದ ಪವಿತ್ರ ಗ್ರಂಥವ
ಭಾರತಕ್ಕೆ ಧಾರೆ ಎರೆದರು.


ಕೇವಲ ಪದವಿಗಳಲ್ಲ ಅವರ ಸಾಧನೆಯ ಗುರುತು
ಮಾನವೀಯತೆಯೇ ಮಂತ್ರವೆಂದು ಸಾರಿದ ಮಹಾನ್ ಚೇತನ
ಹಕ್ಕುಗಳಿಗಾಗಿ ಹೋರಾಡಿ ತಂದರು ಸಮಾನತೆಯ ಸುಪ್ರಭಾತ
ಶೋಷಿತರ ದನಿಯಾಗಿ ಬೆಳಗಿದರು
ಬದುಕಿನ ಪ್ರತಿಯೊಂದು ನಂದಾದೀಪ.

ಇಂದಿನ ಜನಾಂಗವೇ, ಕೇಳಿ ಅವರ ಕ್ರಾಂತಿಯ ನಾದ
'ಶಿಕ್ಷಣ, ಸಂಘಟನೆ, ಹೋರಾಟ'ವೇ
ಜಯದ ಮೂಲಮಂತ್ರ
ಅಕ್ಷರವ ಅಪ್ಪಿ ಹಿಡಿಯಿರಿ, ಅರಿವಿನ ಹಾದಿಯಲಿ ನಡೆಯಿರಿ
ಸಮಾನ ಸಮಾಜದ ನಿರ್ಮಾಣಕ್ಕೆ ನೀವೆಲ್ಲರೂ ಕೈಜೋಡಿಸಿರಿ.

ಭೇದ-ಭಾವವ ತೊರೆದು ತಲೆ ಎತ್ತಿ
ಬಾಳುವ ಪ್ರೇರಣೆ ಇವರು
ಅವಕಾಶಗಳ ಬಾಗಿಲು ತೆರೆದ
ಜ್ಞಾನದ ಸೂರ್ಯ ಇವರು
ಅಂಬೇಡ್ಕರ್ ಎಂದರೆ ಬರಿ ಹೆಸರಲ್ಲ, ಅದೊಂದು ಶಕ್ತಿ
ನವ ಭಾರತದ ಹಾದಿಗೆ ಸದಾಕಾಲದ
ದಿವ್ಯ ಜ್ಯೋತಿ.

ರಚನೆ : ಶ್ರೀ ಬಿ ವಿ ಹಿರೇಮಠ
ಶಿಕ್ಷಕರು ಸಿಂದಗಿ





## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ** ಇಂದು ಧಾರ್ಮಿಕ ಮತ್ತು ಆಧ್ಯಾತ್ಮಿಕ ಆಸಕ್ತಿಗಳನ್ನು ಅನುಸರಿಸಲೂ ಒಂದು ಒಳ್ಳೆಯ ದಿನ. ನಿಮ್ಮ ಆಪ್ತರೊಂದಿಗೆ ಜಗಳವಾಗಬಹುದು ಮತ್ತು ವಿಷಯ ನ್ಯಾಯಾಲಯ ಕಚೇರಿಯ ವರೆಗೂ ಹೋಗಬಹುದು.

**ವೃಷಭ** ನಿಮ್ಮ ಪ್ರೀತಿ ಸಂಗಾತಿಯ ಒಂದು ಹೊಸ ಅದ್ಭುತ ಭಾಗವನ್ನು ನೀವಿಂದು ನೋಡಬಹುದು. ದಿನ ಉತ್ತಮವಾಗಿದೆ, ನಿಮಗಾಗಿ ಸಮಯವನ್ನು ತೆಗೆದುಕೊಳ್ಳಿ , ನಿಮ್ಮ ನ್ಯೂನತೆಗಳು, ಸಾಮರ್ಥ್ಯಗಳ ಬಗ್ಗೆ ಗಮನ ಹರಿಸಿ.

**ಮಿಥುನ** ಮನೆಯಲ್ಲಿ ಕೆಲಸ ಮಾಡುವಾಗ ವಿಶೇಷ ಎಚ್ಚರ ವಹಿಸಿ. ಮನೆ ಬಳಕೆಯ ವಸ್ತುಗಳ ಯಾವುದೇ ಅಸಡ್ಡೆಯ ಬಳಕೆ ನಿಮಗೆ ಸಮಸ್ಯೆ ಉಂಟುಮಾಡಬಹುದು. ಇಂದಿನ ದಿನ ಯಾರಿಗೂ ಸಾಲ ನೀಡಬೇಡಿ.

**ಕರ್ಕಾಟಕ** ನಿಮ್ಮ ಮಗುವಿನಂಥ ಸ್ವಭಾವ ಕಾಣಿಸಿಕೊಳ್ಳುತ್ತದೆ ಮತ್ತು ನೀವು ಒಂದು ಆಹ್ಲಾದಕಾರಿ ಮನಸ್ಥಿತಿಯಲ್ಲಿರುತ್ತೀರಿ. ಇಂದು ನಿಮ್ಮ ಆಪ್ತರೊಂದಿಗೆ ಜಗಳವಾಗಬಹುದು.

**ಸಿಂಹ** ನಿಮ್ಮ ಚೈತನ್ಯವನ್ನು ಹೆಚ್ಚಿಸಲು ನಿಮ್ಮ ಮನಸ್ಸಿನಲ್ಲಿ ಒಂದು ಪ್ರಕಾಶಮಾನವಾದ ಸುಂದರವಾದ ಮತ್ತು ಅದ್ಭುತವಾದ ಚಿತ್ರವನ್ನು ಕಲ್ಪಿಸಿಕೊಳ್ಳಿ. ಇಂದು ನಿಮಗೆ ಹಣದ ಲಾಭವಾಗುವ ಪೂರ್ತಿ ಸಾಧ್ಯತೆ ಇದೆ.

**ಕನ್ಯಾ** ಪ್ರವಾಸದ ಅವಕಾಶಗಳನ್ನು ಪರಿಶೋಧಿಸಬೇಕು. ನೀವು ಹಾಗೂ ನಿಮ್ಮ ಸಂಗಾತಿ ಸಣ್ಣ ವಿಷಯಗಳಿಗೆ ಜಗಳವಾಡಿದರೂ ಇದು ಕಾಲ ಕಳೆದಂತೆ ನಿಮ್ಮ ಮದುವೆಯನ್ನೇ ನಾಶಮಾಡಬಹುದು.

**ತುಲಾ** ನಿಮ್ಮನ್ನು ನೀವೇ ನೋಡಿಕೊಳ್ಳುವ ಬಯಕೆಗೆ ಇತರರ ಅಗತ್ಯಗಳು ಕಡಿವಾಣ ಹಾಕುತ್ತವೆ. ನಿಮ್ಮ ಭಾವನೆಗಳನ್ನು ತಡೆಹಿಡಿಯಬೇಡಿ , ವಿಶ್ರಾಂತಿ ಪಡೆಯುವ ಸಲುವಾಗಿ ನೀವು ಇಷ್ಟಪಡುವುದನ್ನೇನಾದರೂ ಮಾಡಿ.

**ವೃಶ್ಚಿಕ** ಇಂದು ಷೇರು ಮಾರುಕಟ್ಟೆಯಲ್ಲಿ ಹಣವನ್ನು ಹೂಡಿಕೆ ಮಾಡುವವರು ತಮ್ಮ ಹಣವನ್ನು ಕಳೆದುಕೊಳ್ಳಬಹುದು. ಸಮಯಕ್ಕೆ ನೀವು ಜಾಗರೂಕರಾಗಿದ್ದರೆ ಅದು ನಿಮಗೆ ಉತ್ತಮವಾಗಿರುತ್ತದೆ.

**ಧನಸ್ಸು** ನಿಮ್ಮ ಒತ್ತಡ ನಿವಾರಿಸಲು ಕುಟುಂಬದ ಸದಸ್ಯರ ಬೆಂಬಲ ಪಡೆಯಿರಿ. ಅವರ ಸಹಾಯವನ್ನು ಗೌರವದಿಂದ ಸ್ವೀಕರಿಸಿ. ನೀವು ಭಾವನೆಗಳು ಮತ್ತು ಒತ್ತಡಗಳನ್ನು ಒಳಗೆ ಅದುಮಿಡಬಾರದು.

**ಮಕರ** ದೇಹದ ನೋವಿನಿಂದ ಬಳಲುವ ಸಾಧ್ಯತೆ ಹೆಚ್ಚಿದೆ. ನಿಮ್ಮ ದೇಹದ ಮೇಲೆ ಹೆಚ್ಚು ಒತ್ತಡ ಹಾಕುವ ಯಾವುದೇ ದೈಹಿಕ ಪರಿಶ್ರಮವನ್ನು ತಪ್ಪಿಸಲು ಪ್ರಯತ್ನಿಸಿ. ಸಾಕಷ್ಟು ವಿಶ್ರಾಂತಿ ತೆಗೆದುಕೊಳ್ಳಿ.

**ಕುಂಭ** ವಿಧಿಯನ್ನು ಆಧರಿಸದಿರಿ ಮತ್ತು ನಿಮ್ಮ ಆರೋಗ್ಯ ಸುಧಾರಿಸಲು ಪ್ರಯತ್ನಿಸಿ ಏಕೆಂದರೆ ಅದೃಷ್ಟವು ಒಂದು ಸೋಮಾರಿ ದೇವತೆಯಾಗಿದ್ದು ಇದು ಎಂದಿಗೂ ತಾನಾಗಿಯೇ ನಿಮ್ಮ ಬಳಿ ಬರುವುದಿಲ್ಲ.

**ಮೀನ** ಇಂದು ನೀವು ಆ ಹಣವನ್ನು ಮರಳಿ ಪಡೆಯುವ ನಿರೀಕ್ಷೆಯಿದೆ ನಿಮ್ಮ ಸಂಗಾತಿಯ ಆರೋಗ್ಯ ಒತ್ತಡ ಮತ್ತು ಆತಂಕಕ್ಕೆ ಕಾರಣವಾಗಬಹುದು ಇತರರ ಹಸ್ತಕ್ಷೇಪ ವ್ಯಾಜ್ಯವುಂಟುಮಾಡುತ್ತದೆ.

### ಅಂಬೇಡ್ಕರ್ ಅವರ ಆದರ್ಶಗಳು ನಮ್ಮ ಜೀವನ, ಸಾಧನೆಗೆ ಪ್ರೇರಕ ಶಕ್ತಿ: ಜಿಲ್ಲಾಧಿಕಾರಿ

# ಡಾ. ಬಿ.ಆರ್.ಅಂಬೇಡ್ಕರ್ ಅವರ 135 ನೇ ಜಯಂತಿ

• ಉದಯವಾಹಿನಿ ಧಾರವಾಡ



ಉದಯವಾಹಿನಿ ಚಿತ್ರ

ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರು ಎಂತಹ ಕಠಿಣವಾದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಸಂಘಟನಾತ್ಮಕ ಸಂಕಷ್ಟಗಳನ್ನು ದಾಟಿ, ಜೀವನದಲ್ಲಿ ಜಯ ಸಾಧಿಸಿದರು ಎಂಬದನ್ನು ನಾವು ಗಮನಿಸಿದಾಗ, ಮನುಷ್ಯನ ಯಶಸ್ವಿಗೆ ಅವರ ಜೀವನ ಸಾಧನೆಗಳೇ ಪ್ರೇರಕ ಶಕ್ತಿಗಳಾಗುತ್ತವೆ ಎಂದು ಜಿಲ್ಲಾಧಿಕಾರಿ ಸ್ನೇಹಲ್.ಆರ್. ಅವರು ಹೇಳಿದರು.

ಅವರು ಧಾರವಾಡ ನಗರದ ಸನ್ಮತಿ ಮಾರ್ಗದ ಹತ್ತಿರದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಸಮಾಜ ಕಲ್ಯಾಣ ಇಲಾಖೆ ಹಾಗೂ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಸಹಯೋಗದಲ್ಲಿ, ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ.ಆರ್.ಅಂಬೇಡ್ಕರ್ ಅವರ 135 ನೇ ಜಯಂತಿ ಅಂಗವಾಗಿ ಆಯೋಜಿಸಿದ್ದ, ವಿಚಾರಗೋಷ್ಠಿಯ ಅಧ್ಯಕ್ಷತೆ ವಹಿಸಿ, ಮಾತನಾಡಿದರು. ಡಾ.ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನ ರಚನೆ ಮೂಲಕ ಮಕ್ಕಳಿಗೆ, ದೀನದಲಿತರಿಗೆ,ಹಿಂದುಳಿದವರಿಗೆ ಅದರಲ್ಲೂ ವಿಶೇಷವಾಗಿ ಹಿಂದು ಕೋಡ್ ಬಿಲ್ ಮೂಲಕ ಮಹಿಳೆಯರ ಸಶಕ್ತಿಕರಣ ಮತ್ತು ಸಬಲೀಕರಣಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ ಎಂದು ಅವರು ಅಭಿಪ್ರಾಯಪಟ್ಟರು.

**ಸಬಲೀಕರಣಕ್ಕೆ ಮಹತ್ವದ ಕೊಡುಗೆ**

ಅಂಬೇಡ್ಕರ್ ಅವರ ಆದರ್ಶಗಳನ್ನು ನಾವು ಅಳವಡಿಸಿಕೊಂಡಾಗ ಮಾತ್ರ ಸರ್ವರಲ್ಲಿ ಸಮಾನತೆ ಮತ್ತು ನ್ಯಾಯಯುತ ಸಮಾಜ ನಿರ್ಮಾಣ ಕಾಣಲು ಸಾಧ್ಯ. ಅವರ ಚಿಂತನೆಗಳು ಯುವಜನತೆಗೆ ದಾರಿದೀಪವಾಗಿದ್ದು, ಪ್ರತಿಯೊಬ್ಬರೂ ಡಾ.ಅಂಬೇಡ್ಕರ್ ಅವರ ಜೀವನ ಚಿಂತನೆ, ಬೋಧನೆಗಳನ್ನು ಅನುಸರಿಸುವ ಅಗತ್ಯವಿದೆ ಎಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್. ಅವರು ತಿಳಿಸಿದರು. ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಮಾನವಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಸದಾನಂದ ಬಿ.ಸುಗಂಧಿ ಅವರು ವಿಚಾರಗೋಷ್ಠಿಯಲ್ಲಿ ಹಿಂದೂ ಕೋಡ್ ಬಿಲ್ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಅವರ ವಿಚಾರಧಾರೆಗಳ ಕುರಿತು ವಿಶೇಷ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ರಾಮಣ್ಣ ಗಡ್ಡರ ಅವರು ಬುದ್ಧ ಪ್ರಾರ್ಥನೆಯನ್ನು ಪಠಣ ಮಾಡಿದರು. ವೇದಿಕೆಯಲ್ಲಿ ಎಡಿಸಿ ಗೀತಾ ಸಿ.ಡಿ., ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಜಗದೀಶ ಹೆಬ್ಬಳ್ಳಿ ಅವರು ಉಪಸ್ಥಿತರಿದ್ದರು. ಸಮಾಜ ಕಲ್ಯಾಣ ಇಲಾಖೆಯ ಎಂ.ಬಿ. ಸನ್ನೇರಿ ಅವರು ಸ್ವಾಗತಿಸಿ, ವಂದಿಸಿದರು ಹಾಗೂ ಪ್ರವೀಣ ಮಸಕಿ ಅವರು ಕಾರ್ಯಕ್ರಮ ನಿರೂಪಿಸಿದರು. ವಿಚಾರಗೋಷ್ಠಿಯಲ್ಲಿ ಎಂ.ಅರವಿಂದ, ಲಕ್ಷ್ಮಣ ಬಕ್ಕಾಯಿ, ಅಶೋಕ ದೊಡಮನಿ, ವೆಂಕಟೇಶ ಸಗಬಲಾ ಸೇರಿದಂತೆ ಸಮಾಜದ ವಿವಿಧ ಪ್ರಮುಖರು, ಜಿಲ್ಲಾ ಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸದಸ್ಯರು, ಸಿಬ್ಬಂದಿಗಳು, ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು ಭಾಗವಹಿಸಿದ್ದರು.

> ಭಾರತದ ಸಂವಿಧಾನದ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಬಗ್ಗೆ ಎಷ್ಟು ಹೇಳಿದರೂ ಕಡಿಮೆ. ಭಾರತ ದೇಶವು ಇಂದು ಅವರು ರೂಪಿಸಿದ ಸಂವಿಧಾನದ ಮಾರ್ಗದರ್ಶನದಲ್ಲಿಯೇ ನಡೆಯುತ್ತಿದೆ. ಭಾರತೀಯ ಸಂವಿಧಾನದಲ್ಲಿ ಮಹಿಳಾ ಸಮಾನತೆ, ಆಸ್ತಿ ಸಮಾನ ಹಂಚಿಕೆ, ಉಚಿತ ಶಿಕ್ಷಣ, ಆರೋಗ್ಯ ಸೇರಿದಂತೆ ಅನೇಕ ಮಾನವ ಅಭಿವೃದ್ಧಿಯ ಅಂಶಗಳನ್ನು ಅವರು ಅಳವಡಿಸಿದ್ದಾರೆ. ಎಲ್ಲರೂ ಸಂವಿಧಾನದ ಬಗ್ಗೆ ಸರಿಯಾದ ಅಧ್ಯಯನ ಮಾಡುವುದು ಅತಿ ಅವಶ್ಯಕ ಎಂದು ಅವರು ಹೇಳಿದರು. -ಭುವನೇಶ ಪಾಟೀಲ
> ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

**ಶಿಕ್ಷಣವನ್ನು ಪಡೆದು ಸಮಾಜದಲ್ಲಿ ಜೀವನ ನಡೆಸಬೇಕು**

ಸಮಾಜದ ಎಲ್ಲಾ ವರ್ಗದ ಜನರಿಗೆ ಮೂಲಭೂತ ಹಕ್ಕುಗಳನ್ನು ನೀಡಿ, ಸಂವಿಧಾನವನ್ನು ರೂಪಿಸಿದ ಮಹಾನ್ ನಾಯಕ ಅಂಬೇಡ್ಕರ್. ಪ್ರತಿಯೊಬ್ಬರೂ ತಮ್ಮ ಹಕ್ಕುಗಳ ಬಗ್ಗೆ ತಿಳಿದುಕೊಳ್ಳಬೇಕು. ಮತ್ತು ಶಿಕ್ಷಣವೇ ವ್ಯಕ್ತಿಯ ಬೆಳವಣಿಗೆಯ ಆಧಾರವಾಗಿದ್ದು, ಪ್ರತಿಯೊಬ್ಬರೂ ಸರಿಯಾದ ಶಿಕ್ಷಣವನ್ನು ಪಡೆದು ಸಮಾಜದಲ್ಲಿ ಜೀವನ ನಡೆಸಬೇಕು ಎಂದು ಅವರು ತಿಳಿಸಿದರು. ಮಹಿಳೆಯರು ಮತ್ತು ಹಿಂದುಳಿದ ವರ್ಗಗಳಿಗೆ ಸಮಾನ ಹಕ್ಕುಗಳನ್ನು ನೀಡುವ ಉದ್ದೇಶದಿಂದ ರೂಪಿಸಲಾದ ಹಿಂದೂ ಕೋಡ್ ಬಿಲ್ ಬಗ್ಗೆ ಸಹ ಜನರು ತಿಳಿದುಕೊಳ್ಳುವುದು ಅಗತ್ಯವಾಗಿದೆ ಎಂದು ಅವರು ಹೇಳಿದರು.

## ಅಂಬೇಡ್ಕರ್ ಸಂವಿಧಾನವೇ ಭಾರತ ವಿಶ್ವಗುರುವಾಗಲು ಭದ್ರ ಬುನಾದಿ: ಮಾಜಿ ಶಾಸಕ ಎ.ಎಸ್. ಪಾಟೀಲ ನಡಹಳ್ಳಿ

• ಉದಯವಾಹಿನಿ ಮುದ್ದೇಬಿಹಾಳ



ಉದಯವಾಹಿನಿ ಚಿತ್ರ

ಭಾರತ ದೇಶವು ವಿಶ್ವಗುರುವಾಗಲು ಭದ್ರವಾದ ಬುನಾದಿ ಹಾಕಿಕೊಟ್ಟವರು ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್, ಎಂದು ಮಾಜಿ ಶಾಸಕ ಹಾಗೂ ಬಿಜೆಪಿ ರೈತ ಮೋರ್ಚಾದ ರಾಜ್ಯಾಧ್ಯಕ್ಷ ಎ.ಎಸ್. ಪಾಟೀಲ ನಡಹಳ್ಳಿ ಹೇಳಿದರು. ಮಂಗಳವಾರ ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಹಮ್ಮಿಕೊಂಡಿದ್ದ ಡಾ. ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಅಂಬೇಡ್ಕರ್ ಪ್ರತಿಮೆಗೆ ಹೂಮಾಲೆ ಅರ್ಪಿಸಿ ಅವರು ಮಾತನಾಡಿದರು.

**ವಿಶ್ವದ ಶ್ರೇಷ್ಠ ಸಂವಿಧಾನ :** ಅಂಬೇಡ್ಕರ್ ಅವರು ರಚಿಸಿದ ಸಂವಿಧಾನವು ಇಡೀ ವಿಶ್ವದಲ್ಲೇ ಅತ್ಯಂತ ಶ್ರೇಷ್ಠವಾದುದು. ಇಂದು ನಾವೆಲ್ಲರೂ ಸಮಾನತೆಯಿಂದ ಬಾಳಲು ಅವರು ನೀಡಿದ ಸಂವಿಧಾನವೇ ಪ್ರಮುಖ ಕಾರಣವಾಗಿದೆ. ಪ್ರತಿಯೊಬ್ಬರೂ ಸಂವಿಧಾನದ ಅಡಿಯಲ್ಲಿ ತಮ್ಮ ಕರ್ತವ್ಯಗಳನ್ನು ಕಟ್ಟುನಿಟ್ಟಾಗಿ ನಿರ್ವಹಿಸುತ್ತಿರುವುದು ದೇಶದ ಹೆಮ್ಮೆಯ ವಿಷಯ, ಎಂದು ಅವರು ಬಣ್ಣಿಸಿದರು. ಇದೇ ಸಂದರ್ಭದಲ್ಲಿ ಮತಕ್ಷೇತ್ರದಾದ್ಯಂತ ಅಂಬೇಡ್ಕರ್ ಜಯಂತಿಯನ್ನು ಅದ್ದೂರಿಯಾಗಿ ಆಚರಿಸುತ್ತಿರುವ ಎಲ್ಲಾ ನಾಗರಿಕರಿಗೆ ಅವರು ಶುಭಾಶಯ ಕೋರಿದರು.

ಕಾರ್ಯಕ್ರಮದಲ್ಲಿ ಸಮಾಜ ಸೇವಕಿ ಶ್ರೀಮತಿ ಮಹಾದೇವಿ ಪಾಟೀಲ ನಡಹಳ್ಳಿ, ಬಿಜೆಪಿ ಮಂಡಲ ಅಧ್ಯಕ್ಷ ಜಗದೀಶ ಪಂಪಣ್ಣನವರ, ಪ್ರಮುಖರಾದ ರಾಜು ಬಳ್ಳೊಳ್ಳಿ, ಹಣಮಂತ ನಾಯಕಮಕ್ಕಳ, ಸಂಜಯ ಬಾಗೇವಾಡಿ, ನಾಗೇಶ ಕವಡಿಮಟ್ಟಿ, ಬಸವರಾಜ ಪೂಜಾರಿ, ಸಂಗನಗೌಡ ಪಾಟೀಲ, ಶೇಖರ ಢವಳಗಿ, ವಿರೇಶ ಢವಳಗಿ, ಸಿದ್ದು ಬಿದರಕುಂದಿ, ರೇವಣಪ್ಪ ಹರಿಜನ ಸೇರಿದಂತೆ ಬಿಜೆಪಿ ಕಾರ್ಯಕರ್ತರು ಹಾಗೂ ಮುಖಂಡರು ಉಪಸ್ಥಿತರಿದ್ದರು.

## ಡಾ. ಬಿ.ಆರ್. ಅಂಬೇಡ್ಕರ್ ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು

• ಉದಯವಾಹಿನಿ ಅಫಜಲಪುರ

ಸಂವಿಧಾನ ಶಿಲ್ಪಿ, ಭಾರತ ರತ್ನ ಹಾಗೂ ಪ್ರತಿಯೊಂದು ಸಮಾಜಕ್ಕೂ ಮೀಸಲಾತಿ ನೀಡಿ ಸ್ವಾಭಿಮಾನ ಜೀವನ ನಡೆಸಲು ಅವಕಾಶ ಮಾಡಿಕೊಟ್ಟ ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ ಆದರ್ಶಗಳನ್ನು ಇಂದಿನ ಯುವ ಪೀಳಿಗೆ ಮೈಗೂಡಿಸಿಕೊಂಡು ಉತ್ತಮ ಶಿಕ್ಷಣವನ್ನು ಪಡೆದು ಸಮಾಜದಲ್ಲಿ ಉನ್ನತ ಸ್ಥಾನವನ್ನು ಅಲಂಕರಿಸಬೇಕು ಎಂದು ಮುಖಂಡರಾದ ಬಸವರಾಜ ದೊಡ್ಡಮನಿ(ನದಿಸಿಣ್ಣೂರ) ಹೇಳಿದರು.

ಅಫಜಲಪುರ ಮತಕ್ಷೇತ್ರದ ಘರಹತಬಾದ ಹೋಬಳಿ ವ್ಯಾಪ್ತಿಯಲ್ಲಿ ಬರುವ ನದಿಸಿಣ್ಣೂರ ಗ್ರಾಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ 135 ನೇ ಜಯಂತಿ ನಿಮಿತ್ತ ಬಾಬಾಸಾಹೇಬರ ಫೋಟೋ ಪೂಜೆ ನೆರವೇರಿಸಿ ಮಾತನಾಡಿ, ಇಂದಿನ ಯುವಕರು ವಿದ್ಯಾಭ್ಯಾಸದ ಕಡೆ ಗಮನ ಹರಿಸದೆ ಮೊಬೈಲ್ ಕಡೆ ಹೆಚ್ಚು ಗಮನ ಹರಿಸುತ್ತಿರುವುದು ಬೇಸರದ ಸಂಗತಿ ಎಂದು ಕಳವಳ ವ್ಯಕ್ತಪಡಿಸಿದರು. ಓದುವ ಹವ್ಯಾಸ ಬೆಳೆಸಿಕೊಳ್ಳುವ ಮೂಲಕ ತಮ್ಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ದೊಡ್ಡಮನಿ ಯುವಕರಿಗೆ ಕಿವಿ ಮಾತು ಹೇಳಿದರು.

## ಮೈಲೇಜ್ ಸಾಧನದ ಹೆಸರಲ್ಲಿ ದ್ವಿಚಕ್ರ ವಾಹನ ಸವಾರರಿಗೆ ವಂಚನೆ: ಆಕ್ರೋಶ

• ಉದಯವಾಹಿನಿ ಪುತ್ತೂರು

ಉಪ್ಪಿನಂಗಡಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ದ್ವಿಚಕ್ರ ವಾಹನ ಸವಾರರನ್ನು ತಡೆದು, ಬೈಕ್ಗೆ ಹೆಚ್ಚಿನ ಮೈಲೇಜ್ ನೀಡುವ ಸಾಧನ ಅಳವಡಿಸಿಕೊಡುವುದಾಗಿ ನಂಬಿಸಿ ಹಣ ವಸೂಲಿ ಮಾಡುತ್ತಿರುವ ಗ್ಯಾಂಗ್ವೊಂದರ ಬಗ್ಗೆ ವರದಿಯಾಗಿದೆ. ಕೆಲವು ದಿನಗಳ ಹಿಂದೆ ಉಪ್ಪಿನಂಗಡಿಯ ಗಾಂಧಿ ಪಾರ್ಕ್ ಅಂಡರ್ಪಾಸ್ ಬಳಿ ಟೈಲರ್ ಒಬ್ಬರನ್ನು ತಡೆದ ಅಪರಿಚಿತ ವ್ಯಕ್ತಿಯೊಬ್ಬ, ನಿಮ್ಮ ಬೈಕ್ಗೆ ಮೈಲೇಜ್ ಹೆಚ್ಚಿಸುವ ಡಿವೈಸ್ ಅಳವಡಿಸುತ್ತೇನೆ ಎಂದು ಹೇಳಿ 1,000 ರೂಪಾಯಿ ಬೇಡಿಕೆಯಿಟ್ಟಿದ್ದಾನೆ. ಈ ವಿಚಾರವಾಗಿ ಸವಾರ ಮತ್ತು ಆ ವ್ಯಕ್ತಿಯ ನಡುವೆ ಮಾತಿನ ಚಕಮಕಿ ನಡೆದಿದೆ. ಸಾರ್ವಜನಿಕರು ಸ್ಥಳದಲ್ಲಿ ಜಮಾಯಿಸುತ್ತಿದ್ದಂತೆ ವಂಚಕ ಅಲ್ಲಿಂದ ಪರಾರಿಯಾಗಿದ್ದಾನೆ.

ಇದೇ ಮಾದರಿಯಲ್ಲಿ ಈಗಾಗಲೇ ಹಲವು ದ್ವಿಚಕ್ರ ವಾಹನ ಸವಾರರು ಈ ಗ್ಯಾಂಗ್ನಿಂದ ವಂಚನೆಗೊಳಗಾಗಿದ್ದಾರೆ ಎಂದು ತಿಳಿದುಬಂದಿದೆ. ಹೆದ್ದಾರಿಯಲ್ಲಿ ಸಾರ್ವಜನಿಕರನ್ನು ವಂಚಿಸುತ್ತಿರುವ ಇಂತಹ ವ್ಯಕ್ತಿಗಳ ವಿರುದ್ಧ ಉಪ್ಪಿನಂಗಡಿ ಪೊಲೀಸರು ತಕ್ಷಣ ಕಠಿಣ ಕ್ರಮ ಕೈಗೊಳ್ಳುವಂತೆ ಸ್ಥಳೀಯ ನಿವಾಸಿಗಳು ಒತ್ತಾಯಿಸಿದ್ದಾರೆ.

## ಬದುಕು ಗಾಜು ಇದ್ದಂತೆ

• ಉದಯವಾಹಿನಿ ಮಹಾಲಿಂಗಪುರ

ಬದುಕು ಗಾಜು ಇದ್ದಂತೆ. ಕಲ್ಲಿನ ಮೇಲೆ ಗಾಜು ಬಿದ್ದರೂ, ಗಾಜಿನ ಮೇಲೆ ಕಲ್ಲು ಬಿದ್ದರೂ ಹಾಳಾಗುವುದು ಬದುಕು ಎಂದು ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದ ಸಹಜಾನಂದ ಸ್ವಾಮೀಜಿ ಹೇಳಿದರು.

ಪಟ್ಟಣದ ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ ವಲಯ ಘಟಕದ ವತಿಯಿಂದ ಪೂಜಾ ಪುಳ್ಯಾಗೋಳ ವಿರಚಿತ ಕಲ್ಪನೆಯ ಕವನಗಳು ಕವನ ಸಂಕಲನ ಬಿಡುಗಡೆಗೊಳಿಸಿ ಮಾತನಾಡಿದರು. ಶಿಕ್ಷಕಿ ಸಪ್ನಾ ಅನಿಗೋಳ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಬೆಳೆದು ಸರ್ಕಾರಿ ಶಾಲೆಗಳಲ್ಲಿ ಕಲಿತು ಕವನ ಸಂಕಲನ ರಚಿಸಿದ ಪೂಜಾ ಕಾರ್ಯ ಶ್ಲಾಘನೀಯ ಎಂದರು.

ಪತ್ರಕರ್ತ ನಾರನಗೌಡ ಉತ್ತಂಗಿ ಮಾತನಾಡಿದರು. ಸಿದ್ದರಾಮಸ್ವಾಮಿ, ಮಹೇಶ ಇಟಕನ್ನವರ, ಕನ್ನಡ ಸಾಹಿತ್ಯ ಪರಿಷತ್ ವಲಯ ಘಟಕದ ಅಧ್ಯಕ್ಷ ಬಸವರಾಜ ಮೇಟಿ, ಶ್ರೀಶೈಲಪ್ಪ, ಶ್ರೀಶೈಲಪ್ಪ ವಜ್ಜರಮಟ್ಟಿ, ಹನಮಂತ ಶಿರೋಳ, ಕವಿಯತ್ರಿ ಪೂಜಾ ಪುಳ್ಯಾಗೋಳ ಇದ್ದರು.

## ಕುಡಿಯುವ ನೀರಿನ ಸಮಸ್ಯೆ ತಡೆಗೆ ತುರ್ತು ಕ್ರಮ: ಶಾಸಕರ ಸೂಚನೆ

• ಉದಯವಾಹಿನಿ ಬೀದರ್



ಉದಯವಾಹಿನಿ ಚಿತ್ರ

ಬೇಸಿಗೆಯ ತೀವ್ರತೆಯಿಂದಾಗಿ ನಮ್ಮ ಜನರು ಎದುರಿಸುವ ಪ್ರಮುಖ ಸಮಸ್ಯೆ ಎಂದರೆ ಕುಡಿಯುವ ನೀರಿನ ಅಭಾವ. ಇದು ಕೇವಲ ಒಂದು ಸಮಸ್ಯೆಯಲ್ಲ, ಜನರ ದೈನಂದಿನ ಬದುಕಿಗೆ ಸಂಬಂಧಿಸಿದ ಅತ್ಯಂತ ಮುಖ್ಯ ವಿಷಯವಾಗಿದೆ. ಆದ್ದರಿಂದ ಈ ವಿಷಯವನ್ನು ನಾವು ಅತ್ಯಂತ ಗಂಭೀರವಾಗಿ ತೆಗೆದುಕೊಳ್ಳಬೇಕಾಗಿದೆ ಎಂದು ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರು ಹೇಳಿದರು.

ನಗರದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರ ಅಧ್ಯಕ್ಷತೆಯಲ್ಲಿ ನಡೆದ ಟಾಸ್ಕ್ ಫೋರ್ಸ್ ಸಭೆಯಲ್ಲಿ ಮಾತನಾಡಿದರು. ನೀರಿನ ಸಮಸ್ಯೆ ನಿವಾರಣೆಗೆ ಸ್ಪಷ್ಟವಾದ ಮಾರ್ಗಸೂಚಿಗಳನ್ನು ತಯಾರಿಸಿ ನೀರಿನ ಕೊರತೆ ಇರುವ ಪ್ರದೇಶಗಳಲ್ಲಿ ತಕ್ಷಣ ಟ್ಯಾಂಕರ್ ವ್ಯವಸ್ಥೆ, ಹಳೆಯ ಪೈಪ್ಲೈನ್ ದುರಸ್ತಿ, ಹಾಗೂ ಹೊಸ ಮೂಲಗಳನ್ನು ಗುರುತಿಸುವ ಕೆಲಸಗಳನ್ನು ಪೂರ್ಣಗೊಳಿಸಬೇಕು. ಬೇಸಿಗೆ ಹಿನ್ನೆಲೆಯಲ್ಲಿ ಉಂಟಾಗುತ್ತಿರುವ ಕುಡಿಯುವ ನೀರಿನ ಸಮಸ್ಯೆ, ಸಾರ್ವಜನಿಕರ ಮೂಲಭೂತ ಸೌಲಭ್ಯಗಳ ಕೊರತೆ ಹಾಗೂ ಅಭಿವೃದ್ಧಿ ಕಾರ್ಯಗಳ ಪ್ರಗತಿ ಕುರಿತು ಸಮಗ್ರವಾಗಿ ಚರ್ಚಿಸಲಾಯಿತು. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ನೀರಿನ ಅಭಾವವನ್ನು ನಿವಾರಿಸಲು ತುರ್ತು ಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಶಾಸಕರು ಸ್ಪಷ್ಟ ಸೂಚನೆ ನೀಡಿದರು. ನೀರಿನ ಕೊರತೆ ಇರುವ ಪ್ರದೇಶಗಳಲ್ಲಿ ತುರ್ತು ಪೂರೈಕೆ ವ್ಯವಸ್ಥೆ ಜಾರಿಗೊಳಿಸಲು ಸೂಚನೆ ನೀಡಿದರು. ಅಭಿವೃದ್ಧಿ ಕಾಮಗಾರಿಗಳ ವೇಗ ಪ್ರಗತಿಯಲ್ಲಿ ಇರುವ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಲು ನಿರ್ದೇಶನ ನೀಡಿದರು. ಗ್ರಾಮೀಣ ಪ್ರದೇಶಗಳಿಗೆ ಸಮಾನ ಗಮನ ಎಲ್ಲೆಡೆ ಸಮರ್ಪಕ ಸೌಲಭ್ಯ ಒದಗಿಸಲು ಒತ್ತು ನೀಡಬೇಕು ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿ ಜನರ ಸಮಸ್ಯೆಗಳಿಗೆ ತ್ವರಿತ ಸ್ಪಂದನೆ ನೀಡಬೇಕು ಎಂದು ತಿಳಿಸಿದರು. ಕಾಮಗಾರಿಗಳ ಪ್ರಗತಿ, ಗುಣಮಟ್ಟ ಹಾಗೂ ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸುವ ಅಗತ್ಯತೆ ಕುರಿತು ವಿವರವಾದ ಮಾಹಿತಿ ಪಡೆದರು.

> ಜನಸಾಮಾನ್ಯರಿಗೆ ಯಾವುದೇ ತೊಂದರೆ ಉಂಟಾಗದಂತೆ ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು. ನೀರಿನ ಸರಬರಾಜು ವ್ಯವಸ್ಥೆಯನ್ನು ಸುಧಾರಿಸಲು ಹಾಗೂ ಸಮಸ್ಯೆಗಳು ತ್ವರಿತವಾಗಿ ಪರಿಹಾರವಾಗಲು ಕ್ರಮ ಕೈಗೊಳ್ಳಬೇಕು
> -ಡಾ. ಶೈಲೇಂದ್ರ ಬೆಲ್ದಾಳೆ, ಶಾಸಕ

## ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ಆಗ್ರಹ

• ಉದಯವಾಹಿನಿ ಬಳ್ಳಾರಿ

ನಗರದ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿರುವ ಸಂಸದ ಈ. ತುಕಾರಾಂ ಅವರ ಕಚೇರಿ ಎದುರು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಮೀಸಲಾತಿ ಪ್ರಮಾಣ ಹೆಚ್ಚಳ ಜಾರಿಗೆ ಒತ್ತಾಯಿಸಿ ಸಿಪಿಐ(ಎಂ) ಪಕ್ಷದಿಂದ ಪ್ರತಿಭಟನೆ ನಡೆಯಿತು. ಪ್ರತಿಭಟನೆಯ ಬಳಿಕ ಸಂಸದ ಈ. ತುಕಾರಾಂ ಮನವಿ ಪತ್ರ ಸಲ್ಲಿಸಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಜನಸಂಖ್ಯೆ ಆಧಾರದ ಮೇಲೆ ಶೈಕ್ಷಣಿಕ ಹಾಗೂ ಉದ್ಯೋಗ ಕ್ಷೇತ್ರಗಳಲ್ಲಿ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ನ್ಯಾ. ಎಚ್.ಎನ್. ನಾಗಮೋಹನ ದಾಸ್ ಆಯೋಗವು ನೀಡಿದ ವರದಿಯ ಪ್ರಕಾರ ಮೀಸಲಾತಿಯನ್ನು ಶೇ 15ರಿಂದ ಶೇ 17ಕ್ಕೆ ಹಾಗೂ ಶೇ 3ರಿಂದ ಶೇ 7ಕ್ಕೆ ಹೆಚ್ಚಿಸಲು ಶಿಫಾರಸು ಮಾಡಲಾಗಿದೆ. ಈ ವರದಿಯನ್ನು ಹಿಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ರಾಜ್ಯ ಸರ್ಕಾರ ಅಂಗೀಕರಿಸಿದ್ದು, ಮುಂದಿನ ಕ್ರಮಕ್ಕಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ. ಕರ್ನಾಟಕ ವಿಧಾನಸಭೆಯ ಈ ನಿರ್ಧಾರಕ್ಕೆ ಕೇಂದ್ರ ಸರ್ಕಾರ ಅನುಮೋದನೆ ನೀಡಿ, ಸಂವಿಧಾನದ 9ನೇ ಅನುಬಂಧಕ್ಕೆ ಸೇರಿಸುವಂತೆ ಒತ್ತಾಯಿಸಲಾಯಿತು.

## ಎಸ್ಐಆರ್ ಪ್ರಕ್ರಿಯೆ ಪಾರದರ್ಶಕವಾಗಿ ನಡೆಸಲು ಸೂಚನೆ

• ಉದಯವಾಹಿನಿ ಕಮಲನಗರ



ಉದಯವಾಹಿನಿ ಚಿತ್ರ

ರಾಜ್ಯದಲ್ಲಿ ವಿಶೇಷ ಸಮಗ್ರ ಪರಿಷ್ಕರಣೆ(ಎಸ್ಐಆರ್) ಪ್ರಕ್ರಿಯೆ ಕಾನೂನು ಬದ್ಧ, ನ್ಯಾಯಸಮ್ಮತ ಹಾಗೂ ಪಾರದರ್ಶಕ ರೀತಿಯಲ್ಲಿ ನಡೆಸಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಖಡಕ್ ಸೂಚನೆ ನೀಡಿದರು.

ಕಮಲನಗರ ತಾಲ್ಲೂಕಿನ ಶ್ರೀಲಂಕಾ ಎಂದೇ ಪ್ರಸಿದ್ಧಿ ಪಡೆದ ಚೊಂಡಿಮುಖೇಡ್ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಗೆ ಸೋಮವಾರ ಡಿಸಿ ಅವರು ನೀಡಿ ಪರಿಶೀಲನೆ ಗೈದ ನಂತರ ಅವರು ನಿರ್ದೇಶಿಸಿ ಮಾತನಾಡಿದರು.

ಅನೇಕ ಮತದಾರರು ವಾಸಸ್ಥಳವನ್ನು ಹಲವಾರು ಬಾರಿ ಬದಲಾಯಿಸುವ ಸಾಧ್ಯತೆಯನ್ನು ಪರಿಗಣಿಸಿ, ಅವರ ಹೆಸರುಗಳು ವಿವಿಧ ಮತಗಟ್ಟೆಗಳಲ್ಲಿ ದಾಖಲಾಗಿರುವ ಸಾಧ್ಯತೆಯನ್ನು ಸಮಗ್ರವಾಗಿ ಪರಿಶೀಲಿಸಬೇಕು.

ಯಾವುದೇ ಪರಿಸ್ಥಿತಿಯಲ್ಲಿಯೂ ನೈಜ ಹಾಗೂ ಅರ್ಹ ಮತದಾರರನ್ನು ಕಾಣೆಯಾದ ಮತದಾರರು ಎಂಬ ವರ್ಗದಲ್ಲಿ ತಪ್ಪಾಗಿ ವರ್ಗೀಕರಿಸುವುದನ್ನು ತಪ್ಪಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಎಸ್ಐಆರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಮತದಾರರ ಪಟ್ಟಿಯಿಂದ ಹೆಸರು ಕೈಬಿಡಲ್ಪಟ್ಟಿರುವ ವ್ಯಕ್ತಿಗಳಿಗೆ ತಮ್ಮ ಅರ್ಹತೆ ಸಾಬೀತು ಪಡಿಸಲು ಸಮರ್ಪಕ ಹಾಗೂ ನ್ಯಾಯಸಮ್ಮತ ಅವಕಾಶವನ್ನು ಕಲ್ಪಿಸಬೇಕು. ಈ ಸಂಬಂಧ ಸುಪ್ರೀಂ ಕೋರ್ಟ್ ನೀಡಿರುವ ಮಧ್ಯಂತರ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ತಿಳಿಸಿದರು. ಕಮಲನಗರ ತಹಶೀಲ್ದಾರ್ ಅಮಿತಕುಮಾರ ಕುಲಕರ್ಣಿ, ಎಇಇ ಮಾರುತಿ ರಾಠೋಡ್, ಚಿಕ್ಲಿ(ಯು) ಗ್ರಾಮ ಪಂಚಾಯಿತಿ ಪಿಡಿಒ ರಾಜಪ್ಪ, ವಿಎಒ ತುಳಸಿದಾಸ, ಬಿಎಲ್ಒ , ಶಿಕ್ಷಕ ಸಿಬ್ಬಂದಿ ಹಾಗೂ ಗ್ರಾಮಸ್ಥರು ಇದ್ದರು.

## ಮನೆಗಣತಿ: ಆನ್ಲೈನ್ನಲ್ಲಿ ನಮೂದಿಸಲು ಜಿಲ್ಲಾಧಿಕಾರಿ ಕರೆ

• ಉದಯವಾಹಿನಿ ಮಂಗಳೂರು



ಭಾರತದ ರಿಜಿಸ್ಟ್ರಾರ್ ಮತ್ತು ಜನಗಣತಿ ಆಯುಕ್ತರ ಕಾರ್ಯಾಲಯ ಇವರ ಪರವಾಗಿ ಜನಗಣತಿ ಕಾಯ್ದೆ-1948ರ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾರತದ ಮೊದಲ ಡಿಜಿಟಲ್ ಜನಗಣತಿ ಕಾರ್ಯವನ್ನು 2 ಹಂತಗಳಲ್ಲಿ ನಡೆಸಿ ಗಣತಿ ಮಾಹಿತಿಯನ್ನು ಸಂಗ್ರಹಿಸುವ ಪ್ರಕ್ರಿಯೆಯು ಚಾಲ್ತಿಯಲ್ಲಿದೆ.

ಈ ಪೈಕಿ ಸಾರ್ವಜನಿಕರ ಸಹಭಾಗಿತ್ವದಲ್ಲಿ ಸ್ವಯಂ ಮನೆ ಗಣತಿ ಕಾರ್ಯವನ್ನು ಮಾಡಲು ಅವಕಾಶಗಳನ್ನು ನೀಡಲಾಗಿರುತ್ತದೆ. ಅದರಂತೆ ಕಾಯ್ದೆಯ ಪ್ರಕಾರ ತಮ್ಮ ಮಾಹಿತಿ ಹೆಸರು ಮತ್ತು ಗುರುತುಗಳ ಗೌಪ್ಯವಾಗಿ ಇರಿಸಲಾಗುತ್ತದೆ. ಯಾವುದೇ ತೆರಿಗೆ ಅಥವಾ ಪರಿಶೋಧನಾ ಉದ್ದೇಶಕ್ಕೆ ದತ್ತಾಂಶವನ್ನು ಬಳಸಿಕೊಳ್ಳುವುದಿಲ್ಲ. ಇದನ್ನು ಸುರಕ್ಷಿತವಾಗಿ ಇರಿಸಲಾಗುತ್ತದೆ.

ಈ ನಿಟ್ಟಿನಲ್ಲಿ ಎಪ್ರಿಲ್ 1 ರಿಂದ 15 ರವರೆಗೆ ನಿರ್ದೇಶನಾಲಯದಿಂದ ನೀಡಿರುವ ಸರಳವಾದ ಹಂತಗಳನ್ನು ಅನುಸರಿಸುವುದರ ಮೂಲಕ 15-20 ನಿಮಿಷಗಳಲ್ಲಿ ತಮ್ಮ ಮನೆಯ ಸ್ವಯಂ ಗಣತಿಯನ್ನು ಮಾಡಿಕೊಂಡು ಏಕೀಕೃತ ಸ್ವಯಂ ಗಣತಿ ಗುರುತಿನ ಸಂಖ್ಯೆಯನ್ನು ಪಡೆಯಬಹುದಾಗಿರುತ್ತದೆ. ಪರಿಶೀಲನೆಗೆ ಬರುವ ಗಣತಿದಾರರಗೆ ಐಡಿಯನ್ನು ಒದಗಿಸಿ ಮನೆಗಣತಿ ಕಾರ್ಯವನ್ನು ಪೂರ್ಣಗೊಳಿಸಿಕೊಳ್ಳಬಹುದಾಗಿರುತ್ತದೆ.

**57466 ಮನೆಗಳು ನಮೂದು :-** ಸಾರ್ವಜನಿಕರು ಸ್ವಯಂ ಮನೆಗಣತಿ ಕಾರ್ಯ ಮಾಡುವ ಪ್ರಕ್ರಿಯೆ ಜಿಲ್ಲೆಯಲ್ಲಿ ಮುಂದುವರಿಯುತ್ತಿದ್ದು, ದಕ್ಷಿಣ ಕನ್ನಡದಲ್ಲಿ ಇದುವರೆಗೆ 57466 ಮನೆಗಳ ಸ್ವಯಂ ಗಣತಿ ಕಾರ್ಯ ಮುಗಿದಿರುತ್ತದೆ. ಸ್ವಯಂ ಮನೆಗಣತಿಯು ಅತ್ಯಂತ ಸರಳ ಪ್ರಕ್ರಿಯೆಯಾಗಿದೆ. ಆನ್ಲೈನ್ನಲ್ಲಿ se.census.gov.in ವೆಬ್ಸೈಟ್ಗೆ ಭೇಟಿ ನೀಡಿ, ಮೊಬೈಲ್ ಸಂಖ್ಯೆಗೆ ಬರುವ ಒ.ಟಿ.ಪಿ ಮೂಲಕ ಲಾಗಿನ್ ಆಗಿ, ನಿಮ್ಮ ರಾಜ್ಯ, ಜಿಲ್ಲೆ ಮತ್ತು ಸ್ಥಳೀಯ ವಿವರಗಳನ್ನು ಆಯ್ಕೆ ಮಾಡಿ, ಡಿಜಿಟಲ್ ಮ್ಯಾಪ್ನಲ್ಲಿ ನಿಮ್ಮ ಮನೆಯ ಸ್ಥಳವನ್ನು ಗುರುತಿಸಿ, ನಿಮ್ಮ ಮನೆ ಮತ್ತು ಕುಟುಂಬಕ್ಕೆ ಸಂಬಂಧಿಸಿದ ವಿವರಗಳನ್ನು ಭರ್ತಿ ಮಾಡಬೇಕು.

ಸಲ್ಲಿಸಿದ ನಂತರ ಎಸ್.ಇ ಐಡಿ ದೊರಕಲಿದೆ. ಎಸ್.ಇ ಐಡಿ ಅನ್ನು ಗಣತಿದಾರರು ಮನೆಗೆ ಭೇಟಿ ನೀಡಿದಾಗ ಒದಗಿಸಬೇಕು. ಗಣತಿದಾರರು ಎಸ್.ಇ ಐಡಿ ಮೂಲಕ ವಿವರಗಳನ್ನು ದೃಢೀಕರಿಸುತ್ತಾರೆ.

# ಆಧುನಿಕ ಯುಗದಲ್ಲಿ ಮಕ್ಕಳಿಗೆ ಎಐ ತಂತ್ರಜ್ಞಾನದ ಶಿಕ್ಷಣ ಅಗತ್ಯ: ಲಕ್ಷ್ಮಣ ಸವದಿ

### ಇಂದು ವೈದ್ಯಕೀಯ, ತಂತ್ರಜ್ಞಾನ, ಶಿಕ್ಷಣ, ಸಿನೆಮಾ, ಜೋತಿಷ್ಯ ಸೇರಿದಂತೆ ಕೃಷಿ ಕ್ಷೇತ್ರದಲ್ಲಿಯೂ ಎ ಐ ತಂತ್ರಜ್ಞಾನ ಕೆಲಸ ಮಾಡುತ್ತಿದೆ

• ಉದಯವಾಹಿನಿ ಅಥಣಿ



ಉದಯವಾಹಿನಿ ಚಿತ್ರ

ಪ್ರತಿಯೊಂದು ರಂಗದಲ್ಲಿ ಎ ಐ ತಂತ್ರಜ್ಞಾನ ಕೆಲಸ ಮಾಡುತ್ತಿದೆ. ಅದಕ್ಕಾಗಿ ಮಕ್ಕಳಿಗೆ ದೂರದೃಷ್ಟಿ ಇಟ್ಟುಕೊಂಡು ನಮ್ಮ ಮಾತೃಭಾಷೆ ಕನ್ನಡ ಭಾಷೆ ಕಲಿಯುವುದರ ಜೊತೆಗೆ ಇಂಗ್ಲೀಷ ಭಾಷೆಯನ್ನು ಕಲಿಯುವುದು ಕೂಡ ಅಗತ್ಯವಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಬೆಳದಂತೆ ಹೊಸ ಆವಿಷ್ಕಾರಗಳನ್ನು, ಹೊಸ ವಿಷಯಗಳನ್ನು ಕಲಿಯುವುದು ಅಗತ್ಯ ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು.

**ಕಡಿಮೆ ಅವಧಿಯಲ್ಲಿ ನಿಖರವಾದ ಫಲಿತಾಂಶ**

ಅವರು ತಾಲ್ಲೂಕಿನ ದೇಸಾಯರಹಟ್ಟಿ ಗ್ರಾಮದ ನಮ್ಮೂರು ಸರಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ 79 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಹಮ್ಮಿಕೊಂಡಿದ್ದ ''ಅಮೃತ ಮಹೋತ್ಸವ ಕಾರ್ಯಕ್ರಮ'' ವನ್ನು ಉದ್ಘಾಟಿಸಿ ಮಾತನಾಡಿದರು. ಮಕ್ಕಳಿಗೆ ಗುಣಮಟ್ಟದ ಶಿಕ್ಷಣದ ಜೊತೆಗೆ ಒಳ್ಳೆಯ ಸಂಸ್ಕಾರ ಮತ್ತು ನಮ್ಮ ಬದುಕಿಗೆ ಅಗತ್ಯವಿರುವ ಹೊಸ ತಂತ್ರಜ್ಞಾನ ಮತ್ತು ಆವಿಷ್ಕಾರಗಳ ಬಗ್ಗೆ ಕಲಿಸಿಕೊಡುವುದು ಇಂದಿನ ಅಗತ್ಯವಾಗಿದೆ. ಇಂದು ವೈದ್ಯಕೀಯ, ತಂತ್ರಜ್ಞಾನ, ಶಿಕ್ಷಣ, ಸಿನೆಮಾ, ಜೋತಿಷ್ಯ ಸೇರಿದಂತೆ ಕೃಷಿ ಕ್ಷೇತ್ರದಲ್ಲಿಯೂ ಎ ಐ ತಂತ್ರಜ್ಞಾನ ಕೆಲಸ ಮಾಡುತ್ತಿದೆ. ಇದರಿಂದ ಅತ್ಯಂತ ಕಡಿಮೆ ಅವಧಿಯಲ್ಲಿ ನಿಖರವಾದ ಫಲಿತಾಂಶ ದೊರಕುತ್ತಿದೆ. ಇದನ್ನು ನಮ್ಮ ಗ್ರಾಮೀಣ ಪ್ರದೇಶದ ರೈತಾಪಿ ಮಕ್ಕಳು ಕಲಿಯಬೇಕಾದರೆ ಅವರಿಗೂ ಕೂಡ ಗುಣಮಟ್ಟದ ಶಿಕ್ಷಣ, ಆಂಗ್ಲ ಮಾಧ್ಯಮದ ಕಲಿಕೆ ಅಗತ್ಯವಾಗಿದೆ. ಆದ್ದರಿಂದ ನಾನು ತಾಲ್ಲೂಕಿನ 11 ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದ ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ಪ್ರಾರಂಭಿಸಲಾಗಿದೆ. ಇದಲ್ಲದೆ ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ 09 ಪ್ರಾಥಮಿಕ ಶಾಲೆಗಳನ್ನು ಉನ್ನತಿಕರಿಸಿ ಪ್ರೌಢಶಾಲೆಗಳನ್ನು ಆರಂಭಿಸಲಾಗಿದೆ ಎಂದರು. ದೇಸಾಯರಹಟ್ಟಿ ಗ್ರಾಮದ ಈ ಪ್ರಾಥಮಿಕ ಶಾಲೆಯನ್ನು ಬರುವ ಶೈಕ್ಷಣಿಕ ವರ್ಷದಿಂದ ಉನ್ನತೀಕರಿಸಿ ಪ್ರೌಢಶಾಲೆಯನ್ನು ಆರಂಭಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ದೇಸಾಯರಹಟ್ಟಿ ಗ್ರಾಮದ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯು 79 ವರ್ಷಗಳನ್ನು ಪೂರೈಸಿ ಅಮೃತ ಮಹೋತ್ಸವ ಆಚರಿಸಿಕೊಳ್ಳುತ್ತಿರುವದು ಬಹಳ ಸಂತಸ ಮತ್ತು ಹೆಮ್ಮೆಯ ವಿಚಾರ. ಈ ಶಾಲೆಯ ಮುಖ್ಯ ಶಿಕ್ಷಕ ಹಾಗೂ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಗುರುಶಾಂತಯ್ಯ ಹಿರೇಮಠ ಬಹಳ ಆಸಕ್ತಿ ವಹಿಸಿ ಶಾಲೆಯಲ್ಲಿ ಒಳ್ಳೆಯ ಕಲಿಕಾ ವಾತಾವರಣ ಮತ್ತು ಪರಿಸರದ ಬಗ್ಗೆ ಆಸಕ್ತಿ ಮೂಡಿಸಿರುವ ಕಾರ್ಯ ಅತ್ಯಂತ ಶ್ಲಾಘನೀಯ. ಅವರ ಈ ಕಾರ್ಯ ಅನೇಕ ಶಿಕ್ಷಕರಿಗೆ ಮಾದರಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಗ್ರಾಮದ ಹಿರಿಯ ಮುಖಂಡ ಸಿದ್ದರಾಮ ಕಳಸಣ್ಣವರ ಮಾತನಾಡಿ ಗ್ರಾಮದ ಸರ್ಕಾರಿ ಕನ್ನಡ ಪ್ರಾಥಮಿಕ ಶಾಲೆಯಲ್ಲಿ 1ರಿಂದ 8ನೇ ತರಗತಿಯವರಿಗೆ ಮಾತ್ರ ಶಿಕ್ಷಣ ನಡೆಯುತ್ತಿದ್ದು, 9 ಮತ್ತು 10ನೇ ತರಗತಿಗಾಗಿ ಗ್ರಾಮದ ಹೆಣ್ಣು ಮಕ್ಕಳು ಬೇರೆ ಕಡೆಗೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಸರಿಯಾದ ಸಾರಿಗೆ ಸೌಲಭ್ಯ ಇಲ್ಲದೆ ಇರುವುದರಿಂದ. ಇದೆ ಶಾಲೆಯನ್ನು ಉನ್ನತೀಕರಿಸಿ ಪ್ರೌಢಶಾಲೆ ಮಂಜೂರು ಮಾಡಿದರೆ ಬಹಳಷ್ಟು ಅನುಕೂಲವಾಗುತ್ತದೆ. ಬರುವ ಶೈಕ್ಷಣಿಕ ವರ್ಷದಿಂದ ಪ್ರೌಢಶಾಲೆಯನ್ನ ಮಂಜೂರು ಮಾಡಬೇಕು.

> ಬಡ ಹಾಗೂ ಮಧ್ಯಮ ಕುಟುಂಬಗಳ ಮಕ್ಕಳಿಗೆ ಗುಣಮಟ್ಟದ ಶಿಕ್ಷಣಕ್ಕಾಗಿ ಕೇಂದ್ರೀಯ ಮಹಾವಿದ್ಯಾಲಯ ಆರಂಭಗೊಂಡಿದೆ. ಈಗಾಗಲೇ ಪ್ರವೇಶಾತಿಗಳು ಆರಂಭವಾಗಿದ್ದು, ಆಸಕ್ತರು ಸದುಪಯೋಗ ಪಡೆದುಕೊಳ್ಳಬೇಕು. ಪಶು ವೈದ್ಯಕೀಯ ಮಹಾವಿದ್ಯಾಲಯ 02 ವರ್ಷಗಳನ್ನು ಪೂರೈಸಿ, ಮೂರನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಶೀಘ್ರದಲ್ಲಿಯೇ ಕೃಷಿ ಮಹಾವಿದ್ಯಾಲಯಕ್ಕೆ ಭೂಮಿ ಪೂಜೆ ನೇರವೇರಿಸಲಾಗುವುದು. -ಲಕ್ಷ್ಮಣ ಸವದಿ

ಸಾರಿಗೆ ಬಸ್ ಸೌಲಭ್ಯವನ್ನು ಒದಗಿಸಬೇಕು, ತೋಟದ ವಸತಿ ಶಾಲೆಗಳಿಗೆ ಶುದ್ಧ ಕುಡಿಯುವ ನೀರಿನ ಘಟಕಗಳನ್ನು, ಗ್ರಾಮ ದೇವರ ದೇವಸ್ಥಾನಕ್ಕೆ ಒಂದು ಸಮುದಾಯ ಭವನ ನಿರ್ಮಿಸಿ ಕೊಡುವಂತೆ ಶಾಸಕರಲ್ಲಿ ಮನವಿ ಮಾಡಿದರು. ಚಿಕ್ಕೋಡಿ ಜಿಲ್ಲಾ ಉಪ ನಿರ್ದೇಶಕ ಸೀತಾರಾಮ ಆರ್. ಎ ಮಾತನಾಡಿ ಸರ್ಕಾರಿ ಶಾಲೆಯಲ್ಲಿ ಮಕ್ಕಳ ಹಾಜರಾತಿ ಕಡಿಮೆಯಾಗುತ್ತಿರುವುದು ಬೇಸರದ ಸಂಗತಿ. 79 ವರ್ಷಗಳಿಂದ ಈ ಸರ್ಕಾರಿ ಶಾಲೆಯಲ್ಲಿ ತಮ್ಮ ಮಕ್ಕಳನ್ನ ಕಲಿಸುವ ಮೂಲಕ ಇಂದು ಅಮೃತ ಮಹೋತ್ಸವ ಆಚರಿಸುತ್ತಿರುವುದು ಬಹಳ ಸಂತೋಷ ಮತ್ತು ಹೆಮ್ಮೆಯ ವಿಚಾರ.

ಶಾಲೆಯಲ್ಲಿ ಸುಂದರ ಪರಿಸರ, ಕಲಿಕಾ ಗುಣಮಟ್ಟ ಸುಧಾರಿಸುವ ಶಿಕ್ಷಕರು ಇಲ್ಲಿದ್ದಾರೆ. ಮುಂಬರುವ ದಿನಗಳಲ್ಲಿ ಈ ಶಾಲೆಯನ್ನು ಶಾಸಕರ ಮಾರ್ಗದರ್ಶನದಂತೆ ಉನ್ನತಿಕರಿಸಿ ಪ್ರೌಢಶಾಲೆ ಮಾಡಲಾಗುವುದು ಎಂದರು. ಖಾಸಗಿ ಶಾಲೆಗಳ ಅಬ್ಬರ ಮತ್ತು ಇಂಗ್ಲಿಷ್ ವ್ಯಾಮೋಹಕ್ಕಾಗಿ ಅನೇಕ ಪಾಲಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಕಳಿಸುತ್ತಿಲ್ಲ. ಪಾಲಕರು ಜಾಗೃತವಾಗಬೇಕು. ವ್ಯಾಮೋಹಕ್ಕೆ ಬಲಿಯಾಗದೆ ಮಕ್ಕಳಿಗೆ ಮಾತೃ ಭಾಷೆಯಲ್ಲಿ ಶಿಕ್ಷಣ ನೀಡಬೇಕು. ಸರ್ಕಾರಿ ಶಾಲೆಗಳಿಗೆ ಎಲ್ಲರೂ ಕೂಡ ಮಕ್ಕಳನ್ನು ಕಳುಹಿಸುವ ಮೂಲಕ ಉಚಿತ ಶಿಕ್ಷಣ ಅನೇಕ ಶೈಕ್ಷಣಿಕ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು. ಕನ್ನಡ ಶಾಲೆಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕೈಜೋಡಿಸಬೇಕು ಎಂದು ಕರೆ ನೀಡಿದರು.

# 12,000 ಕೋಟಿ ವೆಚ್ಚದ ದೆಹಲಿ-ಡೆಹ್ರಾಡೂನ್ ಆರ್ಥಿಕ ಕಾರಿಡಾರ್ ಉದ್ಘಾಟಿಸಿದ ಮೋದಿ

**ಡೆಹ್ರಾಡೂನ್:** ದೆಹಲಿ, ಡೆಹ್ರಾಡೂನ್ ನಡುವಿನ ಪ್ರಯಾಣದ ಸಮಯವನ್ನು ಅರ್ಧದಷ್ಟು ಕಡಿಮೆ ಮಾಡುವ ದೆಹಲಿ-ಡೆಹ್ರಾಡೂನ್ ಆರ್ಥಿಕ ಕಾರಿಡಾರ್ ಅನ್ನು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಉದ್ಘಾಟಿಸಿದ್ದಾರೆ. 213 ಕಿ.ಮೀ ಉದ್ದದ, ಆರು ಪಥಗಳ ಆರ್ಥಿಕ ಕಾರಿಡಾರ್ ಅನ್ನು 12,000 ಕೋಟಿಗೂ ಹೆಚ್ಚು ವೆಚ್ಚದಲ್ಲಿ ನಿರ್ಮಿಸಲಾಗಿದೆ. ಈ ಕಾರಿಡಾರ್ ದೆಹಲಿ, ಉತ್ತರ ಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳ ಮೂಲಕ ಹಾದುಹೋಗುತ್ತದೆ. ಇದು ದೆಹಲಿ ಮತ್ತು ಡೆಹ್ರಾಡೂನ್ ನಡುವಿನ ಪ್ರಯಾಣದ ಸಮಯವನ್ನು ಆರು ಗಂಟೆಗಳಿಂದ ಎರಡೂವರೆ ಗಂಟೆಗೆ ಕಡಿಮೆ ಮಾಡಲಿದೆ.

ಪ್ರಮುಖ ಪ್ರವಾಸೋದ್ಯಮ ಮತ್ತು ಆರ್ಥಿಕ ಕೇಂದ್ರಗಳ ನಡುವೆ ಸಂಪರ್ಕ ಹೆಚ್ಚಿಸುವ ಮೂಲಕ ಪ್ರಾದೇಶಿಕ ಆರ್ಥಿಕ ಬೆಳವಣಿಗೆಯನ್ನು ಬಲಪಡಿಸುವಲ್ಲಿ ಈ ಕಾರಿಡಾರ್ ಪ್ರಮುಖ ಪಾತ್ರ ವಹಿಸಲಿದೆ.



ಹೈ-ಸ್ಪೀಡ್ ಸಂಪರ್ಕದೊಂದಿಗೆ ಪರಿಸರ ಸುಸ್ಥಿರತೆಯನ್ನು ಸಂಯೋಜಿಸುವ ಮುಂದಿನ ಪೀಳಿಗೆಯ ಮೂಲಸೌಕರ್ಯ ಅಭಿವೃದ್ಧಿಪಡಿಸುವ ಮೋದಿಯವರ ದೃಷ್ಟಿಕೋನವನ್ನು ಈ ಯೋಜನೆ ಪ್ರತಿಬಿಂಬಿಸುತ್ತದೆ ಎಂದು ಹೇಳಲಾಗಿದೆ.

ಸುಗಮ ಸಂಚಾರಕ್ಕಾಗಿ ಈ ಯೋಜನೆಯಲ್ಲಿ 10 ಇಂಟರ್‌ಚೇಂಜ್‌ಗಳು, ಮೂರು ರೈಲ್ವೆ ಮೇಲ್ಸೇತುವೆಗಳು, ನಾಲ್ಕು ಪ್ರಮುಖ ಸೇತುವೆಗಳು ಸೇರಿದಂತೆ ಇತರ ಸೌಲಭ್ಯಗಳನ್ನು ನಿರ್ಮಿಸಲಾಗಿದೆ. ಪ್ರಯಾಣಿಕರಿಗೆ ಸುರಕ್ಷಿತ ಮತ್ತು ಪರಿಣಾಮಕಾರಿ ಪ್ರಯಾಣದ ಅನುಭವ ನೀಡಲು ಈ ಕಾರಿಡಾರ್ ಸುಧಾರಿತ ಸಂಚಾರ ನಿರ್ವಹಣಾ ವ್ಯವಸ್ಥೆಯನ್ನು ಹೊಂದಿದೆ.

**ಪರಿಸರ ಮತ್ತು ವನ್ಯಜೀವಿ ಸಂರಕ್ಷಣೆ:** ಈ ಪ್ರದೇಶದ ಪರಿಸರ ಸೂಕ್ಷ್ಮತೆ ಮತ್ತು ಜೀವವೈವಿಧ್ಯತೆಯನ್ನು ಗಮನದಲ್ಲಿಟ್ಟುಕೊಂಡು, ಮಾನವ-ವನ್ಯಜೀವಿ ಸಂಘರ್ಷವನ್ನು ಕಡಿಮೆ ಮಾಡಲು ಹಲವಾರು ವೈಶಿಷ್ಟ್ಯಗಳನ್ನು ವಿನ್ಯಾಸಗೊಳಿಸಲಾಗಿದೆ.

**ವನ್ಯಜೀವಿ ಎಲಿವೇಟೆಡ್ ಕಾರಿಡಾರ್:** ಏಷ್ಯಾದಲ್ಲೇ ಅತ್ಯಂತ ಉದ್ದದ (12ಕಿ.ಮೀ) ವನ್ಯಜೀವಿ ಎಲಿವೇಟೆಡ್ ಕಾರಿಡಾರ್ ಅನ್ನು ಇಲ್ಲಿ ನಿರ್ಮಿಸಲಾಗಿದೆ. ಪ್ರಾಣಿಗಳ ಮುಕ್ತ ಸಂಚಾರಕ್ಕಾಗಿ ಎಂಟು ಪ್ರಾಣಿ ಪಥಗಳು, ತಲಾ 200 ಮೀಟರ್ ಉದ್ದದ ಎರಡು ಆನೆ ಕೆಳಸೇತುವೆಗಳು ಮತ್ತು ಮಾ ದಾತ್ ಕಾಳಿ ದೇವಾಲಯದ ಬಳಿ 370 ಮೀಟರ್ ಉದ್ದದ ಸುರಂಗವನ್ನು ನಿರ್ಮಿಸಲಾಗಿದೆ.

## ನಿತೀಶ್ ಕುಮಾರ್ ರಾಜೀನಾಮೆ, ಬಿಹಾರದ ನೂತನ ಸಿಎಂ ಆಗಿ ಸಾಮ್ರಾಟ್ ಚೌಧರಿ ಆಯ್ಕೆ

**ಪಟ್ನಾ:** ಬಿಹಾರದ ಮುಖ್ಯಮಂತ್ರಿ ಸ್ಥಾನಕ್ಕೆ ನಿತೀಶ್ ಕುಮಾರ್ ರಾಜೀನಾಮೆ ಸಲ್ಲಿಸಿದ್ದಾರೆ. ಅದರ ಬೆನ್ನಲ್ಲೇ ನೂತನ ಸಿಎಂ ಆಗಿ ಸಾಮ್ರಾಟ್ ಚೌಧರಿ ಅವರು ಆಯ್ಕೆಯಾಗಿದ್ದಾರೆ. ಮಂಗಳವಾರ ಪಟ್ನಾದಲ್ಲಿ ಮುಖ್ಯಮಂತ್ರಿ ನಿತೀಶ್ ಕುಮಾರ್ ತಮ್ಮ ಅಂತಿಮ ಸಚಿವ ಸಂಪುಟ ಸಭೆ ನಡೆಸಿದರು. ಈ ವೇಳೆ ಭಾವುಕರಾದ ಅವರು, ಸಂಪುಟ ಸಭೆಯ ನಂತರ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಮಂಗಳವಾರ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್, ಬಿಹಾರ ಬಿಜೆಪಿ ಅಧ್ಯಕ್ಷ ಸಂಜಯ್ ಸರೋಗಿ, ಬಿಹಾರ ಉಪಮುಖ್ಯಮಂತ್ರಿಗಳಾದ ಸಾಮ್ರಾಟ್ ಚೌಧರಿ ಮತ್ತು ವಿಜಯ್ ಕುಮಾರ್ ಸಿನ್ಹಾ ಮತ್ತು ಇತರ ಪಕ್ಷದ ನಾಯಕರು ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಭಾಗವಹಿಸಿದ್ದರು. ಹೊಸದಾಗಿ ಆಯ್ಕೆಯಾದ ರಾಜ್ಯಸಭಾ ಸಂಸದ ನಿತೀಶ್ ಕುಮಾರ್ ಬಿಹಾರ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಬಿಜೆಪಿಯ ಕೇಂದ್ರ ವೀಕ್ಷಕ ಮತ್ತು ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್, ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಸಾಮ್ರಾಟ್ ಚೌಧರಿ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಘೋಷಿಸಿದರು. ಬುಧವಾರ (ಏ.15) ಬಿಹಾರದಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬರಲಿದ್ದು, ಹೊಸ ಮುಖ್ಯಮಂತ್ರಿಯ ಜೊತೆಗೆ, ಇಬ್ಬರು ಶಾಸಕರು ಉಪಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನಿತೀಶ್ ಕುಮಾರ್ ಮಾರ್ಚ್ 16ರಂದು ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗಿದ್ದರು. ನಿಯಮದ ಪ್ರಕಾರ, ಸಂಸತ್ತಿನ ಮೇಲ್ಮನೆಗೆ ಆಯ್ಕೆಯಾದ 14 ದಿನಗಳ ಒಳಗೆ ಚುನಾಯಿತ ಸದಸ್ಯರು ಎಂಎಲ್‌ಸಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಗುತ್ತದೆ. ಹೀಗಾಗಿ, ನಿತೀಶ್ ಕುಮಾರ್ ರಾಜೀನಾಮೆ ನೀಡಿದ್ದಾರೆ. ಆ ಬಳಿಕ ಬಿಹಾರದ ನೂತನ ಸಿಎಂ ಆಗಿ ಸಾಮ್ರಾಟ್ ಚೌಧರಿ ಅವರು ಆಯ್ಕೆಯಾಗಿದ್ದಾರೆ.



### ಮಧ್ಯಪ್ರಾಚ್ಯ ಶಾಂತಿಗೆ 4 ಅಂಶಗಳ ಪ್ರಸ್ತಾವನೆ ಮುಂದಿಟ್ಟ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್

# ಯುಎಇ ಅಧ್ಯಕ್ಷರ ಬೀಜಿಂಗ್ ಭೇಟಿ ವೇಳೆ ಪ್ರಸ್ತಾಪ

**ಬೀಜಿಂಗ್:** ಮಧ್ಯಪ್ರಾಚ್ಯದಲ್ಲಿನ ಸಂಘರ್ಷದ ನಡುವೆ ಅಮೆರಿಕಾ-ಇರಾನ್ 2ನೇ ಸುತ್ತಿನ ಮಾತುಕತೆಗೆ ಸಿದ್ಧತೆ ನಡೆಸುತ್ತಿವೆ. ಈ ಮಧ್ಯೆ ಯುಎಇ ಕ್ರೌನ್ ಪ್ರಿನ್ಸ್ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರೊಂದಿಗೆ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಸಭೆ ನಡೆಸಿದ್ದಾರೆ. ಈ ವೇಳೆ, ಮಧ್ಯಪ್ರಾಚ್ಯದಲ್ಲಿ ಶಾಂತಿ ಮತ್ತು ಸ್ಥಿರತೆಯನ್ನು ಬಲಪಡಿಸುವ 4 ಅಂಶಗಳ ಪ್ರಸ್ತಾಪವನ್ನು ಮಂಡಿಸಿದ್ದಾರೆ. ಮಧ್ಯಪ್ರಾಚ್ಯದಲ್ಲಿನ ಉದ್ವಿಗ್ನತೆ ನಡುವೆ ಯುಎಇ ಅಧ್ಯಕ್ಷ ಹಾಗೂ ಚೀನಾ ಅಧ್ಯಕ್ಷ ಚರ್ಚೆ ನಡೆಸಿದ್ದಾರೆ. ಈ ವೇಳೆ, ಗಲ್ಫ್ ಪ್ರದೇಶದಲ್ಲಿ ಕದನ ವಿರಾಮ ಮಾತುಕತೆಗಳನ್ನು ಉತ್ತೇಜಿಸುವಲ್ಲಿ ಚೀನಾ ರಚನಾತ್ಮಕ ಪಾತ್ರವನ್ನು ವಹಿಸುತ್ತದೆ ಎಂದಿದ್ದು, ಯುದ್ಧಪೀಡಿತ ಪ್ರದೇಶದಲ್ಲಿ ರಾಷ್ಟ್ರಗಳ ಸಾರ್ವಭೌಮತ್ವವನ್ನು ಗೌರವಿಸುವಂತೆ, ಈ ಪ್ರದೇಶದಲ್ಲಿ ಶಾಂತಿ ನೆಲೆಸಬೇಕಾದರೆ ಅಂತಾರಾಷ್ಟ್ರೀಯ ಕಾನೂನಿನ ನಿಯಮವನ್ನು ಎತ್ತಿಹಿಡಿಯಬೇಕು ದೇಶಗಳನ್ನು ಒತ್ತಾಯಿಸಿದ್ದಾರೆ.

**ಮಧ್ಯಪ್ರಾಚ್ಯದಲ್ಲಿ ಶಾಂತಿ ಸ್ಥಾಪನೆಗೆ 4 ಅಂಶಗಳ ಪ್ರಸ್ತಾವನೆ ಮುಂದಿಟ್ಟ ಚೀನಾ:** ಇದಾದ ಬಳಿಕ ಮಧ್ಯಪ್ರಾಚ್ಯದಲ್ಲಿ ಶಾಂತಿಯನ್ನು ಸ್ಥಾಪಿಸಲು ದೀರ್ಘಕಾಲದವರೆಗೂ ನೆಲೆಸುವ ಕದನ ವಿರಾಮದ ಗುರಿಯನ್ನು ಸಾಧಿಸುವ ನಿಟ್ಟಿನಲ್ಲಿ 4 ಅಂಶಗಳ ಶಾಂತಿ ಪ್ರಸ್ತಾವನೆಯನ್ನು ಮಂಡಿಸಿದ್ದಾರೆ ಎಂದು ಕ್ಸಿನ್ಹುವಾ ಸುದ್ದಿ ಸಂಸ್ಥೆ ವರದಿ ಮಾಡಿದೆ. ಈಶಾಂತಿ ಪ್ರಸ್ತಾವನೆಯಲ್ಲಿ ಒಳಗೊಂಡಿರುವ 4 ಅಂಶಗಳು ಇಲ್ಲಿವೆ.

**1. ಈ ಪ್ರದೇಶದಲ್ಲಿ ಶಾಂತಿಯುತ ಸಹಬಾಳ್ವೆ:** ಮಧ್ಯಪ್ರಾಚ್ಯದಲ್ಲಿನ ಉದ್ವಿಗ್ನತೆಯನ್ನು ಶಮನಗೊಳಿಸುವ ನಿಟ್ಟಿನಲ್ಲಿ ಪ್ರಾದೇಶಿಕ ದೇಶಗಳ ಶಾಂತಿಯುತ ಸಹಬಾಳ್ವೆಯ ತತ್ವವನ್ನು ಪಾಲಿಸುವ ಮಹತ್ವವನ್ನು ಎತ್ತಿತೋರಿಸಿದ್ದಾರೆ.

**2. ರಾಷ್ಟ್ರೀಯ ಸಾರ್ವಭೌಮತ್ವಕ್ಕೆ ಗೌರವ:** ಯುದ್ಧ ಆರಂಭ ಆದಾಗಿನಿಂದಲೂ ರಾಷ್ಟ್ರಗಳು ಪರಸ್ಪರ ಸಾರ್ವಭೌಮತ್ವವನ್ನು ಗೌರವಿಸಬೇಕು ಎಂದು ಚೀನಾ ಒತ್ತಾಯಿಸುತ್ತಿದೆ. ಈ ಬೆನ್ನಲ್ಲೇ, ಇದೀಗ ರಾಷ್ಟ್ರಗಳು ಪರಸ್ಪರರ ಸಾರ್ವಭೌಮತ್ವವನ್ನು ಗೌರವಿಸಬೇಕು, ಉದ್ವಿಗ್ನತೆಯನ್ನು ಹೆಚ್ಚಿಸುವ ಕ್ರಮಗಳನ್ನು ತಪ್ಪಿಸಬೇಕು ಎಂದು ತಿಳಿಸಿದ್ದಾರೆ.



**3. ಅಭಿವೃದ್ಧಿ ಮತ್ತು ಭದ್ರತಾ ನೀತಿಗಳ ನಡುವೆ ಉತ್ತಮ ಸಮನ್ವಯ:** ಈ ಪ್ರಸ್ತಾವನೆಯು ಪ್ರದೇಶದಾದ್ಯಂತ ಅಭಿವೃದ್ಧಿ ಗುರಿಗಳು, ಭದ್ರತಾ ನೀತಿಗಳ ನಡುವೆ ಬಲವಾದ ಸಮನ್ವಯದ ಅಗತ್ಯವನ್ನು ಒತ್ತಿಹೇಳುತ್ತಿದ್ದು, ಈ ವಿಧಾನವು ಆರ್ಥಿಕ ಪ್ರಗತಿ, ಭದ್ರತಾ ಕಾಳಜಿಗಳು ಒಟ್ಟಿಗೆ ಮುಂದುವರಿಯುವುದನ್ನು ಖಚಿತಪಡಿಸಿಕೊಳ್ಳುವ ಗುರಿಯನ್ನು ಹೊಂದಿದೆ. ಪ್ರಸ್ತಾವನೆಯ ಮತ್ತೊಂದು ಪ್ರಮುಖ ಅಂಶವೆಂದರೆ ಅಭಿವೃದ್ಧಿ ಮತ್ತು ಭದ್ರತಾ ವಿಷಯಗಳಲ್ಲಿ ದೇಶಗಳ ನಡುವಿನ ಸುಧಾರಿತ ಸಹಕಾರ. ಈ ಆದ್ಯತೆಗಳನ್ನು ಜೋಡಿಸುವ ಮೂಲಕ, ದೀರ್ಘಾವಧಿಯ ಸ್ಥಿರತೆಯನ್ನು ಸಾಧಿಸಬಹುದು ಎಂದು ಯೋಜನೆ ಸೂಚಿಸುತ್ತದೆ. ಆರ್ಥಿಕ ಬೆಳವಣಿಗೆಯು ಶಾಂತಿಯನ್ನು ಬೆಂಬಲಿಸುವ, ಭದ್ರತಾ ಕ್ರಮಗಳು ಅಭಿವೃದ್ಧಿ ಪ್ರಯತ್ನಗಳಿಗೆ ಅಡ್ಡಿಯಾಗದ ಸಮತೋಲಿತ ಚೌಕಟ್ಟನ್ನು ರಚಿಸುವುದರ ಮೇಲೆ ಒತ್ತು ನೀಡಲಾಗಿದೆ.

**4. ಅಂತಾರಾಷ್ಟ್ರೀಯ ಕಾನೂನಿನ ನಿಯಮವನ್ನು ಎತ್ತಿಹಿಡಿಯುವುದು**
ಚೀನಾ ಅಧ್ಯಕ್ಷರು ಅಂತಾರಾಷ್ಟ್ರೀಯ ಕಾನೂನನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಕರೆ ನೀಡಿದ್ದು, ಜಾಗತಿಕ ನಿಯಮಗಳ ಆಯ್ದ ಬಳಕೆಯ ವಿರುದ್ಧ ಎಚ್ಚರಿಕೆ ನೀಡಿದ್ದಾರೆ. ಅಲ್ಲದೆ, ಇಂತಹ ಕ್ರಮಗಳು ಅಂತಾರಾಷ್ಟ್ರೀಯ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತದೆ ಎಂದು ಹೇಳಿದ್ದಾರೆ. ಈ ಕುರಿತು ಅಂತಾರಾಷ್ಟ್ರೀಯ ಕಾನೂನಿನ ನಿಯಮದ ಅಧಿಕಾರವನ್ನು ರಕ್ಷಿಸಿ. ಅದು ನಮಗೆ ಸರಿಹೊಂದಿದಾಗ ಅದನ್ನು ಬಳಸಲು ಸಾಧ್ಯವಿಲ್ಲ, ಅದು ಸೂಕ್ತವಲ್ಲದಿದ್ದಾಗ ಅದನ್ನು ತ್ಯಜಿಸಲು ಸಾಧ್ಯವಿಲ್ಲ, ಕಾಡುಮನುಷ್ಯರಂತೆ ಕಾನೂನುಗಳನ್ನು ಹೊಂದುವುದನ್ನು ಅಂದರೆ ನಮ್ಮ ಅಣತಿಗೆ ತಕ್ಕಂತೆ ಕಾನೂನುಗಳನ್ನು ಮಾಡಿಕೊಳ್ಳುವುದನ್ನು ಅನುಮತಿಸುವುದಿಲ್ಲ ಎಂದು ತಿಳಿಸಿದ್ದಾರೆ.

### ಮಧ್ಯಪ್ರಾಚ್ಯ ಬಿಕ್ಕಟ್ಟು ಶಮನಕ್ಕೆ ಜಾಗತಿಕ ನಾಯಕರ ಚೀನಾ ಪ್ರಯಾಣ

**ಇಸ್ಲಾಮಾಬಾದ್‌ನಲ್ಲಿ ನಡೆದ ಅಮೆರಿಕಾ-ಇರಾನ್ ನಡುವಿನ ಶಾಂತಿ ಮಾತುಕತೆಗಳು ವಿಫಲವಾದ ಬೆನ್ನಲ್ಲೇ ಮಧ್ಯಪ್ರಾಚ್ಯದಲ್ಲಿ ಶಾಂತಿಯನ್ನು ನೆಲೆಸುವಂತೆ ಮಾಡುವ ನಿಟ್ಟಿನಲ್ಲಿ ಚೀನಾದತ್ತ ಪ್ರಯಾಣ ಬೆಳೆಸುತ್ತಿದ್ದಾರೆ. ಮಾತುಕತೆ ವಿಫಲವಾದ ಬೆನ್ನಲ್ಲೇ, ಯುಎಇ ಕ್ರೌನ್ ಪ್ರಿನ್ಸ್ ಶೇಖ್ ಖಾಲಿದ್ ಬಿನ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್, ರಷ್ಯಾದ ವಿದೇಶಾಂಗ ಸಚಿವ ಸೆರ್ಗೆಯ್ ಲಾವ್ರೊವ್ ಚೀನಾ ಪ್ರವಾಸ ಮಾಡಿದ್ದು, ಮಧ್ಯಪ್ರಾಚ್ಯ ಸಂಘರ್ಷದ ಕುರಿತು ಮಾತುಕತೆ ನಡೆಸಿದ್ದಾರೆ.**

### 4 ಅಂಶಗಳ ಶಾಂತಿ ಪ್ರಸ್ತಾಪ

**ಅಮೆರಿಕಾ-ಇರಾನ್ ಮಾತುಕತೆಗಳು ವಿಫಲವಾದ ಬೆನ್ನಲ್ಲೇ, ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ಉಲ್ಬಣಗೊಳ್ಳುತ್ತಿದೆ. ಈ ಮಧ್ಯೆ ಮಧ್ಯಪ್ರಾಚ್ಯದಲ್ಲಿ ಸಂಘರ್ಷವನ್ನು ಶಮನಗೊಳಿಸಲು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರನ್ನು ಯುಎಇ ಅಧ್ಯಕ್ಷ ಶೇಖ್ ಖಾಲಿದ್ ಬಿನ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಭೇಟಿ ನಡೆಸಿದ್ದಾರೆ. ಈ ಸಭೆಯಲ್ಲಿ ಪ್ರಾದೇಶಿಕವಾಗಿ ಶಾಂತಿ, ಸ್ಥಿರತೆಯನ್ನು ಬಲಪಡಿಸುವ 4 ಅಂಶಗಳ ಶಾಂತಿ ಪ್ರಸ್ತಾಪವನ್ನು ಮಂಡಿಸಿದ್ದಾರೆ.**

## ಐ-ಪ್ಯಾಕ್ ನಿರ್ದೇಶಕ ವಿನೇಶ್ ಚಾಂಡೆಲ್ ಬಂಧನ: 10 ದಿನ ಇಡಿ ಕಸ್ಟಡಿಗೆ

**ನವದೆಹಲಿ:** ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ ಐ-ಪ್ಯಾಕ್ ಸಹಸ್ಥಾಪಕ, ನಿರ್ದೇಶಕ ವಿನೇಶ್ ಚಾಂಡೆಲ್ ಅವರನ್ನು ಜಾರಿ ನಿರ್ದೇಶನಾಲಯ ಬಂಧಿಸಿದ್ದು, ದೆಹಲಿ ನ್ಯಾಯಾಲಯವು ಅವರನ್ನು 10 ದಿನಗಳ ಕಾಲ ಇಡಿ ಕಸ್ಟಡಿಗೆ ಒಪ್ಪಿಸಿದೆ.

2015ರಲ್ಲಿ ಸ್ಥಾಪನೆಯಾದ ಈ ಸಂಸ್ಥೆಯು ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಮತ್ತು ತಮಿಳುನಾಡಿನಲ್ಲಿ ಡಿಎಂಕೆ ಪಕ್ಷಗಳಿಗೆ ಚುನಾವಣಾ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿದೆ.

ಈ ರಾಜ್ಯಗಳ ವಿಧಾನಸಭಾ ಚುನಾವಣೆಗಳಿಗೆ ಕೆಲವೇ ದಿನಗಳು ಬಾಕಿ ಇರುವಾಗ ಈ ಕ್ರಮ ಕೈಗೊಳ್ಳಲಾಗಿದೆ. ವಿಚಾರಣೆಯ ನಂತರ ಚಾಂಡೆಲ್ ಅವರನ್ನು ಬಂಧಿಸಲಾಯಿತು ಎಂದು ಇಡಿ ಅಧಿಕಾರಿಗಳು ತಿಳಿಸಿದ್ದಾರೆ. ಚಾಂಡೆಲ್ ಐ-ಪ್ಯಾಕ್‌ನಲ್ಲಿ ಶೇಕಡ 33ರಷ್ಟು ಪಾಲುದಾರಿಕೆ ಹೊಂದಿದ್ದಾರೆ.

**ಏನಿದು ಪ್ರಕರಣ?:** ಮಾರ್ಚ್ 28ರಂದು ದಾಖಲಾದ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ ಅಡಿಯಲ್ಲಿ



ದಾಖಲಿಸಿರುವ ಪ್ರಕರಣ ಸಂಬಂಧ ಚಾಂಡೆಲ್ ಅವರನ್ನು ಇಡಿ ಅಧಿಕಾರಿಗಳು ಬಂಧಿಸಿದ್ದಾರೆ. ಐ-ಪ್ಯಾಕ್ ಸಂಸ್ಥೆಯು ಖಾತೆಗಳನ್ನು ತಿರುಚಿದೆ ಮತ್ತು ವಿನೇಶ್ ಚಾಂಡೆಲ್, ಪ್ರತೀಕ್ ಜೈನ್ ಹಾಗೂ ರಿಷಿ ರಾಜ್ ಸಿಂಗ್ ಅವರು ಹಣ ಅಕ್ರಮ ವರ್ಗಾವಣೆಯಲ್ಲಿ ಭಾಗಿಯಾಗಿದ್ದಾರೆ ಎಂದು ದೆಹಲಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ಈ ಪ್ರಕರಣವು ಪಶ್ಚಿಮ ಬಂಗಾಳದ ಕಲ್ಲಿದ್ದಲು ಹಗರಣದ ತನಿಖೆಗೆ ಸಂಬಂಧಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜನವರಿಯಲ್ಲಿ ಕೋಲ್ಕತ್ತದಲ್ಲಿ ಇಡಿ ದಾಳಿ ನಡೆಸಿದ ನಂತರ, ಖಂಡೇಲ್ ಅವರು ಪ್ರಮುಖ ಉದ್ಯೋಗಿಗಳ ಇ-ಮೇಲ್ ಮತ್ತು ಸೂಕ್ಷ್ಮ ಡೇಟಾವನ್ನು ಅಳಿಸಲು ಸೂಚಿಸುವ ಮೂಲಕ ಸಾಕ್ಷ್ಯ ನಾಶಪಡಿಸಲು ಯತ್ನಿಸಿದ್ದಾರೆ ಎಂದು ನ್ಯಾಯಾಲಯದ ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಟಿಎಂಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಸೇರಿದಂತೆ ಅನೇಕರು ಚಾಂಡೆಲ್ ಬಂಧನ ಖಂಡಿಸಿದ್ದಾರೆ. ಇದೇ ಜನವರಿಯಲ್ಲಿ ಕೋಲ್ಕತ್ತದ ಐ-ಪ್ಯಾಕ್ ಕಚೇರಿಯ ಮೇಲೆ ಇಡಿ ದಾಳಿ ನಡೆಸಿದಾಗ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಸ್ಥಳಕ್ಕೆ ಆಗಮಿಸಿ ಕೆಲವು ಪ್ರಮುಖ ದಾಖಲೆಗಳನ್ನು ತೆಗೆದುಕೊಂಡು ಹೋಗಿದ್ದರು, ತನಿಖೆಗೆ ಅಡ್ಡಿಪಡಿಸಿದ್ದರು ಎಂದು ಇಡಿ ಆರೋಪಿಸಿತ್ತು.

ಇದಕ್ಕೆ ಪ್ರತಿಕ್ರಿಯಿಸಿದ್ದ ಟಿಎಂಸಿ, ಇಡಿ ಸಂಸ್ಥೆಯು ಚುನಾವಣಾ ಕಾರ್ಯತಂತ್ರಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪಡೆಯಲು ಪ್ರಯತ್ನಿಸುತ್ತಿದೆ ಎಂದು ತಿರುಗೇಟು ನೀಡಿತ್ತು.

## ಅಮೆರಿಕ-ಇರಾನ್ ಮಧ್ಯೆ ಶೀಘ್ರ 2ನೇ ಹಂತದ ಮಾತುಕತೆ



**ಇಸ್ಲಾಮಾಬಾದ್:** ಮಧ್ಯಪ್ರಾಚ್ಯ, ಕೊಲ್ಲಿ ರಾಷ್ಟ್ರಗಳ ಮಧ್ಯೆ ನಡೆಯುತ್ತಿರುವ ಯುದ್ಧವನ್ನು ನಿಲ್ಲಿಸಲು ಇರಾನ್, ಅಮೆರಿಕ ಇದೀಗ 2ನೇ ಸುತ್ತಿನ ಮಾತುಕತೆಗೆ ಸಿದ್ದವಾಗಿದ್ದು, ಹೀಗಾಗಿ ಈ ವಾರದ ಅಂತ್ಯದೊಳಗೆ ಅಮೆರಿಕ, ಇರಾನ್ ಇಸ್ಲಾಮಾಬಾದ್‌ಗೆ ಮರಳಬಹುದು ಎಂದು ಮೂಲಗಳು ತಿಳಿಸಿವೆ. 'ಇಸ್ಲಾಮಾಬಾದ್‌ನಲ್ಲೇ 2ನೇ ಹಂತದ ಸಂಧಾನ ಸಭೆ ನಡೆಸಲು ಪಾಕಿಸ್ತಾನ ಕರೆ ನೀಡಿದೆ' ಎಂದು ಪಾಕ್‌ನ ಉನ್ನತ ಅಧಿಕಾರಿಗಳು ತಿಳಿಸಿದ್ದಾರೆ.

ಇದೇ ಏಪ್ರಿಲ್ 11ರಂದು ಇಸ್ಲಾಮಾಬಾದ್‌ನಲ್ಲಿ ಅಮೆರಿಕ ಮತ್ತು ಇರಾನ್ ನಿಯೋಗಗಳ ನಡುವೆ ಯುದ್ಧ ಕೊನೆಗೊಳಿಸಲು 21 ಗಂಟೆಗಳ ಮಾತುಕತೆ ನಡೆದಿತ್ತು. ಸಂಸದೀಯ ಸ್ಪೀಕರ್ ಮೊಹಮ್ಮದ್ ಬಘರ್ ಗಾಲಿಬಾಫ್ ನೇತೃತ್ವದ ಇರಾನಿನ ನಿಯೋಗವು, ಉಪಾಧ್ಯಕ್ಷ ಜೆಡಿ ವ್ಯಾನ್ಸ್, ಶ್ವೇತಭವನದ ರಾಯಭಾರಿ ಸ್ಟೀವ್ ವಿಟ್ಕಾಫ್ ಮತ್ತು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಅಳಿಯ ಜೇರೆಡ್ ಕುಶ್ನರ್ ಅವರನ್ನೊಳಗೊಂಡ ಅಮೆರಿಕ ನಿಯೋಗದ ಜೊತೆ ಮಾತುಕತೆ ನಡೆಸಿತ್ತು. ಆದರೆ, ಒಮ್ಮತಕ್ಕೆ ಬರುವಲ್ಲಿ ಈ ಸಭೆ ವಿಫಲವಾಗಿತ್ತು.

ಇದೀಗ ಮತ್ತೆ ಪಾಕ್ ಮಾತುಕತೆಗೆ ಆಹ್ವಾನಿಸಿದೆ. ಮಾತುಕತೆ ಪುನರಾರಂಭಿಸಲು ಅಮೆರಿಕ ಮತ್ತು ಇರಾನ್ ತಮ್ಮ ಪ್ರತಿನಿಧಿಗಳನ್ನು ಈ ವಾರದ ಅಂತ್ಯದೊಳಗೆ ಮತ್ತೆ ಇಸ್ಲಾಮಾಬಾದ್‌ಗೆ ಕಳುಹಿಸುವ ಸಾಧ್ಯತೆ ಇದ್ದು, ಯಾವುದೇ ನಿರ್ದಿಷ್ಟ ದಿನಾಂಕವನ್ನು ನಿಗದಿಪಡಿಸಲಾಗಿಲ್ಲ ಎಂದು ಇರಾನಿನ ಮೂಲವೊಂದು ತಿಳಿಸಿದೆ.

## ಇರಾನ್ ಬಂದರುಗಳಿಗೆ ಅಮೆರಿಕದ ನಿರ್ಬಂಧ ಅಪಾಯಕಾರಿ, ಬೇಜವಾಬ್ದಾರಿ ನಡೆ; ಚೀನಾ ಕಿಡಿ

**ಬೀಜಿಂಗ್:** ಇರಾನ್ ಬಂದರುಗಳಿಂದ ಹೊರಡುವ, ಲಂಗರು ಹಾಕುವ ಯಾವುದೇ ಹಡಗನ್ನು ಮುಳುಗಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆದರಿಕೆ ಬೆನ್ನಲ್ಲೇ ಪ್ರತಿಕ್ರಿಯಿಸಿರುವ ಚೀನಾ, ಇರಾನ್ ಬಂದರುಗಳ ಸುತ್ತ ಅಮೆರಿಕದ ನಿರ್ಬಂಧವು ಅಪಾಯಕಾರಿ ಮತ್ತು ಬೇಜವಾಬ್ದಾರಿ ವರ್ತನೆ ಎಂದು ಹೇಳಿದೆ. ಅಮೆರಿಕ, ಇರಾನ್ ನಡುವೆ ಶಾಂತಿ ಮಾತುಕತೆ ಮುರಿದುಬಿದ್ದ ಬೆನ್ನಲ್ಲೇ ಇರಾನ್ ಬಂದರುಗಳಿಗೆ ಬರುವ ಮತ್ತು ಬಂದರುಗಳಿಂದ ಹೊರಡುವ ಹಾಗೂ ಗಲ್ಫ್ ಕರಾವಳಿ ಪ್ರವೇಶಿಸುವ ಹಡಗುಗಳಿಗೆ ತಡೆ ವಿಧಿಸಲು ಟ್ರಂಪ್ ಆದೇಶಿಸಿದ್ದಾರೆ.

ಎರಡು ವಾರಗಳ ಯುದ್ಧ ವಿರಾಮ ಒಪ್ಪಂದವಿದ್ದರೂ ಮಧ್ಯಾಹ್ನದಿಂದ ಬಂದರುಗಳಿಂದ ಹಡಗು ತಡೆಗೆ ಟ್ರಂಪ್ ಆದೇಶಿಸಿದ್ದಾರೆ. ಅಮೆರಿಕವು ಮಿಲಿಟರಿ ಜಮಾವಣೆ ಹೆಚ್ಚಿಸಿದ್ದು, ತಮ್ಮ ನಿಗದಿತ ನಿರ್ಬಂಧ ಪ್ರಕ್ರಿಯೆ ಆರಂಭಿಸಿದೆ. ಇದು ಉದ್ವಿಗ್ನತೆಯನ್ನು ಹೆಚ್ಚಿಸುವ ಜೊತೆಗೆ ಈಗಾಗಲೇ ದುರ್ಬಲಗೊಂಡಿರುವ ಕದನ ವಿರಾಮ ಒಪ್ಪಂದವನ್ನು ಹಾಳು ಮಾಡುತ್ತದೆ. ಹೊರ್ಮುಜ್ ಸುರಕ್ಷತೆಗೆ ಮತ್ತಷ್ಟು ಅಪಾಯ ತಂದೊಡ್ಡುತ್ತದೆ. ಇದು ಅಪಾಯಕಾರಿ, ಬೇಜವಾಬ್ದಾರಿ ನಡೆ ಎಂದು ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರ ಗುಯೊ ಜಿಯಾಕುನ್ ಹೇಳಿದ್ದಾರೆ.

ಇರಾನ್ ಈಗಾಗಲೇ ಹೊರ್ಮುಜ್ ಜಲಸಂಧಿಯನ್ನು ಬಹುತೇಕ ಮುಚ್ಚಿದ್ದು, ಚೀನಾ ಮತ್ತು ಭಾರತದಂತಹ ಸ್ನೇಹಮಯಿ



ದೇಶಗಳ ಹಡಗುಗಳ ಸಂಚಾರಕ್ಕೆ ಅನುವು ಮಾಡಿಕೊಟ್ಟಿದೆ. ಇರಾನ್‌ನ ಆದಾಯದ ಮೂಲವಾಗಿರುವ ತೈಲ ರಫ್ತಿಗೆ ತಡೆಹಾಕುವುದು ಅಮೆರಿಕದ ಉದ್ದೇಶವಾಗಿದ್ದು, ಇರಾನ್‌ನಿಂದ ಭಾರಿ ಪ್ರಮಾಣದ ತೈಲ ಖರೀದಿಸುವ ಚೀನಾವು ಇರಾನ್ ಮೇಲೆ ಒತ್ತಡ ಹಾಕಿ ಹೊರ್ಮುಜ್ ಮುಕ್ತ ಸಂಚಾರಕ್ಕೆ ಒತ್ತಾಯಿಸಬೇಕೆಂಬುದು ಟ್ರಂಪ್ ತಂತ್ರವಾಗಿದೆ ಎಂದು ವಿಶ್ಲೇಷಕರು ತಿಳಿಸಿದ್ದಾರೆ.


ಬಂದರುಗಳಿಗೆ ಅಮೆರಿಕ ನಿರ್ಬಂಧವು ನಮ್ಮ ದೇಶದ ಸಾರ್ವಭೌಮತ್ವದ ಉಲ್ಲಂಘನೆ ಎಂದು ಅಮೆರಿಕದಲ್ಲಿರುವ ಇರಾನ್ ರಾಯಭಾರಿ ಹೇಳಿದ್ದಾರೆ. ಅಮೆರಿಕ ವರ್ತನೆ ಬಗ್ಗೆ ಪ್ರತಿಕ್ರಿಯಿಸಿದ್ದ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಸಹ ಗಲ್ಫ್, ಪಶ್ಚಿಮ ಏಷ್ಯಾ ದೇಶಗಳ ಸಾರ್ವಭೌಮತ್ವವನ್ನು ಎಲ್ಲರೂ ಗೌರವಿಸಬೇಕು ಶಾಂತಿ ಸ್ಥಾಪನೆಯ ದೃಷ್ಟಿಯಿಂದ ರಚನಾತ್ಮಕ ಪಾತ್ರ ಮುಂದುವರಿಸುತ್ತೇವೆ ಎಂದಿದ್ದರು.

## ಆಶಾ ಭೋಸ್ಲೆ ಸಾವಿನ ಸುದ್ದಿ ಮಾಡಿದ ಜಿಯೋ ನ್ಯೂಸ್‌ಗೆ ಪಾಕ್ ನೋಟೀಸ್

**ಲಾಹೋರ್:** ಸುಪ್ರಸಿದ್ಧ ಗಾಯಕಿ ಆಶಾ ಭೋಸ್ಲೆ ಅವರ ಸಾವಿನ ಸುದ್ದಿಯನ್ನು ಪ್ರಸಾರ ಮಾಡಿದ ಚಾನಲ್‌ಗೆ ಪಾಕಿಸ್ತಾನದ ಮಾಧ್ಯಮ ಕಾವಲು ಸಂಸ್ಥೆ ಶೋ-ಕಾಸ್ ನೋಟಿಸ್ ನೀಡಿದೆ. 2018 ರಿಂದ ಪಾಕಿಸ್ತಾನದಲ್ಲಿ ಭಾರತೀಯ ವಿಷಯಗಳ ಮೇಲೆ ನಿಷೇಧ ಜಾರಿಯಲ್ಲಿದೆ.

ಭೋಸ್ಲೆ ಅವರ ಸಾವಿನ ಸುದ್ದಿಯ ಜೊತೆಗೆ ಭಾರತೀಯ ವಿಷಯಗಳನ್ನು ಏಕೆ ಪ್ರಸಾರ ಮಾಡಿದೆ ಎಂಬುದರ ಕುರಿತು ವಿವರಣೆಯನ್ನು ಕೋರಿ ಪಾಕಿಸ್ತಾನ ಎಲೆಕ್ಟ್ರಾನಿಕ್ ಮಾಧ್ಯಮ ನಿಯಂತ್ರಣ ಪ್ರಾಧಿಕಾರ ಜಿಯೋ ನ್ಯೂಸ್‌ಗೆ ಶೋ-ಕಾಸ್ ನೋಟಿಸ್ ನೀಡಿದೆ. ಪ್ರಮುಖ ಸುದ್ದಿ ವಾಹಿನಿಯು ಪಾಕಿಸ್ತಾನ ಮುಸ್ಲಿಂ ಲೀಗ್-ನವಾಜ್ ಸರ್ಕಾರ ಮತ್ತು ಮಿಲಿಟರಿ ಸ್ಥಾಪನೆಗೆ ಹತ್ತಿರವಾಗಿದೆ ಎಂದು ಪರಿಗಣಿಸಲಾಗಿದೆ. ಬಹು ಅಂಗಾಂಗ ವೈಫಲ್ಯದಿಂದಾಗಿ ಭೋಸ್ಲೆ ನಿಧನರಾದರು.

ಅವರಿಗೆ 92 ವರ್ಷ.ಪ್ರತಿಭಾನ್ವಿತ ಕಲಾವಿದರ ಬಗ್ಗೆ ವರದಿ ಮಾಡುವಾಗ ಅವರ ಕೃತಿಗಳನ್ನು ಪುನರ್ವಿಮರ್ಶಿಸುವುದು ಮತ್ತು ಆಚರಿಸುವುದು ಯಾವಾಗಲೂ ವಾಡಿಕೆಯಾಗಿದೆ. ವಾಸ್ತವವಾಗಿ, ಆಶಾ ಭೋಸ್ಲೆ ಅವರ ನಿಲುವಿನ ಕಲಾವಿದೆಯಾಗಿ, ನಾವು ಅವರ ಕಾಲಾತೀತ ಮತ್ತು ಸ್ಮರಣೀಯ ಹಾಡುಗಳನ್ನು ಇನ್ನೂ ಹೆಚ್ಚಿನದನ್ನು ಹಂಚಿಕೊಳ್ಳಬೇಕಾಗಿತ್ತು. ಆದರೂ,



ಪಾಕಿಸ್ತಾನದ ಎಲೆಕ್ಟ್ರಾನಿಕ್ ಮಾಧ್ಯಮ ನಿಯಂತ್ರಕ, ಇದನ್ನು ನಿರ್ಬಂಧಿಸಲು ಆಯ್ಕೆ ಮಾಡಿದೆ, ಎಂದು ಜಿಯೋನ್ಯೂಸ್‌ನ ವ್ಯವಸ್ಥಾಪಕ ನಿರ್ದೇಶಕ ಅಜರ್ ಅಬ್ಬಾಸ್ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಜ್ಞಾನದಂತೆಯೇ ಕಲೆಯೂ ಮಾನವೀಯತೆಯ ಹಂಚಿಕೆಯ ಪರಂಪರೆಯಾಗಿದೆ ಮತ್ತು ಅದನ್ನು ಗಡಿಗಳಿಂದ ಸೀಮಿತಗೊಳಿಸಬಾರದು ಎಂದು ಅಬ್ಬಾಸ್ ಹೇಳಿದರು. ಆಶಾ ಭೋಸ್ಲೆ ಸ್ವತಃ ಪಾಕಿಸ್ತಾನದ ಪ್ರಸಿದ್ಧ ಗಾಯಕಿ ನೂರ್ ಜಹಾನ್ ಅವರನ್ನು ಮೆಚ್ಚಿಕೊಂಡರು, ಅವರನ್ನು ಅವರು ಪ್ರೀತಿಯಿಂದ ಅಕ್ಕ ಎಂದು ಕರೆದರು. ಅವರು ನುಸ್ರತ್ ಫತೇಹ್ ಅಲಿ ಖಾನ್ ಅವರೊಂದಿಗೆ ಸಹಕರಿಸಿದರು ಮತ್ತು ನಾಸಿರ್ ಕಜ್ಮಿಯಂತಹ ಮಹಾನ್ ಉರ್ದು ಕವಿಗಳ ಕಾವ್ಯಕ್ಕೆ ಜೀವ ತುಂಬಿದರು. ಯುದ್ಧ ಮತ್ತು ಸಂಘರ್ಷದ ಸಮಯದಲ್ಲಿ, ಕಲೆ ಮತ್ತು ಕಲಾವಿದರು ಬಲಿಪಶುಗಳಾಗಬಾರದು.

ಬುದ್ಧಿಜೀವಿಗಳು, ಸಂಗೀತಗಾರರು ಮತ್ತು ಸೃಷ್ಟಿಕರ್ತರು ದ್ವೇಷ ಮತ್ತು ವಿಭಜನೆಯ ವಿರುದ್ಧ ನಿಲ್ಲುವ ಧ್ವನಿಗಳಾಗಿರುತ್ತಾರೆ ಮತ್ತು ಜನರನ್ನು ಹತ್ತಿರ ತರುವವರಾಗಿದ್ದಾರೆ ಎಂದು ಅವರು ಹೇಳಿದರು.

ಭೋಸ್ಲೆ ಅವರ ಸಾವಿನ ಸುದ್ದಿಯನ್ನು ಪ್ರಸಾರ ಮಾಡುವಾಗ ಜಿಯೋನ್ಯೂಸ್ ಭಾರತೀಯ ಚಲನಚಿತ್ರಗಳ ಭಾರತೀಯ ಹಾಡುಗಳು ಮತ್ತು ದೃಶ್ಯಗಳನ್ನು ಪ್ರಸಾರ ಮಾಡುವುದು ಭಾರತೀಯ ವಿಷಯಗಳ ಪ್ರಸಾರವನ್ನು ನಿಷೇಧಿಸಿದ ಪಾಕಿಸ್ತಾನದ ಸುಪ್ರೀಂ ಕೋರ್ಟ್‌ನ ತೀರ್ಪಿನ ಉದ್ದೇಶಪೂರ್ವಕ ಉಲ್ಲಂಘನೆಯಾಗಿದೆ ಎಂದು ಹೇಳಿದೆ.

ಪೆಮ್ರಾ (ತಿದ್ದುಪಡಿ) ಕಾಯ್ದೆ, 2023 ರಿಂದ ತಿದ್ದುಪಡಿ ಮಾಡಲಾದ ಪೆಮ್ರಾ ಸುಗ್ರೀವಾಜ್ಞೆ, 2002 ರ ಸೆಕ್ಷನ್ 26, ಸೆಕ್ಷನ್ 29 ಮತ್ತು ಇತರ ಸಕ್ರಿಯಗೊಳಿಸುವ ನಿಬಂಧನೆಗಳ ಅಡಿಯಲ್ಲಿ ದಂಡ, ಅಮಾನತು ಮತ್ತು ಪರವಾನಗಿ ರದ್ದತಿಯನ್ನು ಪ್ರಾರಂಭಿಸಬಾರದು. ಪಾಕಿಸ್ತಾನ ಪೀಪಲ್ಸ್ ಪಾರ್ಟಿ ಸೆನೆಟರ್ ಶೆರ್ರಿ ರೆಹಮಾನ್, ದಯವಿಟ್ಟು, ಪೆಮ್ರಾ, ಇಲ್ಲಿ ಎಲ್ಲಾ ದೃಷ್ಟಿಕೋನಗಳನ್ನು ಕಳೆದುಕೊಳ್ಳಬೇಡಿ ಮತ್ತು ಸಾಂಸ್ಕೃತಿಕ ಪರಿವರ್ತನೆಗಳನ್ನು ಪೊಲೀಸಿಂಗ್ ಮಾಡಲು ಪ್ರಾರಂಭಿಸೋಣ ಎಂದು ಹೇಳಿದರು.

## ಮಿನಿ ನ್ಯೂಸ್

### ಭಾರತ ಇದೀಗ ವಿಶ್ವದ ಎರಡನೇ ದೊಡ್ಡ ಸೌರಶಕ್ತಿ ಮಾರುಕಟ್ಟೆಯಾಗಿ ದಾಪುಗಾಲು

• **ಉದಯವಾಹಿನಿ, ನವದೆಹಲಿ**

ಸೌರಶಕ್ತಿ ಮಾರುಕಟ್ಟೆ ವಿಚಾರದಲ್ಲಿ ಭಾರತವು ಇದೀಗ ಮಹತ್ವದ ಧಾಪುಗಾಲು ಇಟ್ಟಿದ್ದು, ಇದೇ ವರ್ಷ ಭಾರತ ವಿಶ್ವದ ಎರಡನೇ ಅತಿದೊಡ್ಡ ಸೌರಶಕ್ತಿ ಮಾರುಕಟ್ಟೆಯಾಗಿ ಬೆಳೆದಿದೆ. ಈ ವಿಷಯವನ್ನು ಇಂದು ಭಾರತೀಯ ರಾಷ್ಟ್ರೀಯ ಸೌರಶಕ್ತಿ ಒಕ್ಕೂಟ ಮಾಧ್ಯಮಗಳೊಂದಿಗೆ ಹಂಚಿಕೊಂಡಿದೆ. 2012ರಿಂದ 2023ವರೆಗೆ ಅಂದರೆ 11 ವರ್ಷಗಳಲ್ಲಿ ಭಾರತವು ಕೇವಲ 50 ಗಿಗಾ ವ್ಯಾಟ್ ಸೌರಶಕ್ತಿ ಉತ್ಪಾದನಾ ಸಾಮರ್ಥ್ಯ ಸಾಧಿಸಿತ್ತು. ಈ ಪ್ರಮಾಣ ಇದೀಗ ಅಂದರೆ 2026ಕ್ಕೆ 150 ಗಿಗಾ ವ್ಯಾಟ್‌ಗೆ ಏರಿಕೆಯಾಗಿದೆ ಎಂದು ತಿಳಿಸಿದೆ.

### ತನ್ನ ಹೋಲಿಕೆ ಇಲ್ಲ ಎಂದು ಮಗುವನ್ನು ನದಿಗೆ ಎಸೆದ ಪಾಪಿ ತಂದೆ

**ಪುಣೆ:** ಅನುಮಾನ ಅನ್ನೋದು ಮನಷ್ಯನನ್ನು ಎಂತಹ ಕೀಳುಮಟ್ಟಕ್ಕೆ ಇಳಿಸುತ್ತದೆ ಎನ್ನುವುದಕ್ಕೆ ಈ ಪ್ರಕರಣ ಸಾಕ್ಷಿಯಂತಿದೆ. ತಾನೇ ಈ ಮಗುವಿನ ತಂದೆ ಹೌದೋ ಅಲ್ಲವೋ ಎಂಬ ಅನುಮಾನದಲ್ಲಿ ಪಾಪಿ ತಂದೆಯೊಬ್ಬ ತನ್ನ ಆರು ವರ್ಷದ ಮಗನನ್ನೇ ನದಿಗೆ ಎಸೆದು ಕೊಲೆ ಮಾಡಿದ್ದಾನೆ. ಮಗು ನನಗೆ ಹುಟ್ಟಿಲ್ಲ ಎಂಬ ಅನುಮಾನದಿಂದ ತಂದೆ ತನ್ನ ಮಗುವನ್ನು ಕೃಷ್ಣಾ ನದಿಗೆ ಎಸೆದಿರುವ ಘಟನೆ ಮಹಾರಾಷ್ಟ್ರ ಮತ್ತು ಕರ್ನಾಟಕ ಗಡಿ ಭಾಗದಲ್ಲಿ ನಡೆದಿದೆ. ಮಗ ತನ್ನ ಹೋಲಿಕೆ ಇಲ್ಲ ಎಂದು ಅನುಮಾನ ಪಟ್ಟ ತಂದೆ ಡಿಎನ್‌ಎ ಪರೀಕ್ಷೆ ಮಾಡಿಸುವ ಬದಲು ಮಗನನ್ನೇ ಕೊಲೆ ಮಾಡಿ ನದಿಗೆ ಎಸೆದಿದ್ದಾನೆ.

ವಿಜಯಪುರ ಜಿಲ್ಲೆಯ ನಾಗಠಾಣ ಗ್ರಾಮದ ಮಲ್ಲಿಕಾರ್ಜುನ ಆರೇಕರಿ, ಭಾಗ್ಯಶ್ರೀ ದಂಪತಿಯ ಆರು ವರ್ಷದ ಮಗ ಸಿದ್ಧಾರ್ಥ್ ತಂದೆಯಿಂದಲೇ ಮೃತಪಟ್ಟ ಮಗುವಾಗಿದೆ. ಸುಂದರವಾಗಿದ್ದ ಆ ಮಗು ತನ್ನ ತಂದೆಯನ್ನೇ ಹೋಲುತ್ತಿಲ್ಲ ಎಂದು ಕೆಲವು ಪರಿಚಯಸ್ಥರು ಹೇಳಿದ್ದ ವಿಷಯ ಮಲ್ಲಿಕಾರ್ಜುನನ ತಲೆಯಲ್ಲಿ ವಿಷ ಬಿತ್ತಿತ್ತು. ಕಳೆದ ಒಂದೂವರೆ ವರ್ಷಗಳಿಂದ ಇದೇ ವಿಷಯಕ್ಕೆ ದಂಪತಿ ನಡುವೆ ಜಗಳ ನಡೆಯುತ್ತಿತ್ತು. ಕೊನೆಗೆ ಈ ಸಂಶಯ ಕೊಲೆಯಲ್ಲಿ ಅಂತ್ಯವಾಗಿದೆ. ಕಳೆದ ಮಾ. 16ರಂದು ಮಗನನ್ನು ಶಾಲಾ ಪ್ರವೇಶಕ್ಕಾಗಿ ಕರೆದುಕೊಂಡು ಹೋಗುವುದಾಗಿ ಹೆಂಡತಿಗೆ ಸುಳ್ಳು ಹೇಳಿದ ಮಲ್ಲಿಕಾರ್ಜುನ, ಮಗನಿಗೆ ಹೊಸ ಬಟ್ಟೆಗಳನ್ನು ತೊಡಿಸಿ ವಿಜಯಪುರದಿಂದ ಮಹಾರಾಷ್ಟ್ರದ ಕರಾಡ್‌ಗೆ ಕರೆದೊಯ್ದಿದ್ದಾನೆ. ಕರಾಡ್ ತಾಲ್ಲೂಕಿನ ವಡೋಲಿ ಭಿಕೇಶ್ವರ ಬಳಿಯ ಕೃಷ್ಣಾ ನದಿಯ ದಡಕ್ಕೆ ಮಗನನ್ನು ಕರೆದೊಯ್ದ ಆತ, ಕಿಂಚಿತ್ತೂ ದಯೆಯಿಲ್ಲದೆ ಮಗನನ್ನು ತುಂಬಿ ಹರಿಯುತ್ತಿದ್ದ ನದಿಗೆ ಎಸೆದಿದ್ದಾನೆ. ಮಗು ನೀರಿನಲ್ಲಿ ಮುಳುಗಿ ಪ್ರಾಣಬಿಟ್ಟ ನಂತರ, ಏನೂ ಗೊತ್ತಿಲ್ಲದವನಂತೆ ಮನೆಗೆ ಮರಳಿದ್ದಾನೆ. ಮಾರ್ಚ್ 18 ರಂದು ಕರಾಡ್ ಪೊಲೀಸರಿಗೆ ನದಿಯ ದಡದಲ್ಲಿ ಮಗುವಿನ ಗುರುತು ಪತ್ತೆಯಾಗದ ಶವ ಸಿಕ್ಕಿತ್ತು. ಇತ್ತ ಮಲ್ಲಿಕಾರ್ಜುನ ಮಗನನ್ನು ಹಾಸ್ಟೆಲ್‌ಗೆ ಸೇರಿಸಿದ್ದೇನೆ ಎಂದು ಹೆಂಡತಿಯನ್ನು ನಂಬಿಸಿದ್ದ. ಆದರೆ ಏಪ್ರಿಲ್ 1 ರಂದು ಮಗ ಸಿದ್ಧಾರ್ಥ್‌ನ ಹುಟ್ಟುಹಬ್ಬದ ದಿನ ಪತಿಯನ್ನು ಪದೇ ಪದೇ ಒತ್ತಾಯಿಸಿದಾಗ ಆತ ನೀಡಿದ ಅಸಂಬದ್ಧ ಉತ್ತರಗಳು ಅನುಮಾನ ಹುಟ್ಟಿಸಿದವು. ಕೂಡಲೇ ಆಕೆ ಪೊಲೀಸರಿಗೆ ನಾಪತ್ತೆ ದೂರು ನೀಡಿದ್ದರು. ಪೊಲೀಸರ ತನಿಖೆಯಲ್ಲಿ ಸತ್ಯ ಒಪ್ಪಿಕೊಂಡ ಆರೋಪಿ ಕರ್ನಾಟಕ ಮತ್ತು ಮಹಾರಾಷ್ಟ್ರ ಪೊಲೀಸರು ಜಂಟಿಯಾಗಿ ತಾಂತ್ರಿಕ ವಿಶ್ಲೇಷಣೆ ನಡೆಸಿದಾಗ, ಮಲ್ಲಿಕಾರ್ಜುನನ ಮೊಬೈಲ್ ಲೊಕೇಶನ್ ಕರಾಡ್ ಬಳಿ ಇರುವುದು ಪತ್ತೆಯಾಯಿತು. ಪೊಲೀಸರ ತೀವ್ರ ವಿಚಾರಣೆಯ ಸಂದರ್ಭದಲ್ಲಿ ಸಂಶಯದ ಕಾರಣಕ್ಕಾಗಿ ಮಗನನ್ನು ಕೊಂದಿರುವುದಾಗಿ ಒಪ್ಪಿಕೊಂಡಿದ್ದಾನೆ.

### ಆಟವಾಡುತ್ತಿದ್ದಾಗ ಕುತ್ತಿಗೆಗೆ ಸೀರೆ ಸುತ್ತಿಕೊಂಡು ಬಾಲಕಿ ಸಾವು

**ಗುರುಗಾಮ್:** ಕಿಟಕಿಯ ಗ್ರಿಲ್‌ಗೆ ಸೀರೆ ಕಟ್ಟಿಕೊಂಡು ಆಟವಾಡುತ್ತಿದ್ದಾಗ ಆಕಸಿಕವಾಗಿ ಸೀರೆ ಕತ್ತಿಗೆ ಸುತ್ತಿಕೊಂಡು ಬಿಗಿಯಾದ ಕಾರಣ 13 ವರ್ಷದ ಬಾಲಕಿ ಸಾವನ್ನಪ್ಪಿರುವ ಘಟನೆ ಗುರುಗ್ರಾಮ್‌ನಲ್ಲಿ ನಡೆದಿದೆ. ಸೆಕ್ಟರ್ 9ರ ದೇವಿಲಾಲ್ ಕಾಲೋನಿಯಲ್ಲಿರುವ ಬಾಡಿಗೆ ಮನೆಯಲ್ಲಿ ತಂದೆತಾಯಿ ವಾಸವಿದ್ದ ಬಾಲಕಿ ಖಾಸಗಿ ಶಾಲೆಯಲ್ಲಿ 7 ನೇ ತರಗತಿ ಓದುತ್ತಿದ್ದಳು. ನಿನ್ನೆ ಸಂಜೆ ಸಹೋದರಿಯರೊಂದಿಗೆ ಮನೆಯಲ್ಲಿ ಆಟವಾಡುತ್ತಿದ್ದಾಗ ಈ ಘಟನೆ ನಡೆದಿದೆ. ತಾಯಿಯ ಸೀರೆಯನ್ನು ಕಿಟಕಿ ಕಟ್ಟಿ ಅದನ್ನು ನೂಲುತ್ತಾ ಆಟವಾಡುತ್ತಿದ್ದಳು. ಈ ವೇಳೆ ಸೀರೆಯ ಒಂದು ಭಾಗ ಆಕಸಿಕವಾಗಿ ಅವಳ ಕುತ್ತಿಗೆಗೆ ಸುತ್ತಿಕೊಂಡು ಪರಿಣಾಮ ಆಕೆ ತಿರುಗುತ್ತಲೇ ಸೀರೆ ಮತ್ತಷ್ಟು ಬಿಗಿದುಕೊಂಡು ಉಸಿರುಗಟ್ಟಿ ಸಾವನ್ನಪ್ಪಿದ್ದಾಳೆ. ಜೊತೆಯಲ್ಲಿದ್ದ ಸಹೋದರಿಯರಿಗೆ ಏನಾಯಿತು ಎಂಬುದು ತಕ್ಷಣ ಅರ್ಥವಾಗಿರಲಿಲ್ಲ. ಆಟವಾಡುತ್ತಿದ್ದ ಮಕ್ಕಳು ಮೌನವಾದಾಗ ಮನೆಯಲ್ಲಿದ್ದ ಪೋಷಕರು ನೋಡಿದಾಗ ಕುತ್ತಿಗೆಗೆ ಸೀರೆ ಸುತ್ತಿಕೊಂಡ ಬಾಲಕಿಗೆ ಪ್ರಜ್ಞಾಹೀನಳಾಗಿರುವುದು ಕಂಡುಬಂದಿದೆ. ಕೂಡಲೇ ಆಕೆಯನ್ನು ಸೆಕ್ಟರ್ 10ಎ ನಲ್ಲಿರುವ ಸಿವಿಲ್ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಅಲ್ಲಿ ವೈದ್ಯರು ಆಕೆ ಸತ್ತಿರುವುದನ್ನು ದೃಢಪಡಿಸಿದ್ದಾರೆ. ಗುರುಗ್ರಾಮ ಪೊಲೀಸರ ಸಾರ್ವಜನಿಕ ಸಂಪರ್ಕ ಅಧಿಕಾರಿ ಸಂದೀಪ್ ತುರಾನ್, ಇದೊಂದು ವಿಲಕ್ಷಣ ಅಪಘಾತ ಎಂದು ಹೇಳಿದ್ದಾರೆ.

ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದು, ತನಿಖೆಯ ಸಂದರ್ಭದಲ್ಲಿ ಯಾವುದೇ ತಪ್ಪಿಲ್ಲ ಎಂದು ಕಂಡುಬಂದಿದೆ ಎಂದು ಅವರು ಹೇಳಿದರು. ತಂದೆಯ ಹೇಳಿಕೆಯ ಆಧಾರದ ಮೇಲೆ, ಸೆಕ್ಟರ್ 9 ಎ ಪೊಲೀಸ್ ಠಾಣೆಯಲ್ಲಿ ಭಾರತೀಯ ನಾಗರಿಕ್ ಸುರಕ್ಷಾ ಸಂಹಿತಾದ ಸೆಕ್ಷನ್ 194 ರ ಅಡಿಯಲ್ಲಿ ವಿಚಾರಣೆಯನ್ನು ಪ್ರಾರಂಭಿಸಲಾಗಿದೆ ಎಂದು ಅವರು ಹೇಳಿದರು. ಮಂಗಳವಾರ ಶವಪರೀಕ್ಷೆಯ ನಂತರ ಶವವನ್ನು ಹಸ್ತಾಂತರಿಸಲಾಗುವುದು.

# ಲೋಕಸಭಾ ಕ್ಷೇತ್ರಗಳನ್ನ 543 ರಿಂದ 850ಕ್ಕೆ ಹೆಚ್ಚಳಕ್ಕೆ ಕೇಂದ್ರ ಸರ್ಕಾರ ಸಿದ್ಧತೆ

### ಬಹುನಿರೀಕ್ಷಿತ ಮಹಿಳಾ ಮೀಸಲಾತಿ ಕಾಯ್ದೆ ಜಾರಿ ಹಾಗೂ ಲೋಕಸಭಾ ಕ್ಷೇತ್ರಗಳ ಮರು ವಿಂಗಡಣೆ ಪ್ರಕ್ರಿಯೆಗೆ ವೇದಿಕೆ

**ಹೊಸದಿಲ್ಲಿ:** ಕೇಂದ್ರ ಸರ್ಕಾರವು ಲೋಕಸಭೆಯ ಸದಸ್ಯರ ಸಂಖ್ಯಾಬಲವನ್ನು ಪ್ರಸ್ತುತ ಇರುವ 543 ರಿಂದ 850 ಕ್ಕೆ ಹೆಚ್ಚಿಸಲು ಸಿದ್ಧತೆ ನಡೆಸಿದ್ದು, ಈ ಮೂಲಕ ಬಹುನಿರೀಕ್ಷಿತ ಮಹಿಳಾ ಮೀಸಲಾತಿ ಕಾಯ್ದೆ ಜಾರಿ ಹಾಗೂ ಲೋಕಸಭಾ ಕ್ಷೇತ್ರಗಳ ಮರು ವಿಂಗಡಣೆ ಪ್ರಕ್ರಿಯೆಗೆ ವೇದಿಕೆ ಸಿದ್ಧಪಡಿಸುತ್ತಿದೆ. ಸಂವಿಧಾನ ತಿದ್ದುಪಡಿ ತರುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಸಂವಿಧಾನ (131ನೇ ತಿದ್ದುಪಡಿ) ಮಸೂದೆ, 2026 ರ ಕರಡು ಪ್ರತಿಯನ್ನು ಸಂಸದರೊಂದಿಗೆ ಹಂಚಿಕೊಂಡಿದೆ. ಏಪ್ರಿಲ್ 16 ರಿಂದ ಕರೆಯಲಾಗುವ ಸಂಸತ್ತಿನ 3 ದಿನಗಳ ವಿಶೇಷ ಅಧಿವೇಶನದಲ್ಲಿ ಈ ಮಹತ್ವದ ಸಂವಿಧಾನ ತಿದ್ದುಪಡಿ ಮಸೂದೆಗಳನ್ನು ಅಂಗೀಕರಿಸಲು ಸರ್ಕಾರ ಯೋಜನೆ ರೂಪಿಸಿದೆ.

**ವಿಶೇಷ ಅಧಿವೇಶನದಲ್ಲಿ ತಿದ್ದುಪಡಿ ಮಸೂದೆ**



### ಒಳ ಮೀಸಲಾತಿಗೆ ಬೇಡಿಕೆ

ಹಿಂದುಳಿದ ವರ್ಗದ ಮಹಿಳೆಯರಿಗೆ ಮೀಸಲಾತಿಯೊಳಗೆ ಮೀಸಲಾತಿ ನೀಡಬೇಕು ಎಂಬ ದೀರ್ಘಕಾಲದ ಬೇಡಿಕೆಯ ಬಗ್ಗೆ ಸರ್ಕಾರ ಸ್ಪಷ್ಟನೆ ನೀಡಬೇಕೆಂದು ವಿಪಕ್ಷಗಳು ಆಗ್ರಹಿಸಲಿವೆ. **ಖರ್ಗೆ ನಿವಾಸದಲ್ಲಿ ಸಭೆ:** ಸರ್ಕಾರದ ಈ ಮಸೂದೆಯನ್ನು ಎದುರಿಸುವ ಕಾರ್ಯತಂತ್ರ ರೂಪಿಸಲು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನವದೆಹಲಿಯ ನಿವಾಸದಲ್ಲಿ ವಿಪಕ್ಷ ನಾಯಕರ ಮಹತ್ವದ ಸಭೆ ನಿಗದಿಯಾಗಿದೆ. ಚುನಾವಣೆ ಎದುರಿಸುತ್ತಿರುವ ಪಶ್ಚಿಮ ಬಂಗಾಳ, ತಮಿಳುನಾಡಿನ ಆಡಳಿತಾರೂಢ ಟಿಎಂಸಿ, ಡಿಎಂಕೆ ನಾಯಕರು ಸೇರಿದಂತೆ ಹಲವರು ಇದರಲ್ಲಿ ಭಾಗವಹಿಸಲಿದ್ದಾರೆ.

### ವಿರೋಧ ಪಕ್ಷಗಳ ತೀವ್ರ ಆಕ್ಷೇಪ ಏನು

ಕೇಂದ್ರದ ಈ ನಡೆಯ ವಿರುದ್ಧ ವಿರೋಧ ಪಕ್ಷಗಳ 'ಇಂಡಿಯಾ' ಮೈತ್ರಿಕೂಟ ತೀವ್ರ ಆಕ್ಷೇಪ ವ್ಯಕ್ತಪಡಿಸಲು ಸಜ್ಜಾಗಿದೆ. 2011ರ ಹಳೆಯ ಜನಗಣತಿ ದತ್ತಾಂಶವನ್ನು ಬಳಸಿಕೊಂಡು ಕ್ಷೇತ್ರ ಮರುವಿಂಗಡಣೆ ಮಾಡುವುದಕ್ಕೆ ಕಾಂಗ್ರೆಸ್, ಎಎಪಿ, ಆರ್ ಜೆ ಡಿ ಮತ್ತು ಡಿಎಂಕೆ ಸೇರಿದಂತೆ ಹಲವು ಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಲಿವೆ. ಇದರ ಬದಲು ಇತ್ತೀಚಿನ ಅಂದರೆ 2021ರ (ನವೀಕರಿಸಿದ) ಜನಗಣತಿ ಅಂಕಿಅಂಶಗಳ ಆಧಾರದ ಮೇಲೆಯೇ ಪ್ರಕ್ರಿಯೆ ನಡೆಯಬೇಕು ಎಂದು ಅವು ಪಟ್ಟು ಹಿಡಿಯಲಿವೆ.

### ಮಸೂದೆಯ ಪ್ರಮುಖ ಅಂಶಗಳು ಏನು?

**850ಕ್ಕೆ ಸಂಖ್ಯಾಬಲ ಏರಿಕೆ:** ಕರಡು ಮಸೂದೆಯ ಪ್ರಸ್ತಾವನೆಯ ಪ್ರಕಾರ, ಲೋಕಸಭೆಯಲ್ಲಿ ರಾಜ್ಯಗಳಿಂದ ಆಯ್ಕೆಯಾಗುವ ಸದಸ್ಯರ ಗರಿಷ್ಠ ಸಂಖ್ಯೆಯನ್ನು 815ಕ್ಕೆ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಂದ ಆಯ್ಕೆಯಾಗುವವರ ಸಂಖ್ಯೆಯನ್ನು ಗರಿಷ್ಠ 35ಕ್ಕೆ ನಿಗದಿಪಡಿಸಲಾಗಿದೆ. ಇದರಿಂದ ಒಟ್ಟು ಸಂಖ್ಯಾಬಲ 850ಕ್ಕೆ ಏರಿಕೆಯಾಗಲಿದೆ.

**ಮಹಿಳಾ ಮೀಸಲಾತಿ:** ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33 ರಷ್ಟು ಮೀಸಲಾತಿ ಒದಗಿಸುವ ನಿಬಂಧನೆಗಳನ್ನು ತಿದ್ದುಪಡಿ ಮಾಡಲು ಈ ವಿಶೇಷ ಅಧಿವೇಶನ ಕರೆಯಲಾಗುತ್ತಿದೆ. ಕ್ಷೇತ್ರಗಳ ಸಂಖ್ಯೆ ಹೆಚ್ಚಾಗುವುದರಿಂದ ಮೀಸಲಾತಿ ಜಾರಿ ಪ್ರಕ್ರಿಯೆ ಸುಗಮವಾಗಲಿದೆ ಎಂಬುದು ಸರ್ಕಾರದ ಲೆಕ್ಕಾಚಾರ.

**2011ರ ಜನಗಣತಿ ಆಧಾರ:** ಮಸೂದೆಯಲ್ಲಿ ಉಲ್ಲೇಖಿಸಿರುವಂತೆ 2011ರ ಜನಗಣತಿ ಅಂಕಿ-ಅಂಶಗಳ ಆಧಾರದ ಮೇಲೆಯೇ ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಕಾರ್ಯ ನಡೆಯಲಿದೆ.

**2029ರ ಲೋಕಸಭಾ ಚುನಾವಣೆ ವೇಳೆ ಜಾರಿ:** ಈ ಕ್ಷೇತ್ರ ಮರುವಿಂಗಡಣೆ ಮತ್ತು ಹೊಸ ಸಂಖ್ಯಾಬಲದ ಬದಲಾವಣೆಗಳು 2029ರ ಲೋಕಸಭಾ ಚುನಾವಣೆ ವೇಳೆಗೆ ಜಾರಿಗೆ ಬರುವ ನಿರೀಕ್ಷೆಯಿದೆ.



ಭಾರತೀಯ ಚಿತ್ರರಂಗದ ಇತಿಹಾಸದಲ್ಲೇ ಹಿಂದೆಂದೂ ಕಾಣದಂತಹ ಭರ್ಜರಿ ದಾಖಲೆಯೊಂದು ಇದೀಗ ಸೃಷ್ಟಿಯಾಗಿದೆ. ರಣವೀರ್ ಸಿಂಗ್ ನಟನೆಯ 'ಧುರಂಧರ್' ಚಲನಚಿತ್ರ ಸರಣಿಯು ಜಾಗತಿಕ ಗಲ್ಲಾಪೆಟ್ಟಿಗೆಯಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿದೆ. ಈ ಸರಣಿಯ ಎರಡು ಭಾಗಗಳ ಒಟ್ಟು ಗಳಿಕೆ ಇದೀಗ 3000 ಕೋಟಿ ರೂಪಾಯಿಗಳ ಗಡಿಯನ್ನು ದಾಟಿದೆ. ಇಂತಹ ಅಸಾಧಾರಣ ಸಾಧನೆ ಮಾಡಿದ ಮೊದಲ ಭಾರತೀಯ ಫ್ರಾಂಚೈಸಿ ಎಂಬ ಹೆಗ್ಗಳಿಕೆಗೆ ಇದು ಪಾತ್ರವಾಗಿದೆ. ಜಿಯೋ ಸ್ಟುಡಿಯೋಸ್ ಮತ್ತು ಬಿ62 ಸ್ಟುಡಿಯೋಸ್ ಬ್ಯಾನರ್ ಅಡಿಯಲ್ಲಿ ಮೂಡಿಬಂದ ಈ ಚಿತ್ರವನ್ನು ಆದಿತ್ಯ ಧರ್ ನಿರ್ದೇಶಿಸಿದ್ದಾರೆ.



# ಧುರಂಧರ್ ಅಬ್ಬರಕ್ಕೆ ನಡುಗಿದ ಬಾಕ್ಸ್ ಆಫೀಸ್

**3000 ಕೋಟಿ ಕೊಳ್ಳೆ**

ಈ ಐತಿಹಾಸಿಕ ಪಯಣ ಶುರುವಾಗಿದ್ದು ಸರಣಿಯ ಮೊದಲ ಭಾಗ 'ಧುರಂಧರ್' ಚಿತ್ರದೊಂದಿಗೆ. ಭಾರಿ ನಿರೀಕ್ಷೆಗಳ ನಡುವೆ ಬಿಡುಗಡೆಯಾದ ಈ ಸಿನಿಮಾ ವಿಶ್ವದಾದ್ಯಂತ ಬಾಕ್ಸ್ ಆಫೀಸ್‌ನಲ್ಲಿ 1000 ಕೋಟಿ ಗಡಿ ದಾಟಿ ಬ್ಲಾಕ್ ಬಸ್ಟರ್ ಎನಿಸಿಕೊಂಡಿತು. ಈ ಚಿತ್ರವು ಭಾರತೀಯ ಚಿತ್ರರಂಗದಲ್ಲಿ ಒಂದು ಬಲಿಷ್ಠವಾದ ಬ್ರ್ಯಾಂಡ್ ಕ್ರಿಯೇಟ್ ಮಾಡಲು ಭದ್ರವಾದ ಅಡಿಪಾಯ ಹಾಕಿಕೊಟ್ಟಿತು.

ಜನಸಾಮಾನ್ಯರಿಂದ ಹಿಡಿದು ವಿಮರ್ಶಕರವರೆಗೆ ಎಲ್ಲರೂ ಈ ಚಿತ್ರದ ಮೇಕಿಂಗ್‌ಗೆ ಮಾರುಹೋಗಿದ್ದರು. ಮೊದಲ ಭಾಗ ರಿಲೀಸ್ ಆದ ಕೇವಲ ನಾಲ್ಕು ತಿಂಗಳಲ್ಲೇ ಬಂದ 'ಧುರಂಧರ್ 2: ದಿ ರಿವೆಂಜ್' ಚಿತ್ರ ಇಡೀ ಗೇಮ್ ಅನ್ನೇ ಚೇಂಜ್ ಮಾಡಿತು. ರಣವೀರ್ ಸಿಂಗ್ ಅವರ ಪವರ್‌ಫುಲ್ ಆಕ್ಷನ್ ಪ್ರೇಕ್ಷಕರನ್ನು ಅಕ್ಷರಶಃ ಹುಚ್ಚೆಬ್ಬಿಸಿತು. ಈ ಎರಡನೇ ಭಾಗವೊಂದೇ ಜಾಗತಿಕವಾಗಿ 1700 ಕೋಟಿಗೂ ಅಧಿಕ ಹಣ ಲೂಟಿ ಮಾಡಿದೆ. ಹಲವಾರು ದೇಶಗಳಲ್ಲಿ ಇಂದಿಗೂ ಈ ಚಿತ್ರದ ಓಟ ಮುಂದುವರಿದಿದ್ದು, ಅತೀ ಹೆಚ್ಚು ಗಳಿಕೆ ಮಾಡಿದ ಹಿಂದಿ ಸಿನಿಮಾ ಎಂಬ ಕೀರ್ತಿಗೂ ಪಾತ್ರವಾಗಿದೆ.

# ಮೋಹನ್‌ಲಾಲ್ ಚಿತ್ರಕ್ಕೆ ಶಾಕ್

## ಕೇವಲ 3.5 ಲಕ್ಷ ಗಳಿಸಿದ ಸಿನಿಮಾ



ಮೋಹನ್‌ಲಾಲ್ ಅವರ 'ದೃಶ್ಯಂ 2' ಸಿನಿಮಾ ಥಿಯೇಟರ್‌ಗಳಲ್ಲಿ ಕೇವಲ 3.5 ಲಕ್ಷ ಗಳಿಸಿ ಆಘಾತ ನೀಡಿದೆ. ಒಟಿಟಿಯಲ್ಲಿ ಈಗಾಗಲೇ ಲಭ್ಯವಿದ್ದದ್ದು, ಕೇರಳ ಚುನಾವಣೆ ಮತ್ತು ಪ್ರೇಕ್ಷಕರ ಕೊರತೆ ಇದಕ್ಕೆ ಪ್ರಮುಖ ಕಾರಣ. 'ದೃಶ್ಯಂ 3' ಬಗ್ಗೆ ಭಾರಿ ನಿರೀಕ್ಷೆಯಿದ್ದು, ನಿರ್ದೇಶಕ ಜೀತು ಜೋಸೆಫ್ ಇದು ಥ್ರಿಲ್ಲರ್ ಅಲ್ಲ, ಜಾರ್ಜ್‌ಕುಟ್ಟಿ ಕುಟುಂಬದ ಕಥೆ ಎಂದು ಹೇಳಿ ಅಚ್ಚರಿ ಮೂಡಿಸಿದ್ದಾರೆ.

ಮೋಹನ್‌ಲಾಲ್ ಅವರು ಮಲಯಾಳಂ ಚಿತ್ರರಂಗದಲ್ಲಿ ಸಾಕಷ್ಟು ಹೆಸರು ಮಾಡಿದ್ದಾರೆ. ಅವರ ಸಿನಿಮಾಗಳು ಕೋಟಿ ಕೋಟಿ ಬಾಚಿಕೊಳ್ಳುತ್ತವೆ. ಆದರೆ, ಈಗ ಕೇರಳದಲ್ಲಿ ರಿಲೀಸ್ ಆಗಿರುವ ಸಿನಿಮಾ ಒಂದು ಕೇವಲ 3.5 ಲಕ್ಷ ರೂಪಾಯಿ ಗಳಿಕೆ ಮಾಡಿದೆ. ಇದು ಇಡೀ ಚಿತ್ರತಂಡಕ್ಕೆ ಶಾಕಿಂಗ್ ಎನಿಸಿದೆ. ಸಿನಿಮಾದ ಸ್ಥಿತಿ ಈ ಮಟ್ಟ ತಲುಪಲು ಒಂದು ಪ್ರಮುಖ ಕಾರಣ ಇದೆ. ಈ ರೀತಿ ಹೀನಾಯ ಕಲೆಕ್ಷನ್ ಮಾಡಿದ ಚಿತ್ರ 'ದೃಶ್ಯಂ 2'. ಜೀತು ಜೋಸೆಫ್ ನಿರ್ದೇಶನದ ಈ ಚಿತ್ರ ಕೊವಿಡ್ ಸಮಯದಲ್ಲಿ ಒಟಿಟಿಯಲ್ಲಿ ನೇರವಾಗಿ ತೆರೆಗೆ ಬಂತು. ಈಗ ಈ ಸರಣಿಯ 3ನೇ ಪಾರ್ಟ್ ಮೇ 21ರಂದು ತೆರೆಗೆ ಬರುತ್ತಿದೆ. ಇದಕ್ಕಾಗಿ ಅಭಿಮಾನಿಗಳು ಕಾದಿದ್ದಾರೆ. ಅದಕ್ಕೂ ಮೊದಲು 'ದೃಶ್ಯಂ 2' ಚಿತ್ರವನ್ನು ಥಿಯೇಟರ್‌ನಲ್ಲಿ ರಿಲೀಸ್ ಮಾಡುವ ಆಲೋಚನೆ ತಂಡಕ್ಕೆ ಇತ್ತು. ಅದನ್ನು ಅನುಷ್ಠಾನಕ್ಕೂ ತರಲಾಯಿತು. ಆದರೆ, 'ದೃಶ್ಯಂ 2' ಚಿತ್ರ ಗಳಿಕೆ ಮಾಡಿದ್ದು ಕೇವಲ 3.5 ಲಕ್ಷ ರೂಪಾಯಿ ಮಾತ್ರ. ಇದು ತಂಡಕ್ಕೆ ಹೊರೆಯಾಗಿದೆ. ಕೇರಳದಲ್ಲಿ ಚುನಾವಣೆ ಕಾವು ಜೋರಾಗಿತ್ತು. ಅಲ್ಲದೆ, ಸಿನಿಮಾ ಈಗಾಗಲೇ ಒಟಿಟಿಯಲ್ಲಿ ಲಭ್ಯವಿದ್ದು, ಅನೇಕರು ಇದನ್ನು ವೀಕ್ಷಿಸಿದ್ದಾರೆ. ಈ ಎಲ್ಲಾ ಕಾರಣದಿಂದ ಜನರು ಸಿನಿಮಾನ ಥಿಯೇಟರ್‌ನಲ್ಲಿ ನೋಡಿಲ್ಲ. 'ದೃಶ್ಯಂ 3' ಚಿತ್ರದ ಬಗ್ಗೆ ಸದ್ಯ ನಿರೀಕ್ಷೆ ಇದೆ. ಈ ಚಿತ್ರ ಥಿಯೇಟರ್‌ನಲ್ಲಿ ರಿಲೀಸ್ ಆಗಿ ಗೆಲ್ಲುವ ನಿರೀಕ್ಷೆ ಇದೆ. 'ದೃಶ್ಯಂ' ಹಾಗೂ 'ದೃಶ್ಯಂ 2' ಚಿತ್ರಗಳು ಪ್ರತಿ ಹಂತದಲ್ಲೂ ಟ್ವಿಸ್ಟ್‌ಗಳು ಇದ್ದವು. ಎರಡನೇ ಪಾರ್ಟ್ ಕೊನೆಯಲ್ಲಿ ಮೂರನೇ ಪಾರ್ಟ್‌ಗೆ ಕನೆಕ್ಷನ್ ನೀಡಲಾಗಿತ್ತು. ಈ ಸಿನಿಮಾದಲ್ಲೂ ಥ್ರಿಲ್ಲರ್ ಇರಲಿದೆ ಎಂದು ಅನೇಕರು ಊಹಿಸಿದ್ದರು. ಆದರೆ, ಇದು ಥ್ರಿಲ್ಲರ್ ಸಿನಿಮಾ ಅಲ್ಲ ಎಂದು ನಿರ್ದೇಶಕರು ಹೇಳಿದ್ದರು.

# ಮತ್ತೆ ತೆಲುಗಿಗೆ ಆಲಿಯಾ

ಹಿಂದಿ ಮಾತ್ರವಲ್ಲದೆ, ತೆಲುಗಿನ 'ಆರ್‌ಆರ್‌ಆರ್' ಸಿನಿಮಾನಲ್ಲಿ ಆಲಿಯಾ ಭಟ್ ನಟಿಸಿದ್ದರು. ಆ ಸಿನಿಮಾ ಭಾರಿ ದೊಡ್ಡ ಹಿಟ್ ಎನಿಸಿಕೊಂಡಿದೆ. ಇದೀಗ ಹಲವು ವರ್ಷಗಳ ಬಳಿಕ ಆಲಿಯಾ ಭಟ್ ಮತ್ತೊಮ್ಮೆ ತೆಲುಗು ಸಿನಿಮಾನಲ್ಲಿ ನಟಿಸಲಿದ್ದಾರೆ. ಅಂದಹಾಗೆ ಈ ಬಾರಿಯೂ ಅತಿಥಿ ಪಾತ್ರದಲ್ಲೇ. ನಟನೆಗೆ ರಾಷ್ಟ್ರಪ್ರಶಸ್ತಿ ಪಡೆದಿರುವ ಆಲಿಯಾ ಭಟ್ , ಬಾಲಿವುಡ್‌ನ ಸೂಪರ್ ಸ್ಟಾರ್ ನಟಿ. ಹಿಂದಿ ಚಿತ್ರರಂಗದ ಸ್ಟಾರ್ ನಟಿ ಆಗಿರುವ ಆಲಿಯಾ ಭಟ್, ಬಾಲಿವುಡ್‌ನ ಬಲು ದುಬಾರಿ ನಟಿ ಸಹ ಹೌದು.


ಹಿಂದಿ ಮಾತ್ರವಲ್ಲದೆ, ತೆಲುಗಿನ 'ಆರ್‌ಆರ್‌ಆರ್' ಸಿನಿಮಾನಲ್ಲಿಯೂ ಆಲಿಯಾ ಭಟ್ ನಟಿಸಿದ್ದು, ಆ ಸಿನಿಮಾ ಭಾರಿ ದೊಡ್ಡ ಹಿಟ್ ಎನಿಸಿಕೊಂಡಿದೆ. ಇದೀಗ ಹಲವು ವರ್ಷಗಳ ಬಳಿಕ ಆಲಿಯಾ ಭಟ್ ಮತ್ತೊಮ್ಮೆ ತೆಲುಗು ಸಿನಿಮಾನಲ್ಲಿ ನಟಿಸಲಿದ್ದಾರೆ. ಅಂದಹಾಗೆ ಈ ಬಾರಿಯೂ ಅತಿಥಿ ಪಾತ್ರದಲ್ಲೇ. ಹಿಂದೆ 'ಸೀತಾ' ಪಾತ್ರದ ಮೂಲಕ ದಕ್ಷಿಣ ಭಾರತದ ಪ್ರೇಕ್ಷಕರ ಮನ ಗೆದ್ದಿದ್ದ ಆಲಿಯಾ, ಈಗ ಮತ್ತೊಂದು ಭಾರಿ ಬಜೆಟ್‌ನ ಪ್ಯಾನ್ ಇಂಡಿಯಾ ಚಿತ್ರದ ಭಾಗವಾಗಲಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ.

ಜೂನಿಯರ್ ಎನ್‌ಟಿಆರ್ ಮತ್ತು ಕೆಜಿಎಫ್ ಖ್ಯಾತಿಯ ನಿರ್ದೇಶಕ ಪ್ರಶಾಂತ್ ನೀಲ್ ಕಾಂಬಿನೇಷನ್‌ನಲ್ಲಿ ಮೂಡಿಬರುತ್ತಿರುವ ಈ ಚಿತ್ರಕ್ಕೆ ಸದ್ಯ 'ಡ್ರ್ಯಾಗನ್' ಸಿನಿಮಾದ ಚಿತ್ರೀಕರಣ ಚಾಲ್ತಿಯಲ್ಲಿದ್ದು, ಈ ಸಿನಿಮಾದ ಪ್ರಮುಖ ಪಾತ್ರವೊಂದರಲ್ಲಿ ಆಲಿಯಾ ಭಟ್ ನಟಿಸಲಿದ್ದಾರೆ ಎನ್ನಲಾಗುತ್ತಿದೆ.

'ಡ್ರ್ಯಾಗನ್' ಸಿನಿಮಾದ ನಾಯಕಿಯಾಗಿ ರುಕ್ಮಿಣಿ ವಸಂತ್ ನಟಿಸುತ್ತಿದ್ದಾರೆ. ಆದರೆ ಈ ಸಿನಿಮಾನಲ್ಲಿ ಜೂ ಎನ್‌ಟಿಆರ್ ಅವರದ್ದು ದ್ವಿಪಾತ್ರ ಎನ್ನಲಾಗುತ್ತಿದ್ದು, ಜೂ ಎನ್‌ಟಿಆರ್ ಅವರ ಒಂದು ಪಾತ್ರದ ನಾಯಕಿಯಾಗಿ ಆಲಿಯಾ ನಟಿಸಲಿದ್ದಾರೆ ಎಂಬ ಮಾತುಗಳು ಕೇಳಿ ಬರುತ್ತಿವೆ.

# ರಜನೀಕಾಂತ್ ಸಿನಿಮಾ

## ಮೂರನೇ ಬಾರಿ ನಿರ್ದೇಶಕ ಬದಲು



ರಜನೀಕಾಂತ್ ಪ್ರಸ್ತುತ 'ಜೈಲರ್ 2' ಸಿನಿಮಾನಲ್ಲಿ ನಟಿಸುತ್ತಿದ್ದಾರೆ. ಅದಾದ ಬಳಿಕ ಕಮಲ್ ಹಾಸನ್ ಜೊತೆಗೆ ಹೊಸದೊಂದು ಸಿನಿಮಾನಲ್ಲಿ ನಟಿಸಲಿದ್ದಾರೆ. ಅದಾದ ಬಳಿಕ ಅವರ 173ನೇ ಸಿನಿಮಾ ಸೆಟ್ಟೇರಲಿಕ್ಕಿದೆ. ಈಗ ಸಮಸ್ಯೆ ಆಗಿರುವುದು ಇದೇ ಸಿನಿಮಾಕ್ಕೆ. ಈಗಾಗಲೇ ಎರಡು ನಿರ್ದೇಶಕರನ್ನು ಬದಲಾಯಿಸಲಾಗಿತ್ತು.

ಈಗ ಮೂರನೇ ನಿರ್ದೇಶಕರೂ ಸಹ ಸಿನಿಮಾದಿಂದ ಹೊರನಡೆದಿದ್ದಾರೆ. ರಜನೀಕಾಂತ್ ಸಿನಿಮಾ ನಿರ್ಮಿಸಲು, ನಿರ್ದೇಶಿಸಲು ಜನ ಸಾಲು ಗಟ್ಟಿ ನಿಂತಿದ್ದಾರೆ. ಆದರೆ ಯಾಕೋ ರಜನೀಕಾಂತ್ ಅವರ 173ನೇ ಸಿನಿಮಾವನ್ನು ಕಮಲ್ ಹಾಸನ್ ನಿರ್ಮಾಣ ಮಾಡಲಿದ್ದು, ಸಿನಿಮಾಕ್ಕೆ ಮೊದಲು ಸುಂದರ್ ಸಿ ಅವರನ್ನು ನಿರ್ದೇಶಕರನ್ನಾಗಿ ಆಯ್ಕೆ ಮಾಡಲಾಗಿತ್ತು. ಆದರೆ ಖುದ್ದು ಸುಂದರ್ ಅವರು ಸಿನಿಮಾದಿಂದ ಹೊರನಡೆದರು. ಬಳಿಕ ಇದೇ ಸಿನಿಮಾವನ್ನು 'ಡಾನ್' ಸಿನಿಮಾ ನಿರ್ದೇಶಿಸಿದ್ದ ಸಿಬಿಲ್ ಚಕ್ರವರ್ತಿ ನಿರ್ದೇಶಿಸಲಿದ್ದಾರೆ ಎನ್ನಲಾಯ್ತು. ಸಿನಿಮಾದ ಪ್ರೀ ಪ್ರೊಡಕ್ಷನ್ ಸಹ ಶುರು ಆಗಿತ್ತು. ಆದರೆ ಅವರೂ ಸಹ ಸಿನಿಮಾದಿಂದ ಹೊರ ನಡೆದಿದ್ದಾರೆ. ಸಿಬಿಲ್ ಚಕ್ರವರ್ತಿ, ಚಿತ್ರತಂಡದ ಜೊತೆಗೆ ಭಿನ್ನಾಭಿಪ್ರಾಯದ ಕಾರಣದಿಂದ ಸಿನಿಮಾದಿಂದ ಹೊರ ನಡೆದಿದ್ದು, ಅವರ ಎಕ್ಸಿಟ್ ಬಳಿಕ ಸಿನಿಮಾಕ್ಕೆ ಅಶ್ವತ್ ಮಾರಿಮುತ್ತು ನಿರ್ದೇಶಕರಾಗಿ ಆಯ್ಕೆ ಆಗಿದ್ದಾರೆ. ಪ್ರದೀಪ್ ರಂಗನಾಥ್ ನಟಿಸಿದ್ದ ಸೂಪರ್ ಹಿಟ್ ಸಿನಿಮಾ 'ಡ್ರ್ಯಾಗನ್' ನಿರ್ದೇಶಿಸಿದ್ದ ಅಶ್ವತ್ಥ್ ಅವರನ್ನು ಕಮಲ್ ಹಾಸನ್ ಅವರು ಈ ಸಿನಿಮಾಕ್ಕೆ ಆಯ್ಕೆ ಮಾಡಿದ್ದರು. ಆದರೆ ಈಗ ಹರಿದಾಡುತ್ತಿರುವ ಸುದ್ದಿಯಂತೆ ಅಶ್ವತ್ಥ್ ಅವರೂ ಸಹ ಸಿನಿಮಾದಿಂದ ಹೊರ ನಡೆದಿದ್ದಾರೆ.

ಅಶ್ವತ್ಥ್ ಅವರು ತೆಲುಗು ಸಿನಿಮಾ ಒಂದನ್ನು ಒಪ್ಪಿಕೊಂಡಿದ್ದು, ಆ ಸಿನಿಮಾದ ನಿರ್ದೇಶನದ ಬಳಿಕವಷ್ಟೆ ರಜನೀಕಾಂತ್ ಮತ್ತು ಕಮಲ್ ಹಾಸನ್ ಅವರ ಸಿನಿಮಾ ನಿರ್ದೇಶಿಸಬೇಕಿದೆ. ಆದರೆ ನಿರ್ಮಾಣ ಸಂಸ್ಥೆ ಈಗಲೇ ಸಿನಿಮಾ ಶುರು ಮಾಡುವ ಉಮೇದಿನಲ್ಲಿರುವ ಕಾರಣ ಅಶ್ವತ್ಥ್ ಸಹ ಹೊರನಡೆದಿದ್ದಾರೆ ಎನ್ನಲಾಗುತ್ತಿದೆ. ಅಲ್ಲಿಗೆ ಮೂವರು ನಿರ್ದೇಶಕರು ರಜನೀಕಾಂತ್ ಅವರ ಸಿನಿಮಾದಿಂದ ಹೊರನಡೆದಂತಾಗಿದೆ.



# ಪಟಾಕಿ ಕಿಚನ್ ಆರಂಭಿಸಿದ ರಕ್ಷಿತಾ



ರಕ್ಷಿತಾ ಶೆಟ್ಟಿ ಅವರು 'ಪಟಾಕಿ ಕಿಚನ್' ಪ್ರಾರಂಭಿಸಿದ್ದಾರೆ. ಬಿಗ್ ಬಾಸ್ ಖ್ಯಾತಿಯ ರಕ್ಷಿತಾ, ಯೂಟ್ಯೂಬರ್ ಆಗಿ ಜನಪ್ರಿಯರಾಗಿದ್ದರು. ಹಳ್ಳಿಯಲ್ಲಿ ಆರಂಭವಾಗಿರುವ ಈ ಕಿಚನ್‌ಗೆ ಬಿಗ್ ಬಾಸ್ ಗೆಳೆಯ ರಘು ಚಾಲನೆ ನೀಡಿದ್ದಾರೆ. ಮೊದಲ ದಿನ ರಘು ಏಡಿ ಫ್ರೀ ರೋಸ್ಟ್ ತಯಾರಿಸಿದ್ದಾರೆ. ಇದು ರಕ್ಷಿತಾ ಅವರ ಅಡುಗೆ ಕಾಯಕಕ್ಕೆ ಹೊಸ ಆಯಾಮ ನೀಡಿದೆ.

ರಕ್ಷಿತಾ ಶೆಟ್ಟಿ ಅವರು ಬಿಗ್ ಬಾಸ್ ಮೂಲಕ ಸಾಕಷ್ಟು ಜನಪ್ರಿಯತೆ ಗಳಿಸಿದರು. ಬಿಗ್ ಬಾಸ್ ಮನೆಯಲ್ಲಿ ಅವರಿಗೆ ರಘು ಜೊತೆ ಒಳ್ಳೆಯ ಬಾಂಧವ್ಯ ಬೆಳೆಯಿತು. ಈ ಬಾಂಧವ್ಯ ಬಿಗ್ ಬಾಸ್ ಮುಗಿದ ಬಳಿಕವೂ ಮುಂದುವರಿದಿದೆ. ಈಗ ರಕ್ಷಿತಾ ಶೆಟ್ಟಿ ಅವರು ಹೊಸ ಹೆಜ್ಜೆ ಇಟ್ಟಿದ್ದಾರೆ. ಅವರು 'ಪಟಾಕಿ ಕಿಚನ್' ಆರಂಭಿಸಿದ್ದಾರೆ. ಹಳ್ಳಿಯಲ್ಲಿ ಈ ಕಿಚನ್ ನಿರ್ಮಿಸಲಾಗಿದ್ದು, ಇದರಲ್ಲಿ ರಕ್ಷಿತಾ ಶೆಟ್ಟಿ ಅವರು ಅಡುಗೆ ಮಾಡಲಿದ್ದಾರೆ. ರಕ್ಷಿತಾ ಶೆಟ್ಟಿ ಅವರು ಮೂಲತಃ ಯೂಟ್ಯೂಬರ್. ಅಡುಗೆ ವಿಡಿಯೋ ಮಾಡುತ್ತಿದ್ದ ಅವರು, ಭಿನ್ನ ಮಾತಿನ ಶೈಲಿಯಲ್ಲಿ ಗಮನ ಸೆಳೆದರು.

ಅವರು ಸೋಶಿಯಲ್ ಮೀಡಿಯಾದಲ್ಲಿ ಸಾಕಷ್ಟು ಹೆಸರು ಮಾಡಿದರು. ಈ ಕಾರಣಕ್ಕೆ ಅವರಿಗೆ ಬಿಗ್ ಬಾಸ್‌ನಲ್ಲಿ ಅವಕಾಶ ಸಿಕ್ಕಿತು. ಅವರು ಈ ವೇದಿಕೆಯನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಿಕೊಂಡರು. ರಕ್ಷಿತಾ ಶೆಟ್ಟಿ ಅವರು ಬಿಗ್ ಬಾಸ್ ರನ್ನರ್ ಅಪ್ ಕೂಡ ಆದರು. ಈಗ ತಮ್ಮ ಯೂಟ್ಯೂಬ್ ಕಾಯಕ ಮುಂದುವರಿಸಿದ್ದಾರೆ.

ಬಿಗ್ ಬಾಸ್ ಮನೆಯಲ್ಲಿದ್ದಾಗ ಪಟಾಕಿ ರಕ್ಷಿತಾ ಎಂಬ ಬಿರುದು ಅವರಿಗೆ ಸಿಕ್ಕಿತ್ತು. ಇದನ್ನು ಮುಂದುವರಿಸಿಕೊಂಡು ಹೋಗಲು ಅವರು ನಿರ್ಧರಿಸಿದ್ದಾರೆ.

ಈ ಕಾರಣಕ್ಕೆ ಅವರು ತಮ್ಮ ಕಿಚನ್‌ಗೆ 'ಪಟಾಕಿ ಕಿಚನ್' ಎಂದು ನಾಮಕರಣ ಮಾಡಿದ್ದರು. ಇದನ್ನು ಉದ್ಘಾಟಿಸಲು ರಘು ಅವರು ಬೆಂಗಳೂರಿನಿಂದ ಮಂಗಳೂರಿಗೆ ತೆರಳಿದ್ದರು. ರಿಬ್ಬನ್ ಕಟ್ ಮಾಡಿ ಕಿಚನ್ ಉದ್ಘಾಟನೆ ಮಾಡಲಾಗಿದೆ. ಮಣ್ಣಿನ ಹೂಜಿಯಲ್ಲಿ ನೀರನ್ನು ಇಡಲಾಗಿದೆ. ಅಲ್ಲಿನ ಗೋಡೆಯ ಮೇಲೆ ರಕ್ಷಿತಾ ಫೋಟೋ ಇದ್ದು, ಅದಕ್ಕೆ ಹಲವು ಕೈಗಳಿವೆ. ಪಟಾಕಿ ಕಿಚನ್ ಅಲ್ಲಿ ಮೊದಲ ದಿನ ಏಡಿ ಫ್ರೀ ರೋಸ್ಟ್‌ನ ರಘು ಮಾಡಿದ್ದಾರೆ. ರಘು ಅವರು ಅಡುಗೆ ಮಾಡುವುದನ್ನು ತುಂಬಾನೇ ಇಷ್ಟಪಡುತ್ತಾರೆ. ಈ ಕಾರಣಕ್ಕೆ 'ಪಟಾಕಿ ಕಿಚನ್' ಅಲ್ಲಿ ಮೊದಲ ದಿನ ರಘು ಅಡುಗೆ ಮಾಡಿದ್ದಾರೆ.

# ಬೌಲಿಂಗ್ ನೀಡುವುದು ಅಪಾಯಕಾರಿ ಜಡೇಜಾಗೆ ಓವರ್ ನೀಡದ ಪರಾಗ್..!



ಇಂಡಿಯನ್ ಪ್ರೀಮಿಯರ್ ಲೀಗ್‌ನ 21ನೇ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ತಂಡ ಸೋಲನುಭವಿಸಿದೆ. ಹೈದರಾಬಾದ್‌ನ ರಾಜೀವ್ ಗಾಂಧಿ ಇಂಟರ್‌ನ್ಯಾಷನಲ್ ಸ್ಟೇಡಿಯಂನಲ್ಲಿ ನಡೆದ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧದ ಈ ಪಂದ್ಯದಲ್ಲಿ ಟಾಸ್ ಗೆದ್ದ ಆರ್‌ಆರ್ ತಂಡದ ನಾಯಕ ರಿಯಾನ್ ಪರಾಗ್ ಬೌಲಿಂಗ್ ಆಯ್ದುಕೊಂಡಿದ್ದರು.

ಅದರಂತೆ ಮೊದಲು ಬ್ಯಾಟ್ ಮಾಡಿದ ಎಸ್‌ಆರ್‌ಹೆಚ್ ತಂಡವು ಭರ್ಜರಿ ಬ್ಯಾಟಿಂಗ್ ಪ್ರದರ್ಶಿಸಿತು. ಅದರಲ್ಲೂ ನಾಯಕ ಇಶಾನ್ ಕಿಶನ್ 44 ಎಸೆತಗಳಲ್ಲಿ 91 ರನ್ ಬಾರಿಸಿದರೆ, ಅನುಭವಿ ದಾಂಡಿಗ ಹೆನ್ರಿಕ್ ಕ್ಲಾಸೆನ್ 26 ಎಸೆತಗಳಲ್ಲಿ 40 ರನ್ ಚಚ್ಚಿದರು. ಈ ಇಬ್ಬರು ಬ್ಯಾಟರ್‌ಗಳ ಸಿಡಿಲಬ್ಬರದ ಹೊರತಾಗಿಯೂ ರಿಯಾನ್ ಪರಾಗ್ ಅನುಭವಿ ಸ್ಪಿನ್ ಆಲ್‌ರೌಂಡರ್ ರವೀಂದ್ರ ಜಡೇಜಾಗೆ ಚೆಂಡು ನೀಡಿರಲಿಲ್ಲ ಎಂಬುದೇ ಅಚ್ಚರಿ.

ಅಂದರೆ ಸನ್ ರೈಸರ್ಸ್ ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ರವೀಂದ್ರ ಜಡೇಜಾ ಒಂದೇ ಒಂದು ಓವರ್ ಎಸೆದಿರಲಿಲ್ಲ. ಇತ್ತ ಎಸ್‌ಆರ್‌ಹೆಚ್ ಬ್ಯಾಟರ್‌ಗಳು ಅಬ್ಬರಿಸುತ್ತಿದ್ದರೂ ರಿಯಾನ್ ಪರಾಗ್, ಜಡೇಜಾಗೆ ಓವರ್ ನೀಡಿಲ್ಲ ಏಕೆ ಎಂಬ ಪ್ರಶ್ನೆಯೊಂದು ಹುಟ್ಟಿಕೊಂಡಿದೆ. ಈ ಪ್ರಶ್ನೆಗೆ ಖುದ್ದು ರಿಯಾನ್ ಪರಾಗ್ ಸ್ಪಷ್ಟನೆ ನೀಡಿದ್ದಾರೆ. ಸನ್‌ರೈಸರ್ಸ್ ಹೈದರಾಬಾದ್ ಪರ ಇಶಾನ್ ಕಿಶನ್ ಭರ್ಜರಿ ಬ್ಯಾಟಿಂಗ್ ಪ್ರದರ್ಶಿಸುತ್ತಿದ್ದರು. ಇತ್ತ ಇಶಾನ್ ಎಡಗೈ ಬ್ಯಾಟರ್ ಆಗಿರುವುದರಿಂದ, ಎಡಗೈ ಸ್ಪಿನ್ನರ್ ಆದ ರವೀಂದ್ರ ಜಡೇಜಾ ಅವರಿಗೆ ಬೌಲಿಂಗ್ ನೀಡುವುದು ಅಪಾಯಕಾರಿ ಎಂದು ಭಾವಿಸಿದೆ. ಹೀಗಾಗಿ ಜಡೇಜಾಗೆ ಓವರ್ ನೀಡಿ ರನ್ ಬಿಟ್ಟುಕೊಡಲು ನಾನು ಬಯಸಲಿಲ್ಲ ಎಂದು ರಿಯಾನ್ ಪರಾಗ್ ಹೇಳಿದ್ದಾರೆ.

ಅಚ್ಚರಿಯ ವಿಷಯವೆಂದರೆ, ರವೀಂದ್ರ ಜಡೇಜಾ ಅವರಿಗೆ ಬೌಲಿಂಗ್ ನೀಡುವ ಬದಲು ರಿಯಾನ್ ಪರಾಗ್ ಅವರೇ ಒಂದು ಓವರ್ ಬೌಲಿಂಗ್ ಮಾಡಿದ್ದಾರೆ. ಅಷ್ಟೇ ಅಲ್ಲದೆ ರವಿ ಬಿಷ್ಣೋಯ್ ಅವರಿಗೆ ಹೆಚ್ಚಿನ ಜವಾಬ್ದಾರಿ ನೀಡಿದ್ದಾರೆ.

ಇವೆಲ್ಲವೂ ಕೇವಲ ಒಂದು 'ಕ್ಷಣಿಕ ನಿರ್ಧಾರ' ಆಗಿತ್ತು ಎಂದು ರಿಯಾನ್ ತನ್ನ ನಡೆಯನ್ನು ಸಮರ್ಥಿಸಿಕೊಂಡಿದ್ದಾರೆ. ಇನ್ನು ಹೈದರಾಬಾದ್‌ನ ಪಿಚ್ ಸಂಪೂರ್ಣವಾಗಿ ಬ್ಯಾಟಿಂಗ್‌ಗೆ ಪೂರಕವಾಗಿತ್ತು. ಸ್ಪಿನ್ನರ್‌ಗಳಿಗೆ ಹೆಚ್ಚಿನ ತಿರುವು ಸಿಗುತ್ತಿರಲಿಲ್ಲ. ಇಂತಹ 'ಬೆಲ್ಟರ್' ಪಿಚ್‌ನಲ್ಲಿ ಜಡೇಜಾ ಅವರ ವೇಗದ ಸ್ಪಿನ್ ಹೆಚ್ಚು ಎಫೆಕ್ಟಿವ್ ಆಗದಿರಬಹುದು ಎಂಬ ಭಯ ಟೀಮ್ ಮ್ಯಾನೇಜ್‌ಮೆಂಟ್‌ನಲ್ಲಿತ್ತು. ಹೀಗಾಗಿ ಅವರನ್ನು ಬೌಲಿಂಗ್‌ನಿಂದ ಹೊರಗಿಡಲಾಗಿದೆ ಎಂಬ ಮಾತುಗಳು ಕೂಡ ಕೇಳಿ ಬಂದಿವೆ. ''ವಿಶ್ವದ ಶ್ರೇಷ್ಠ ಆಲ್-ರೌಂಡರ್ ಒಬ್ಬರು ತಂಡದಲ್ಲಿದ್ದಾಗ, ಎದುರಾಳಿಗಳು 200ಕ್ಕೂ ಹೆಚ್ಚು ರನ್ ಗಳಿಸುತ್ತಿದ್ದರೂ ಅವರಿಗೆ ಬೌಲಿಂಗ್ ನೀಡದಿರುವುದು ದೊಡ್ಡ ತಪ್ಪು,'' ಎಂದು ಶ್ರೀಕಾಂತ್ ಅಭಿಪ್ರಾಯಪಟ್ಟಿದ್ದಾರೆ.

**ಬ್ಯಾಟಿಂಗ್‌ನಲ್ಲಿ ಮಿಂಚಿದ 'ಜಡ್ಡು'**

ಬೌಲಿಂಗ್‌ನಲ್ಲಿ ಅವಕಾಶ ಸಿಗದಿದ್ದರೂ, ಬ್ಯಾಟಿಂಗ್‌ನಲ್ಲಿ ರವೀಂದ್ರ ಜಡೇಜಾ ತಮ್ಮ ತಾಕತ್ತು ಪ್ರದರ್ಶಿಸಿದರು. ಕೇವಲ 32 ಎಸೆತಗಳಲ್ಲಿ 45 ರನ್ ಸಿಡಿಸುವ ಮೂಲಕ ರಾಜಸ್ಥಾನ್ ರಾಯಲ್ಸ್ ತಂಡವನ್ನು ಗೆಲುವಿನ ಹತ್ತಿರ ತರಲು ಪ್ರಯತ್ನಿಸಿದರು. ಆದರೆ ತಂಡ ಅಂತಿಮವಾಗಿ ಗುರಿ ತಲುಪಲು ವಿಫಲವಾಯಿತು. ಇದೀಗ ರಾಜಸ್ಥಾನ್ ರಾಯಲ್ಸ್ ತಂಡದ ಸೋಲಿಗೆ ನಾಯಕ ರಿಯಾನ್ ಪರಾಗ್ ತೆಗೆದುಕೊಂಡ ನಿರ್ಧಾರವೇ ಕಾರಣ ಎನ್ನಲಾಗುತ್ತಿದೆ. ಅಂದರೆ ಅನುಭವಿ ಆಟಗಾರನಾಗಿ ರವೀಂದ್ರ ಜಡೇಜಾ ಅವರನ್ನು ಬಳಸಿಕೊಳ್ಳದೇ ಇರುವುದರಿಂದ ಸನ್‌ರೈಸರ್ಸ್ ಹೈದರಾಬಾದ್ ತಂಡ 216 ರನ್‌ಗಳ ಬೃಹತ್ ಮೊತ್ತ ಪೇರಿಸಲು ಸಾಧ್ಯವಾಯಿತು.

ಈ ಬೃಹತ್ ಮೊತ್ತವನ್ನು ಬೆನ್ನತ್ತಿದ ರಾಜಸ್ಥಾನ್ ರಾಯಲ್ಸ್ ತಂಡವು 19 ಓವರ್‌ಗಳಲ್ಲಿ 159 ರನ್‌ಗಳಿಸಿ ಆಲೌಟ್ ಆಗುವ ಮೂಲಕ 57 ರನ್‌ಗಳಿಂದ ಸೋಲೊಪ್ಪಿಕೊಂಡಿದೆ.

ಈ ಗೆಲುವಿನೊಂದಿಗೆ ಸನ್‌ರೈಸರ್ಸ್ ಹೈದರಾಬಾದ್ ತಂಡವು ಅಂಕ ಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೇರಿದೆ.

# ಕೆಕೆಆರ್ ಆಟಗಾರ 2 ವರ್ಷ ಬ್ಯಾನ್..!

ಕ್ರಿಕೆಟ್ ಲೋಕದ ಎರಡು ಲೀಗ್‌ಗಳ ನಡುವಿನ ಸಂಘರ್ಷ ಈಗ ಝಿಂಬಾಬ್ವೆಯ ವೇಗಿ ಬ್ಲೆಸ್ಸಿಂಗ್ ಮುಝುರಬಾನಿ ಅವರ ವೃತ್ತಿಜೀವನದ ಮೇಲೆ ಪರಿಣಾಮ ಬೀರಿದೆ. ಪಾಕಿಸ್ತಾನ್ ಸೂಪರ್ ಲೀಗ್ ಒಪ್ಪಂದವನ್ನು ಧಿಕ್ಕರಿಸಿ, ಐಪಿಎಲ್‌ನಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವನ್ನು ಪ್ರತಿನಿಧಿಸಲು ನಿರ್ಧರಿಸಿದ ಮುಝುರಬಾನಿ ವಿರುದ್ಧ ಪಾಕಿಸ್ತಾನ ಕ್ರಿಕೆಟ್ ಮಂಡಳಿ ಕಠಿಣ ಕ್ರಮ ಕೈಗೊಂಡಿದೆ.

ಇಂಡಿಯನ್ ಪ್ರೀಮಿಯರ್ ಲೀಗ್ ಆಡಲು ಪಾಕಿಸ್ತಾನ್ ಸೂಪರ್ ಲೀಗ್ ಒಪ್ಪಂದವನ್ನು ಅರ್ಧದಲ್ಲೇ ಕೈಬಿಟ್ಟ ಝಿಂಬಾಬ್ವೆಯ ವೇಗಿ ಬ್ಲೆಸ್ಸಿಂಗ್ ಮುಝುರಬಾನಿ ಅವರಿಗೆ ಪಾಕಿಸ್ತಾನ್ ಕ್ರಿಕೆಟ್ ಮಂಡಳಿ ಬಿಗ್ ಶಾಕ್ ನೀಡಿದೆ. ವೃತ್ತಿಪರ ಬದ್ಧತೆಯನ್ನು ಉಲ್ಲಂಘಿಸಿದ ಕಾರಣಕ್ಕಾಗಿ ಮುಝುರಬಾನಿ ಮೇಲೆ ಮುಂದಿನ ಎರಡು ಆವೃತ್ತಿಗಳ ಪಿಎಸ್‌ಎಲ್‌ನಲ್ಲಿ ಆಡದಂತೆ ನಿಷೇಧ ಹೇರಲಾಗಿದೆ. ಪಿಎಸ್‌ಎಲ್ 2026ರ ಆವೃತ್ತಿಯಲ್ಲಿ ಆಡಲು ಮುಝುರಬಾನಿ ಅವರು ಇಸ್ಲಾಮಾಬಾದ್ ಯುನೈಟೆಡ್ ತಂಡದೊಂದಿಗೆ ಸುಮಾರು 1.1 ಕೋಟಿ ರೂ. ಮೊತ್ತದ ಒಪ್ಪಂದ ಮಾಡಿಕೊಂಡಿದ್ದರು.

ಆದರೆ, ಲೀಗ್ ಆರಂಭಕ್ಕೆ ಕೆಲವೇ ದಿನಗಳು ಬಾಕಿ ಇರುವಾಗ ಕೋಲ್ಕತ್ತಾ ನೈಟ್ ರೈಡರ್ಸ್ ತಂಡದಿಂದ ಬಂದ ಆಕರ್ಷಕ ಆಫರ್ ಒಪ್ಪಿಕೊಂಡ ಮುಝುರಬಾನಿ, ಪಾಕಿಸ್ತಾನಕ್ಕೆ ಹೋಗುವ ಬದಲು ಭಾರತಕ್ಕೆ ಆಗಮಿಸಿದ್ದರು.

ಬಾಂಗ್ಲಾದೇಶದ ಮುಸ್ತಫಿಝುರ್ ರೆಹಮಾನ್ ಅವರ ಬದಲಿಗೆ ಕೆಕೆಆರ್ ತಂಡ ಸೇರಿಕೊಂಡ ಮುಝುರಬಾನಿ ಅವರ ಈ ನಡೆಯಿಂದ ಕೆರಳಿದ ಪಾಕಿಸ್ತಾನ್ ಕ್ರಿಕೆಟ್ ಬೋರ್ಡ್ ಈಗ ಶಿಸ್ತು ಕ್ರಮ ಕೈಗೊಂಡಿದೆ. ಹೀಗಾಗಿ ಮುಂದಿನ 2 ವರ್ಷ ಪಾಕಿಸ್ತಾನ್ ಸೂಪರ್ ಲೀಗ್‌ನಲ್ಲಿ ಬ್ಲೆಸ್ಸಿಂಗ್ ಮುಝುರಬಾನಿಗೆ ಅವಕಾಶ ಸಿಗುವುದಿಲ್ಲ. ಯಾವುದೇ ಆಟಗಾರ ಒಪ್ಪಂದಕ್ಕೆ ಸಹಿ ಹಾಕಿದ ಮೇಲೆ ಅದನ್ನು ಗೌರವಿಸಬೇಕು. ಕೊನೆಯ ಕ್ಷಣದಲ್ಲಿ ಲೀಗ್‌ನಿಂದ ಹಿಂದೆ ಸರಿಯುವುದು ಟೂರ್ನಿಯ ವಿಶ್ವಾಸಾರ್ಹತೆ ಮತ್ತು ಫ್ರಾಂಚೈಸಿಗಳ ನಂಬಿಕೆಗೆ ಧಕ್ಕೆ ತರುತ್ತದೆ. ಹೀಗಾಗಿ ಮುಝುರಬಾನಿ ಅವರಿಗೆ ಮುಂದಿನ ಎರಡು ವರ್ಷಗಳ ಕಾಲ ಪಿಎಸ್‌ಎಲ್‌ನಲ್ಲಿ ಆಡಲು ಅವಕಾಶ ನೀಡುವುದಿಲ್ಲ ಎಂದು ಪಾಕ್ ಕ್ರಿಕೆಟ್ ಮಂಡಳಿ ತಿಳಿಸಿದೆ.



# ವೈಭವ್ ಟೀಮ್ ಇಂಡಿಯಾ ಎಂಟ್ರಿಗೆ ಡೇಟ್ ಫಿಕ್ಸ್!

## 15 ವರ್ಷದ ಬಾಲಕನಿಗೆ ಗುಡ್ ನ್ಯೂಸ್ ಕೊಟ್ಟ ಬಿಸಿಸಿಐ

2026ರ ಐಪಿಎಲ್ ಋತುವಿನಲ್ಲಿ ರಾಜಸ್ಥಾನ ರಾಯಲ್ಸ್ ಪರ ಸ್ಫೋಟಕ ಬ್ಯಾಟಿಂಗ್ ಮೂಲಕ ಅದ್ಭುತ ಪ್ರದರ್ಶನ ನೀಡುತ್ತಿರುವ 15 ವರ್ಷದ ಯುವಕ ವೈಭವ್ ಸೂರ್ಯವಂಶಿ ಶೀಘ್ರದಲ್ಲೇ ಟೀಮ್ ಇಂಡಿಯಾ ಜೆರ್ಸಿ ಧರಿಸಲಿದ್ದಾರೆ. ಲೇಟೆಸ್ಟ್ ವರದಿಗಳ ಪ್ರಕಾರ, ಜೂನ್‌ನಲ್ಲಿ ನಡೆಯಲಿರುವ ಐರ್ಲೆಂಡ್ ಪ್ರವಾಸಕ್ಕೆ ವೈಭವ್ ಸೂರ್ಯವಂಶಿ ಆಯ್ಕೆಯಾಗುವ ಸಾಧ್ಯತೆಯಿದೆ. ಈ ಪ್ರವಾಸದ ಸಮಯದಲ್ಲಿ ಸೂರ್ಯವಂಶಿ ಪಾದಾರ್ಪಣೆ ಮಾಡಿದರೆ, ಭಾರತೀಯ ರಾಷ್ಟ್ರೀಯ ತಂಡವನ್ನು ಪ್ರತಿನಿಧಿಸುವ ಅತ್ಯಂತ ಕಿರಿಯ ಆಟಗಾರ ಎಂಬ ಇತಿಹಾಸ ನಿರ್ಮಿಸಲಿದ್ದಾರೆ. ಆಯ್ಕೆದಾರರು ಈಗಾಗಲೇ ವೈಭವ್ ಸೂರ್ಯವಂಶಿ ಅವರ ಹೆಸರನ್ನು ಶಾರ್ಟ್‌ಲಿಸ್ಟ್ ಮಾಡಿದ್ದಾರೆ ಎಂದು ಬಿಸಿಸಿಐ ಮೂಲಗಳು ದೃಢಪಡಿಸಿವೆ.



**ಐಪಿಎಲ್‌ನಲ್ಲಿ ಸೂರ್ಯವಂಶಿ ರನ್‌ಗಳ ಸುನಾಮಿ**

**ವೈಭವ್ ಪದಾರ್ಪಣೆ ಯಾವಾಗ:** ಭಾರತ ಮತ್ತು ಐರ್ಲೆಂಡ್ ನಡುವಿನ ಎರಡು ಪಂದ್ಯಗಳ ಟಿ20 ಸರಣಿಯಲ್ಲಿ ವೈಭವ್ ಸೂರ್ಯವಂಶಿಗೆ ಅವಕಾಶ ಸಿಗಬಹುದು ಎನ್ನಲಾಗುತ್ತಿದೆ. ಈ ಪಂದ್ಯಗಳು ಜೂನ್ 26 ಮತ್ತು 28 ರಂದು ಬೆಲ್‌ಫಾಸ್ಟ್‌ನ ಸಿವಿಲ್ ಸರ್ವಿಸ್ ಕ್ರಿಕೆಟ್ ಕ್ಲಬ್ ಮೈದಾನದಲ್ಲಿ ನಡೆಯಲಿವೆ. ಈ ಸರಣಿಯು ಭಾರತದ ಇಂಗ್ಲೆಂಡ್ ಪ್ರವಾಸಕ್ಕೆ ಸ್ವಲ್ಪ ಮೊದಲು ನಡೆಯಲಿದೆ. ಐಪಿಎಲ್‌ನಲ್ಲಿ ವೈಭವ್ ಪ್ರದರ್ಶಿಸಿರುವ ಅಸಾಧಾರಣ ಪ್ರತಿಭೆಯನ್ನು ಗುರುತಿಸಿ, ಆಯ್ಕೆದಾರರು ಅವರಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಅವಕಾಶ ನೀಡಲು ನಿರ್ಧರಿಸಿದ್ದಾರೆ.

ಕಳೆದ ವರ್ಷ ಐಪಿಎಲ್‌ಗೆ ಪದಾರ್ಪಣೆ ಮಾಡಿದ್ದ ವೈಭವ್ ಸೂರ್ಯವಂಶಿ ತಮ್ಮ 2ನೇ ಪಂದ್ಯದಲ್ಲೇ 35 ಎಸೆತಗಳಲ್ಲಿ ಶತಕ ಸಿಡಿಸಿ ಕ್ರಿಕೆಟ್ ಜಗತ್ತನ್ನ ತಮ್ಮತ್ತ ತಿರುಗಿಸಿದ್ದರು. ಈ ವರ್ಷ 5 ಪಂದ್ಯಗಳಲ್ಲಿ 200 ರನ್ನಗಳಿಸಿ 3ನೇ ಗರಿಷ್ಠ ಸ್ಕೋರರ್ ಆಗಿದ್ದಾರೆ. ಇದರಲ್ಲಿ 2 ಅರ್ಧಶತಕಗಳು ಸೇರಿವೆ. ಒಟ್ಟಾರೆ 12 ಪಂದ್ಯಗಳಲ್ಲಿ 452 ರನ್‌ಗಳನ್ನು ಗಳಿಸಿದ್ದಾರೆ. 37.66ರ ಸರಾಸರಿ ಹಾಗೂ 228.28 ರ ಸ್ಟ್ರೈಕ್ ರೇಟ್ ಹೊಂದಿರುವುದು ಗಮನಾರ್ಹ.

ಅಂಡರ್ 19 ವಿಶ್ವಕಪ್ ಹೀರೋ ಈ ವರ್ಷದ ಐಪಿಎಲ್‌ನಲ್ಲಿ ಜಸ್ಪ್ರೀತ್ ಬುಮ್ರಾ ಅವರಂತಹ ವಿಶ್ವ ದರ್ಜೆಯ ಬೌಲರ್ ವಿರುದ್ಧವೇ ತಾವೆದುರಿಸಿದ ಎದುರಿಸಿದ ಮೊದಲ ಎಸೆತದಲ್ಲೇ ಸಿಕ್ಸ್ ಬಾರಿಸಿದ್ದರು. ವಿಶ್ವದ ಟಾಪ್ ಬೌಲರ್‌ಗಳಲ್ಲಿ ಒಬ್ಬರಾದ ಜೋಶ್ ಹ್ಯಾಜಲ್‌ವುಡ್‌ನಂತಹ ವಿದೇಶಿ ವೇಗಿಗಳ ಮೇಲೆ ತಮ್ಮ ಪ್ರಾಬಲ್ಯವನ್ನು ಸಾಧಿಸಿದ್ದಾರೆ. ಹಾಗಾಗಿ ಆದಷ್ಟು ಬೇಗ ಅವರನ್ನ ಭಾರತ ತಂಡಕ್ಕೆ ಆಯ್ಕೆ ಮಾಡಬೇಕೆಂಬ ಕೂಗು ಕೇಳಿಬರುತ್ತಿದೆ.

**ಜಿಂಬಾಬ್ವೆ ಪ್ರವಾಸಕ್ಕೂ ಆಯ್ಕೆ:** ಒಂದು ವೇಳೆ ಐರ್ಲೆಂಡ್ ಪ್ರವಾಸದಲ್ಲಿ ಮಿಂಚಿದರೆ, ಜುಲೈ ತಿಂಗಳಲ್ಲಿ ನಡೆಯಲಿರುವ ಜಿಂಬಾಬ್ವೆ ವಿರುದ್ಧದ ಮೂರು ಪಂದ್ಯಗಳಿಗೆ ಆಯ್ಕೆಯಾಗಬಹುದು ಎಂದು ಮೂಲಗಳು ತಿಳಿಸಿವೆ. ಜಿಂಬಾಬ್ವೆ ವಿರುದ್ಧದ ಸರಣಿ ಜುಲೈ 23 ರಿಂದ 26ರವರೆಗೆ ನಡೆಯಲಿದೆ.

ಈಗಾಗಲೇ ಬಿಸಿಸಿಐ ಖಜಾಂಚಿ ಹಾಗೂ ಐಪಿಎಲ್ ಅಧ್ಯಕ್ಷ ಅರುಣ್ ಧುಮಾಲ್ ವೈಭವ್ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದ್ದು, ಆದಷ್ಟು ಬೇಗ ಆತನ್ನನ ಸೀನಿಯರ್ ತಂಡಕ್ಕೆ ಆಯ್ಕೆ ಮಾಡಬೇಕು. ಭಾರತ ತಂಡಕ್ಕಾಗಿ ಪದಾರ್ಪಣೆ ಮಾಡಿದ ಅತ್ಯಂತ ಕಿರಿಯ ಆಟಗಾರ ಎಂಬ ದಾಖಲೆಗೆ ವೈಭವ್ ಸೂರ್ಯವಂಶಿ ಅರ್ಹರು ಎಂದು ತಿಳಿಸಿದ್ದಾರೆ.


ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಏಪ್ರಿಲ್ 15 ರಂದು ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧ ನಡೆಯಲಿರುವ ಮಹತ್ವದ ಪಂದ್ಯದಲ್ಲಿ ಆಡುವುದು ಅನುಮಾನ ಎನ್ನಲಾಗಿದೆ. ಇದಕ್ಕೆ ಮುಖ್ಯ ಕಾರಣ ಕೊಹ್ಲಿ ತಂಡದಿಂದ ಹೊರಗುಳಿದಿರುವುದು.

ಏಪ್ರಿಲ್ 12 ರಂದು ನಡೆದ ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದ ವೇಳೆ ಬ್ಯಾಟಿಂಗ್ ಮಾಡುವಾಗ ವಿರಾಟ್ ಕೊಹ್ಲಿ ಕಾಲಿನ ಹಿಮ್ಮಡಿ ನೋವಿಗೆ ಒಳಗಾಗಿದ್ದರು. ಹೀಗಾಗಿ ಅವರು ಫೀಲ್ಡಿಂಗ್‌ಗೆ ಆಗಮಿಸಿರಲಿಲ್ಲ. ಇದಾಗ್ಯೂ ಕೊಹ್ಲಿ ಎಲ್‌ಎಸ್‌ಜಿ ವಿರುದ್ಧದ ಪಂದ್ಯದ ವೇಳೆ ಸಂಪೂರ್ಣ ಫಿಟ್ ಆಗಲಿದ್ದಾರೆ ಎನ್ನಲಾಗಿತ್ತು.

ಆದರೆ ಇತ್ತೀಚಿನ ಅಪ್‌ಡೇಟ್‌ಗಳ ಪ್ರಕಾರ, ವಿರಾಟ್ ಕೊಹ್ಲಿ ಅವರು ತಂಡದ ಸದಸ್ಯರೊಂದಿಗೆ ಪಂದ್ಯದ ಸ್ಥಳಕ್ಕೆ ಪ್ರಯಾಣಿಸಿಲ್ಲ. ಅಂದರೆ ಬೆಂಗಳೂರಿಗೆ ಆಗಮಿಸಿಲ್ಲ. ಬದಲಾಗಿ ಮುಂಬೈನಲ್ಲೇ ಉಳಿದುಕೊಂಡಿದ್ದು, ತಂಡದ ಫಿಸಿಯೋಗಳ ಮೇಲ್ವಿಚಾರಣೆಯಲ್ಲಿದ್ದಾರೆ ಎಂದು ತಿಳಿದುಬಂದಿದೆ.

ಹೀಗಾಗಿ ಏ.15 ನಡೆಯಲಿರುವ ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧದಲ್ಲಿ ವಿರಾಟ್ ಕೊಹ್ಲಿ ಕಣಕ್ಕಿಳಿಯುವುದು ಅನುಮಾನ ಎನ್ನಲಾಗುತ್ತಿದೆ. ಇತ್ತ ಕಿಂಗ್ ಕೊಹ್ಲಿ ಕಣಕ್ಕಿಳಿಯದಿದ್ದರೆ ಆರ್‌ಸಿಬಿ ತಂಡದ ಪ್ಲೇಯಿಂಗ್ ಇಲೆವೆನ್‌ನಲ್ಲಿ ಮಹತ್ವದ ಬದಲಾವಣೆಯಾಗುವುದು ಖಚಿತ ಎಂದೇ ಹೇಳಬಹುದು.

**ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ:** ರಜತ್ ಪಾಟಿದಾರ್ (ನಾಯಕ), ವಿರಾಟ್ ಕೊಹ್ಲಿ, ದೇವದತ್ ಪಡಿಕ್ಕಲ್, ಫಿಲ್ ಸಾಲ್ಟ್, ಜಿತೇಶ್ ಶರ್ಮಾ, ಕೃನಾಲ್ ಪಾಂಡ್ಯ, ಸ್ವಪ್ನಿಲ್ ಸಿಂಗ್, ಟಿಮ್ ಡೇವಿಡ್, ರೊಮಾರಿಯೊ ಶೆಫರ್ಡ್, ಜೇಕಬ್ ಬೆಥೆಲ್, ಜೋಶ್ ಹೇಝಲ್‌ವುಡ್, ಯಶ್ ದಯಾಲ್, ಭುವನೇಶ್ವರ್ ಕುಮಾರ್, ನುವಾನ್ ತುಷಾರ, ರಾಸಿಖ್ ಸಲಾಂ, ವೆಂಕಟೇಶ್ ಅಯ್ಯರ್, ಅಭಿನಂದನ್ ಸಿಂಗ್, ಸುಯಶ್ ಶರ್ಮಾ, ಜೇಕಬ್ ಡಫಿ, ಸಾತ್ವಿಕ್ ದೇಸ್ವಾಲ್, ಮಂಗೇಶ್ ಯಾದವ್, ಜೋರ್ಡನ್ ಕಾಕ್ಸ್, ವಿಕಿ ಓಸ್ತ್ವಾಲ್, ವಿಹಾನ್ ಮಲ್ಹೋತ್ರಾ, ಕಾನಿಷ್ಕ್ ಚೌಹಾನ್, ಯಶ್ ದಯಾಳ್ (ಅಲಭ್ಯ).



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966